Editor: S.Y.GURUSHANTH Publisher: G.N.NAGARAJ
RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 । ಸಂಚಿಕೆ–24 । ಜೂನ್ 9–15, 2025 । ಪುಟ 16 । ರೂ.10/–
Volume-19 । Issue-24 । June 9-15, 2025 । Pages:16 । Price: 10/-



## ಕ್ರಿಕೆಟ್ ವಿಜಯೋತ್ಸವ:





## ಕಾಲ್ತುಳಿತ-ಬಲಿಗೆ ಯಾರು ಹೊಣೆ?

## ಶಹಾಪುರ: ಕೃಷಿ ಪರಿಕರಗಳ ಮಾರಾಟಗಾರರ ವಂಚನೆ, ಕಾಳ ದಂಧೆ ಬಯಲು: ಪ್ರಶ್ನಿಸಿದ ರೈತ ಮುಖಂಡರ ಮೇಲೆ ದಬ್ಬಾಳಿಕೆ





## ಅಜ್ಜನ ಗ್ರಂಥಾಲಯದಲ್ಲಿ ಭಾವನಾತ್ಮಕ ಪಯಣ

## ಕನ್ನಡದಲ್ಲಿ ಪರಿಸರ ಸಾಹಿತ್ಯ

"ನನ್ನನ್ನು ನನ್ನ ಅಪ್ಪ ಅಮ್ಮ ಇಬ್ಬರೂ ತುಂಬಾ ಪ್ರೀತಿಸುತ್ತಾರೆ, ಆದರೆ ಅವರಿಬ್ಬರೂ ಯಾವಾಗಲೂ ಕಿತ್ತಾಡುತ್ತಾರೆ". ನಾಟಕದಲ್ಲಿನ ಈ ಮಾತುಗಳು ನಾವು ಬದುಕಿನಲ್ಲಿ ಕಳೆದುಕೊಂಡದ್ದನ್ನು ಮತ್ತೊಂದು ಕಡೆ ಹುಡುಕುವ ಮತ್ತು ಅದನ್ನು ಪಡೆಯುವ ಪ್ರಯತ್ನ ಮಾಡುತ್ತಿರುತ್ತೇವೆ. ಆದರೆ ಅದನ್ನು ಕಳೆದುಕೊಂಡ ಕಡೆ ಹುಡುಕುವ ಪ್ರಾಮಾಣಿಕ ಪ್ರಯತ್ನವನ್ನೇ ಮಾಡುವುದಿಲ್ಲ. ಇದೇ ಮನುಷ್ಯ ಸಹಜಗುಣವಾಗಿದ್ದು ನಿಜವಾದ ಪ್ರೀತಿಗೆ ಯಾವುದೇ ಅರ್ಥವಿಲ್ಲದಂತಾಗಿದೆ.

# ಪತ್ರಗಳ ಮೂಲಕ ಪ್ರೇಮಲೋಕ ಸೃಷ್ಟಿಸಿದ 'ಲವ್ ಲೆಟರ್ಸ್! ನಿನ್ನ ಪ್ರೀತಿಯ ನಾನು"



**ಎಚ್.ಆರ್. ನವೀನ್ ಕುಮಾರ್**, ಹಾಸನ

ಕರ್ನಾಟಕದಲ್ಲಿರುವ ರಂಗಮಂದಿರಗಳಲ್ಲೇ ಅತ್ಯಂತ ವಿಶಿಷ್ಟ ಮತ್ತು ಶಿಸ್ತುಬದ್ಧ ಸಮಯಪಾಲನೆ, ಅಷ್ಟೇ ಗಂಭೀರವಾದ ಪ್ರೇಕ್ಷಕರನ್ನು ಹೊಂದಿರುವ ರಂಗಶಂಕರದಲ್ಲಿ ನಾಟಕ ನೋಡುವುದೆಂದರೆ ಅದೊಂದು ರೀತಿಯ ರೋಮಾಂಚನ.

ಇಡೀ ಆವರಣ ಸಂಪೂರ್ಣ ಕತ್ತಲೆ ಆವರಿಸಿದಾಗ ರಂಗಮಂಚದ ಮೇಲೆ ಎರಡು ಮೇಜು ಮತ್ತು ಕುರ್ಚಿ ಅದರ ಮೇಲಿನ ಸ್ಪಾಟ್ ಲೈಟ್, ಹಿಂಭಾಗದಲ್ಲಿ ನವ ನಕ್ಷತ್ರಗಳು ಮಿನುಗುವಂತಹ ದೀಪಗಳು, ಒಂದೇ ಒಂದು ಬೆಡ್ ಕ್ಯಾಂಪ್, ಅತ್ಯಂತ ನಿಶ್ಯಬ್ದದಿಂದ ಆರಂಭವಾಗುವ "ಲವ್ ಲೆಟರ್ಸ್! ನಿನ್ನ ಪ್ರೀತಿಯ ನಾನು" ನಾಟಕ, ಕೇವಲ ಎರಡೇ ಪಾತ್ರಗಳು ತಮ್ಮಗಳ ಪತ್ರಗಳನ್ನು ಓದುವುದರ ಮೂಲಕ ಆರಂಭವಾಗಿ ಓದುತ್ತಲೇ ಮುಕ್ತಾಯವಾಗುತ್ತದೆ.

1ಗಂಟೆ 20 ನಿಮಿಷಗಳ ಕಾಲ ಸಿದ್ದು (ಸಿದ್ಧಾರ್ಥ್) ಆಗಿ ನಟ ಕಿಶೋರ್ ಮತ್ತು ರಶ್ಮಿಯಾಗಿ ನಟಿ ಸಿರಿ ರವಿಕುಮಾರ್ ಒಬ್ಬರಿಗೊಬ್ಬರು ಬರೆದ ಪತ್ರಗಳನ್ನು ಓದುತ್ತಾ ಹೋಗುತ್ತಾರೆ. ಇದರಲ್ಲಿ ಬಾಲ್ಯದಲ್ಲಿನ ಆ ಮಾತುಗಳು ಪ್ರೌಢಾವಸ್ಥೆಗೆ ಬಂದಾಗಿನ ಮಾತುಗಳು, ಜವಾಬ್ದಾರಿ ಸ್ಥಾನಕ್ಕೆ ಬಂದಾಗಿನ ಮಾತುಗಳು, ಮದುವೆಯಾದಾಗಿನ ಮಾತುಗಳು, ಸಂಕಷ್ಟದ ಸಮಯದ ಮಾತುಗಳು, ಸರಸದ ಮಾತುಗಳು, ಖುಷಿಯ ಸಮಯದ ಮಾತುಗಳು, ಅಂತಿಮ ವಿದಾಯದ ಮಾತುಗಳು, ಇವೆಲ್ಲವೂ ಪತ್ರದ ಮೂಲಕ ತೆರೆದುಕೊಳ್ಳುತ್ತಾ ನಮ್ಮನ್ನು ಆ ಕಲ್ಪನಾ ಪ್ರಪಂಚಕ್ಕೆ ಹೊತ್ತೊಯ್ಯುತ್ತವೆ. ಮಾತ್ರವಲ್ಲ ಇಬ್ಬರೂ ಕುರ್ಚಿಗಳ ಮೇಲೆ ಕುಳಿತಲ್ಲಿಯೇ ಪತ್ರಗಳನ್ನು ಓದಿದ ಶೈಲಿ, ಧ್ವನಿಯ ಮೂಲಕವೇ ಭಾವಗಳ ಏರಿಳಿತಗಳು ಮತ್ತು ಭಾವನೆಗಳನ್ನು ಧಾಟಿಸುವ ರೀತಿ, ಅವರ ಮುಖಭಾವ ಇದೇ ಎಲ್ಲರನ್ನು ಮಂತ್ರಮುಗ್ದರನ್ನಾಗಿಸುತ್ತದೆ.

ನಾಟಕಗಳ ಬಗ್ಗೆ ಇರುವ ಎಲ್ಲ ಸಿದ್ದಮಾದರಿಗಳನ್ನು ಮುರಿದು ಹೊಸದೊಂದನ್ನು ಕಟ್ಟುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ. ಅತ್ಯಂತ ಕಡಿಮೆ ರಂಗ ಪರಿಕರ, ಕೊನೆಯ ದೃಶ್ಯವೊಂದನ್ನು ಹೊರತುಪಡಿಸಿ ಚಲನೆಯೇ ಇಲ್ಲದೆ, ಕುಳಿತಲ್ಲಿಯೇ ಇಬ್ಬರ ಪತ್ರಗಳ ಆಂತರ್ಯವನ್ನು ಎಲ್ಲರ ಹೃದಯಗಳಿಗೆ ಧಾಟಿಸುವ ರೀತಿ ವಿಶೇಷವಾಗಿತ್ತು. ಒಂದೇ ಮಾತಲ್ಲಿ ಹೇಳುವುದಾದರೆ, ಪತ್ರಗಳ ಮೂಲಕ ಪ್ರೇಮಲೋಕ ಸೃಷ್ಟಿಸಿದ ನಾಟಕವಿದು. ಇಡೀ ನಾಟಕದಲ್ಲಿ ಪತ್ರಗಳ ಮೂಲಕ ಸೃಷ್ಟಿಯಾಗುವ ಪಾತ್ರಗಳು, ಸನ್ನಿವೇಶಗಳು ರಂಗದ ಮೇಲೆ ಬಂದಿದ್ದರೂ ನಮ್ಮ ನಮ್ಮ ಕಲ್ಪನೆಗೆ ತಕ್ಕಂತೆ ನಾವು ಕಟ್ಟಿಕೊಂಡ ದೃಶ್ಯಕಾವ್ಯಕ್ಕೆ ಸರಿಸಾಟಿಯಾಗಿರಲು ಸೋಲುತಿತ್ತೇನೋ ಎನಿಸುತ್ತದೆ.

ಬಾಲ್ಯದಿಂದ ಇಬ್ಬರು ಗೆಳೆಯರು ಪತ್ರಗಳ ಮೂಲಕ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾ.. ಬದುಕಿನ ಎಲ್ಲ ಘಟ್ಟಗಳನ್ನೂ ಪತ್ರಗಳ ಮೂಲಕವೇ ಸ್ಪಂದಿಸುತ್ತಾ... ಬೆಳೆಯುವ ಸಿದ್ದು ಮತ್ತು ರಶ್ಮಿ ಇಬ್ಬರೂ ವಿಭಿನ್ನ ಆಲೋಚನೆಯವರಾಗಿದ್ದರೂ, ಹಲವು ಕಾರಣಗಳಿಗಾಗಿ ಒಳ್ಳೆಯ ಸ್ನೇಹಿತರಾಗಿರುತ್ತಾರೆ. ಸ್ನೇಹದ ಆಚೆಗೆ ಅವರಿಬ್ಬರ ನಡುವೆ ಒಂದು ಬಾಂಧವ್ಯ ಬೆಳೆಯುತ್ತದೆ. ಆದರೆ ಅವರು ಅವರವರದ್ದೇ ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ಹೆಜ್ಜೆ ಇಡುತ್ತಿರುವಾಗಲೂ ಪರಸ್ಪರ ಒಬ್ಬರಿಗೊಬ್ಬರೂ ಪ್ರೋತ್ಸಾಹದಾಯಕವಾಗಿಯೂ ನಡೆದುಕೊಳ್ಳುತ್ತಾರೆ.

ವಯೋಸಹಜ ಚಂಚಲತೆ, ರಶ್ಮಿಗೆ ಚಿತ್ರಕಲೆಯಲ್ಲಿ ಆಸಕ್ತಿ, ಆತನಿಗೆ ಕ್ರೀಡೆಯಲ್ಲಿ ಆಸಕ್ತಿ, ಆದರೆ ಇವರಿಬ್ಬರೂ ಒಬ್ಬರ ಆಸಕ್ತಿಯನ್ನು ಮತ್ತೊಬ್ಬರು ವಿರೋಧಾಭಾಸದಿಂದ ನೋಡದೇ, ಅದನ್ನು ಗೌರವಿಸುತ್ತಾ ಸ್ನೇಹವನ್ನು ಮುಂದುವರೆಸುತ್ತಾರೆ. ರಶ್ಮಿ ತನ್ನ ಮನೆಯಲ್ಲಿನ ಸಾಂಸಾರಿಕ ಜಂಜಾಟದಿಂದ ಬೇಸತ್ತು, ಅಪ್ಪ ಅಮ್ಮನಿಂದ ಸಿಗದ ಪ್ರೀತಿ ನೆಮ್ಮದಿಯನ್ನು ಸ್ನೇಹಿತ ಸಿದ್ದುವಿನಲ್ಲಿ, ಅವನ ಮಾತುಗಳು ಮತ್ತು ಕಾಳಜಿಯಲ್ಲಿ ಕಾಣುತ್ತಿರುತ್ತಾಳೆ.



ತಮ್ಮ ಭಾವನೆಗಳಿಗೆ ಪೂರಕವಾಗಿ ಒಬ್ಬರನ್ನೊಬ್ಬರು ಇಷ್ಟಪಡುತ್ತಿದ್ದರೂ ಅದನ್ನೇ ಬದುಕಾಗಿಸಿಕೊಳ್ಳುವ ಧೈರ್ಯಮಾಡದೇ, ಆ ನಂತರ ಪರಸ್ಪರರು ಅಗಲಿ ಬೇರೆಯಾಗಿಯೂ ಇರಲಾಗದೆ, ನಿನಗೆ ನಾನು, ನನಗೆ ನೀನು ಎಂಬಂತಿದ್ದೂ ಇಬ್ಬರೂ ಪ್ರತ್ಯೇಕ ಬದುಕನ್ನು ಕಟ್ಟಿಕೊಂಡು, ಅಲ್ಲಿ ಸಂತೋಷವಾಗಿದ್ದಂತಿದ್ದು, ಇಲ್ಲಿ ನೆಮ್ಮದಿ ಹುಡುಕುವ ತೊಳಲಾಟಗಳನ್ನು ನಾಟಕದಲ್ಲಿ ಅದ್ಭುತವಾಗಿ ಹಿಡಿದಿಡಲಾಗಿದೆ.

ಬದುಕಿನ ಎಲ್ಲಾ ಜಂಜಾಟಗಳಾಚೆಗೂ, ಪ್ರೀತಿಸಿದವರು ಪರಸ್ಪರ ಒಟ್ಟಿಗಿರಲು ಇಂದಿನ ಪಟ್ಟಭದ್ರ ಹಿತಾಸಕ್ತಿಗಳನ್ನೊಳಗೊಂಡ ಸಮಾಜ ಇಬ್ಬರ ಪ್ರೀತಿಯನ್ನು ಹೇಗೆ ಅರ್ಥೈಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಹೆಣೆಯಲಾಗಿದೆ.

"ನನ್ನನ್ನು ನನ್ನ ಅಪ್ಪ ಅಮ್ಮ ಇಬ್ಬರೂ ತುಂಬಾ ಪ್ರೀತಿಸುತ್ತಾರೆ, ಆದರೆ ಅವರಿಬ್ಬರೂ ಯಾವಾಗಲೂ ಕಿತ್ತಾಡುತ್ತಾರೆ". ಈ ಮಾತುಗಳು ನಾವು ಬದುಕಿನಲ್ಲಿ ಕಳೆದುಕೊಂಡದ್ದನ್ನು ಮತ್ತೊಂದು ಕಡೆ ಹುಡುಕುವ ಮತ್ತು ಅದನ್ನು ಪಡೆಯುವ ಪ್ರಯತ್ನ ಮಾಡುತ್ತಿರುತ್ತೇವೆ. ಆದರೆ ಅದನ್ನು ಕಳೆದುಕೊಂಡ ಕಡೆ ಹುಡುಕುವ ಪ್ರಾಮಾಣಿಕ ಪ್ರಯತ್ನವನ್ನೇ ಮಾಡುವುದಿಲ್ಲ. ಇದೇ ಮನುಷ್ಯ ಸಹಜಗುಣವಾಗಿದ್ದು ನಿಜವಾದ ಪ್ರೀತಿಗೆ ಯಾವುದೇ ಅರ್ಥವಿಲ್ಲದಂತಾಗಿದೆ.

ಆಧುನಿಕತೆ ಬೆಳೆಯುತ್ತಿದ್ದರೂ, ಇಬ್ಬರೂ ಉನ್ನತ ಸ್ಥಾನಗಳಿಗೆ ಹೋಗಿದ್ದರೂ, ಆರ್ಥಿಕವಾಗಿ ಸಶಕ್ತವಾಗಿದ್ದರೂ, ಇವರಿಬ್ಬರ ಭಾವನೆಗಳ ನಡುವಿನ ಸೇತುವೆಯಾಗುವ ಸಾಮರ್ಥ್ಯ ಇದ್ದದ್ದು ಪತ್ರಗಳಿಗೆ ಮಾತ್ರ. ಬರೆದ ಪತ್ರಗಳನ್ನು ಇಬ್ಬರೂ ಪರಸ್ಪರರು ಓದುತ್ತಾ ಅವರದೇ ಪ್ರೇಮ ಲೋಕದಲ್ಲಿ ಕಳೆದುಹೋಗುತ್ತಿದ್ದರು. ಒಬ್ಬ ವ್ಯಕ್ತಿಯ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನಗಳು ಹೇಗೆ ಒಬ್ಬ ವ್ಯಕ್ತಿಯ ವೈಯಕ್ತಿಕ ವಿಚಾರಗಳನ್ನು ನಿರ್ಧರಿಸುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಹೇಳಲು ಪ್ರಯತ್ನಿಸಲಾಗಿದೆ.

ನಿಜಜೀವನದಲ್ಲಿ ಬಹುತೇಕರಿಗೆ ಅದರಲ್ಲೂ ಪತ್ರ ವ್ಯವಹಾರಗಳನ್ನು ಹೊಂದಿದ್ದವರಿಗೆ ಈ ಅನುಭವ ಖಂಡಿತಾ ಇರುತ್ತದೆ. ಪತ್ರಗಳನ್ನು ಓದುವಾಗ ಭಾವನೆಗಳು ಉದ್ರೇಕವಾದಂತೆ, ಮತ್ತು ಹೊಸ ಹೊಸ ರೂಪ, ಆಯಾಮಗಳನ್ನು ಪಡೆದಂತೆ ದೂರವಾಣಿ, ಈ ಮೈಲ್, ಮೆಸೇಜ್ ಮುಂದುವರೆದು ಪರಸ್ಪರ ಭೇಟಿಯಾದಾಗಲೂ, ಅದು ಪತ್ರ ಓದುವಾಗಿನ ಬೆಚ್ಚನೆಯ ಅನುಭವವನ್ನು ನೀಡುವುದಿಲ್ಲ.

ಒಟ್ಟಾರೆ ನಾಟಕ ಒಂದು ವಿಭಿನ್ನ ಅನುಭವ. ಎ.ಆರ್. ಗರ್ನಿಯವರ ಮೂಲ ಬರಹವನ್ನು ವೆಂಕಟೇಶ್ ಪ್ರಸಾದ್ ಅಚ್ಚುಕಟ್ಟಾಗಿ ರೂಪಾಂತರಿಸಿ ನಿರ್ದೇಶಿಸಿದ್ದಾರೆ. ಈ ಹಿಂದೆ ಇವರು ನಿರ್ದೇಶಿಸಿದ್ದ 'ಕಾಕದೋಷ' ನಾಟಕವೂ ಬಹಳ ಸದ್ದು ಮಾಡಿತ್ತು. ಅತ್ಯಂತ ಅನುಭವಿ ನಟ ಕಿಶೋರ್ ಕುಮಾರ್ ಮತ್ತು ಸಿರಿ ರವಿಕುಮಾರ್ ಧ್ವನಿಗಳ ಏರಿಳಿತ, ಮುಖಭಾವನೆಗಳಲ್ಲೇ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಬೆಂಗಳೂರು ಥಿಯೇಟರ್ ಕಲೆಕ್ಟಿವ್ ನಾಟಕವನ್ನು ಅಚ್ಚುಕಟ್ಟಾಗಿ ನಿರ್ಮಾಣ ಮಾಡಿದೆ.

# ಸ್ಟಾರ್‌ಲಿಂಕ್‌ನ ಕಾರ್ಯಾಚರಣೆಗಳಿಗೆ ಅವಕಾಶ ದೇಶದ ಹಿತಾಸಕ್ತಿಗಳಿಗೆ ಹಾನಿಕಾರಕ ಸರ್ಕಾರವು ತನ್ನ ನಿರ್ಧಾರವನ್ನು ತಕ್ಷಣವೇ ರದ್ದುಗೊಳಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತ ಸರ್ಕಾರವು ಎಲೋನ್ ಮಸ್ಕ್ ಅವರ ಸ್ಟಾರ್‌ಲಿಂಕ್‌ಗೆ ಭಾರತದಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಅನುಮತಿ ನೀಡಿರುವುದನ್ನು ಸಿಪಿಐ(ಎಂ) ವಿರೋಧಿಸಿದೆ.

ಸ್ಟಾರ್‌ಲಿಂಕ್‌ಗೆ ನಮ್ಮ ದೇಶದಲ್ಲಿ ಕಾರ್ಯನಿರ್ವಹಿಸಲು ಅನುಮತಿ ನೀಡಿದ ಸಂಪೂರ್ಣ ಪ್ರಕ್ರಿಯೆಯಲ್ಲಿ ಯಾವುದೇ ಪಾರದರ್ಶಕತೆ ಇಲ್ಲ. ಸ್ಟಾರ್‌ಲಿಂಕ್ ಒಂದು ವಿದೇಶಿ ಕಾರ್ಪೊರೇಷನ್ ಆಗಿದ್ದು, ಭಾರತದ ನಿರ್ಣಾಯಕ ಮೂಲರಚನೆಯನ್ನು ವಿದೇಶಿ ಕೈಗಳಿಗೆ ವರ್ಗಾಯಿಸುವುದು ಗಂಭೀರ ಭದ್ರತಾ ಪರಿಣಾಮಗಳನ್ನು ಉಂಟುಮಾಡುತ್ತದೆ. ಇದು ನಮ್ಮ ದೂರಸಂಪರ್ಕ ವ್ಯವಸ್ಥೆಯ ಒಳಕ್ಕೆ ಮತ್ತು ನಮ್ಮ ಆಯಕಟ್ಟಿನ ಸಂವಹನಗಳ ಒಳಕ್ಕೆ ಕೂಡ ಯುಎಸ್ ಏಜೆನ್ಸಿಗಳಿಗೆ ಹಿಂಬಾಗಿಲನ್ನು ಒದಗಿಸುತ್ತದೆ.

ಸ್ಟಾರ್‌ಲಿಂಕ್‌ಗೆ ಒಮ್ಮೆ ಹಂಚಿಕೆಯಾದ ಉಪಗ್ರಹ ತಾಣಗಳ ಸಂಖ್ಯೆಯನ್ನು, ವಿಶೇಷವಾಗಿ ಕೆಳಗಣ ಭೂ ಕಕ್ಷೆಯ ತಾಣಗಳನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ. ಇದು ನಮ್ಮ ವಿರಳ ಬಾಹ್ಯಾಕಾಶ ಸಂಪನ್ಮೂಲಗಳನ್ನು ವಿದೇಶಿ ಸಂಸ್ಥೆಗಳಿಗೆ ಬಿಟ್ಟುಕೊಡುತ್ತಿದೆ, ಈ ಪ್ರಕ್ರಿಯೆಯಲ್ಲಿ ನಮ್ಮ ದೇಶದ ಹಿತಾಸಕ್ತಿಗಳನ್ನು ಬಲಿಕೊಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನಮ್ಮ ದೇಶದ ಸ್ವಾವಲಂಬಿ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ನಿಜವಾಗಿಯೂ ಆಸಕ್ತಿ ಹೊಂದಿದ್ದರೆ, ಅದು ಇಸ್ರೋ ಸೇವೆಗಳನ್ನು ಬಳಸಬಹುದಿತ್ತು. ಭಾರತ, ವಿಶೇಷವಾಗಿ ದೂರಸಂಪರ್ಕ ಇಲಾಖೆ (**DoT**), ಸಿ–ಡಾಟ್ (C-DOT) ಉಪಗ್ರಹ ಸಂವಹನ ವಲಯಕ್ಕೆ ಅಗತ್ಯವಾದ ಉಪಕರಣಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿವೆ. ಈ ಕ್ರಮಗಳು ಭಾರತೀಯ ಸಾರ್ವಜನಿಕ ವಲಯವನ್ನು ಬಲಪಡಿಸುತ್ತಿದ್ದವು ಮತ್ತು ನಮ್ಮ ಭದ್ರತೆ ಮತ್ತು ಡಿಜಿಟಲ್ ಸಾರ್ವಭೌಮತ್ವವನ್ನು ಸಹ ರಕ್ಷಿಸುತ್ತಿದ್ದವು.

ಇಡೀ ಒಪ್ಪಂದವನ್ನು ನಿಗೂಢತೆ ಆವರಿಸಿಕೊಂಡಿದೆ. ಭಾರತದ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ(TRAI) ಕೇವಲ 4ಶೇ.ದಷ್ಟು ಸ್ಪೆಕ್ಟ್ರಮ್ ಬಳಕೆಯ ಶುಲ್ಕವನ್ನು ವಿಧಿಸುತ್ತಿದೆ ಮತ್ತು ಯಾವುದೇ ಮುಂಗಡ ಶುಲ್ಕವನ್ನು ಸಂಗ್ರಹಿಸುತ್ತಿಲ್ಲ ಎಂದು ವರದಿಯಾಗಿದೆ. ಇದು ನಮ್ಮ ಖಜಾನೆಗೆ ಭಾರಿ ನಷ್ಟವನ್ನುಂಟುಮಾಡುತ್ತದೆ ಮತ್ತು ನಮ್ಮ ಹಿತಾಸಕ್ತಿಗಳಿಗೆ ಹಾನಿಕಾರಕವಾಗಿದೆ. ಭಾರತೀಯ ಬಾಹ್ಯಾಕಾಶ ನಿಯಂತ್ರಕ, ಇನ್–ಸ್ಪೇಸ್‌ನಿಂದ ಅನುಮತಿಯ ಸ್ಥಿತಿ ಮತ್ತು ವಿವರಗಳನ್ನು ಸಹ ಇನ್ನೂ ಬಹಿರಂಗಪಡಿಸಲಾಗಿಲ್ಲ.

ಸ್ಟಾರ್‌ಲಿಂಕ್‌ನ ಪ್ರವೇಶ ಮತ್ತು ಅಂಬಾನಿಯವರ ರಿಲಯನ್ಸ್ ಜಿಯೋ ಮತ್ತು ಮಿತ್ತಲ್ ಅವರ ಭಾರತಿ ಏರ್‌ಟೆಲ್‌ನೊಂದಿಗಿನ ಅದರ ಪಾಲುದಾರಿಕೆಯು ಒಂದು ವರ್ಚುವಲ್ ಉಭಯತ್ರರ ಪ್ರಾಬಲ್ಯವನ್ನು ಸೃಷ್ಟಿಸಲಿದೆ, ಇದರಿಂದಾಗಿ ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್ ಸ್ಪರ್ಧಿಸುವುದು ತುಂಬಾ ಕಷ್ಟಕರವಾಗುತ್ತದೆ. ಇದು ದೇಶದ ಬಹುತೇಕ ಎಲ್ಲಾ ಭಾಗಗಳಿಗೆ ಅಗ್ಗದ ದೂರಸಂಪರ್ಕ ಮತ್ತು ಇಂಟರ್ನೆಟ್ ಸೇವೆಗಳನ್ನು ಒದಗಿಸುವ ಬಿಎಸ್‌ಎನ್‌ಎಲ್‌ನ್ನು ಮುಗಿಸಲು ಸರ್ಕಾರದ ಮತ್ತೊಂದು ಪ್ರಯತ್ನವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ಟಾರ್‌ಲಿಂಕ್‌ನ ಕಾರ್ಯಾಚರಣೆಗಳಿಗೆ ಅವಕಾಶ ನೀಡುವುದರಿಂದ ದೀರ್ಘಾವಧಿಯಲ್ಲಿ ದೇಶದ ಹಿತಾಸಕ್ತಿಗಳಿಗೆ ಹಾನಿಯಾಗಲಿದೆ, ಸರ್ಕಾರವು ತನ್ನ ನಿರ್ಧಾರವನ್ನು ತಕ್ಷಣವೇ ರದ್ದುಗೊಳಿಸಬೇಕೆಂದು ಆಗ್ರಹಪಡಿಸಿದೆ.

# ಕಮಲ್ ಹಾಸನ್ ಹೇಳಿಕೆ: ಎಲ್ಲರೂ ತೋರಬೇಕಾದ ವರ್ತಮಾನದ ಹೊಣೆಗಾರಿಕೆ


**'ಥಗ್ ಲೈಫ್' ಸಿನಿಮಾ ಕುರಿತ ಪ್ರಚಾರದ ಕಾರ್ಯಕ್ರಮದಲ್ಲಿ ಕಮಲ್ ಹಾಸನ್ ಆಡಿದ ಮಾತು ವಿವಾದ ಮತ್ತು ಪ್ರತಿಭಟನೆಯ ಕಿಚ್ಚನ್ನು ಹೊತ್ತಿಸಿದೆ. ವ್ಯಕ್ತಿಗತ ಅಭಿಪ್ರಾಯಗಳನ್ನು ಹೊಂದಲು ಅವಕಾಶ ಇದೆಯಾದರೂ ಅದು ಬೀರುವ ಸಾಮಾಜಿಕ, ಸಾರ್ವಜನಿಕ ಪರಿಣಾಮಗಳ ಬಗ್ಗೆ ಯೋಚಿಸುವ ಹೊಣೆಗಾರಿಕೆ ಇರಬೇಕಲ್ಲವೇ? ಹಾಗೆ ಪ್ರತಿಭಟಿಸುವವರು ಇದರಿಂದ ಹೊರತಾಗಬಹುದೇ**

ಈ ವಾರ

**ಎಸ್.ವೈ.ಗುರುಶಾಂತ್**

ಖ್ಯಾತ ಹಿರಿಯ ನಟ ಕಮಲ್ ಹಾಸನ್ ರವರು ತಾವು ನಟಿಸಿದ 'ಥಗ್ ಲೈಫ್' ಸಿನಿಮಾದ ಟೀಜರ್ ಬಿಡುಗಡೆಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಕನ್ನಡದ ಪ್ರಖ್ಯಾತ ನಟ ಶಿವರಾಜ್ ಕುಮಾರ್ ಅವರನ್ನು ಸ್ವಾಗತಿಸುತ್ತಾ ಆಡಿದ ಒಂದು ಮಾತು ಕರ್ನಾಟಕದಲ್ಲಿ ವಿವಾದದ ಮತ್ತು ವಿರೋಧದ ಕಿಡಿ ಹೊತ್ತಿಸಿದೆ. ರಾಜಧಾನಿಯಲ್ಲೂ, ಜಿಲ್ಲೆಗಳಲ್ಲಿಯೂ ನಡೆದ ಪ್ರತಿಭಟನೆಗಳು ಕಮಲ ಹಾಸನ್ ಹೇಳಿಕೆ ಹಿಂಪಡೆಯಬೇಕು ಮತ್ತು ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿವೆ. ಸಾಹಿತ್ಯ ವಲಯದಿಂದ ಆರಂಭಗೊಂಡು ರಾಜಕೀಯ ಕ್ಷೇತ್ರದಲ್ಲೂ ತೀವ್ರ ಟೀಕೆಗಳು ವ್ಯಕ್ತವಾಗಿವೆ. ಆಡಿದ ಮಾತಿಗೆ ಕ್ಷಮೆ ಯಾಚಿಸದಿದ್ದಲ್ಲಿ 'ಥಗ್ ಲೈಫ್' ಸಿನಿಮಾ ಬಿಡುಗಡೆಗೆ ಅವಕಾಶ ಸಾಧ್ಯವಿಲ್ಲ ಎಂದು ಕರ್ನಾಟಕ ಚಲನಚಿತ್ರ ಮಂಡಳಿ ನಿರ್ಧಾರ ತೆಗೆದುಕೊಂಡಿದೆ. ಕಮಲ್ ಮತ್ತು ಸಿನಿಮಾ ನಿರ್ದೇಶಕರ ಪರ ಹೈಕೋರ್ಟ್ ಮೆಟ್ಟಿಲೇರಿಯೂ ಆಗಿದೆ, ಭಾಷೆಯಂತಹ ವಿಷಯಗಳ ಬಗ್ಗೆ ಮಾತನಾಡುವಾಗ ಎಚ್ಚರ ಇರಬೇಕು, ಜನರ ಭಾವನಾತ್ಮಕತೆಯನ್ನು ಕೆಣಕದಂತೆ ಮತ್ತು ಭಾವನೆಗಳಿಗೆ ಬೆಲೆ ನೀಡಬೇಕು ಎಂದಿರುವ ನ್ಯಾಯಾಲಯ, ಕಮಲ್ ಆಡಿದ ಮಾತುಗಳಿಗೆ ಕ್ಷಮೆ ಕೋರಲೂ ಸೂಚಿಸಿದೆ.

ಆದರೆ ಕಮಲ್ ಹಾಸನ್ ರವರು ಅದಕ್ಕೆ ಒಪ್ಪದಿರುವುದರಿಂದ ಇನ್ನೂ ವಿಚಾರಣೆ, ಮಾತುಕತೆಗಳ ಪ್ರಕ್ರಿಯೆಗಳು ನಡೆಯುತ್ತಿವೆ. ಕನ್ನಡ ಭಾಷೆಯ ಹುಟ್ಟಿನ ಬಗ್ಗೆ ಮಾತನಾಡಿರುವ ಕಮಲ ಹಾಸನ್ ರವರು ಇತಿಹಾಸಕಾರರೇ, ಭಾಷಾ ತಜ್ಞರೇ ಎಂದು ಪ್ರಶ್ನಿಸಿರುವ ನ್ಯಾಯಾಲಯದ ದಾಟಿಯಲ್ಲಿ ತಮ್ಮನ್ನು ಟೀಕಿಸಿರುವ ರಾಜಕೀಯ ಪಕ್ಷದ ನಾಯಕರಿಗೂ ಕಮಲ ಹಾಸನ್ ರವರು ಅದೇ ರೀತಿ ಪ್ರಶ್ನೆ ಮಾಡಿದ್ದಾರೆ. ಅದು ಉಭಯತ್ರರಿಗೂ ಅನ್ವಯ ಆಗುವಂತಹುದೇ. ಇಲ್ಲಿ ಒಂದು ಅಂಶ ಸ್ಪಷ್ಟ. ಕನ್ನಡವೇ ಆಗಲಿ ಅಥವಾ ತಮಿಳು ಆಗಿರಲಿ ಅದರ ಹುಟ್ಟಿನ ಮೂಲದ ಬಗ್ಗೆ ಅಧಿಕೃತ ಸಾಕ್ಷಾಧಾರಗಳನ್ನು ಇರಿಸಿಕೊಂಡು ವಿಶ್ಲೇಷಿಸಿ ಒಂದು ಅಭಿಪ್ರಾಯ ಕೊಡುವಂತಹ ಸ್ಥಿತಿಗತಿಯಲ್ಲಿ ಇವರು ಯಾರೂ ಇಲ್ಲ ಎಂಬುದು. ಮೇಲಾಗಿ, ಈ ವಿಷಯದ ಬಗ್ಗೆ ಇದೇ ಅಂತಿಮ ಸತ್ಯ ಎನ್ನುವ ಸ್ಥಿತಿಯಂತೂ ಇಲ್ಲವೇ ಇಲ್ಲ. ಅದಿನ್ನೂ ಸಂಶೋಧನೆಯ ಸಂವಾದದ ವಿಷಯವಾಗಿ ಚಿಂತನ–ಮಥನದ ಹಂತದಲ್ಲಿ ಇರುವಂತಹದು. ಭಾಷೆಯ ಹುಟ್ಟಿನ ಬಗ್ಗೆ ಇರುವ ಬಹುತೇಕ ಅಭಿಪ್ರಾಯಗಳು ಅವರವರ ಭಾಷೆಯ ಮೇಲಿನ ಪ್ರೇಮ ಆಧಾರಿತ ಭಾವನಾತ್ಮಕವಾದ ಸ್ವರೂಪದಲ್ಲಿ ಇರುವುದನ್ನು ಅನೇಕರು ಎತ್ತಿ ತೋರಿಸಿದ್ದಾರೆ. ಲಿಪಿಗಳ ವಿಕಾಸವನ್ನು ಆಧರಿಸಿಯೇ ಭಾಷೆಯ ಹುಟ್ಟನ್ನು ನಿರ್ಧರಿಸಿಲು ಸಾಧ್ಯವೂ ಇಲ್ಲ. ಅವು ಬೇರೆ ಬೇರೆ.




**ಅನಾರೋಗ್ಯಕರ**

ಅಂದಿನ ಸಮಾರಂಭದಲ್ಲಿ ರಾಜ್ ಕುಟುಂಬ ಮತ್ತು ಶಿವರಾಜ್ ಅವರ ಜೊತೆಗಿನ ಸಂಬಂಧಗಳು, ಕರ್ನಾಟಕದ ಹಾಗೂ ಭಾಷಾ ನಂಟುಗಳ ಮಹತ್ವವನ್ನು ಪ್ರಸ್ತಾಪಿಸುತ್ತಾ ಕಮಲ್ ಹಾಸನ್ 'ಕನ್ನಡವು ತಮಿಳಿನಿಂದ ಹುಟ್ಟಿದೆ' ಎಂದು ಆಡಿದ ಆ ಒಂದು ಮಾತು ತೀವ್ರ ಆಕ್ಷೇಪ, ವಿರೋಧ, ವಿವಾದವನ್ನು ಹುಟ್ಟಿಸಿದೆ.

ಸಂಘಟನೆಗಳ ಸತತ ಆಗ್ರಹ, ಮಾಧ್ಯಮಗಳ ತಿದಿಯೊದುವಿಕೆ, ಇಂತಹ ಸನ್ನಿವೇಶಕ್ಕೆ ಕಾದಿದ್ದರೋ ಎಂಬಂತೆ ಹಾರಿ ಬಿದ್ದ ಬಿಜೆಪಿಯಂತಹ ರಾಜಕೀಯ ಪಕ್ಷದ ಸಂದರ್ಭ ಸಾಧಕ ಅರ್ಭಟ, ಸುಮ್ಮನಿರಲಾಗದು ಎಂದು ಕನ್ನಡ ಪರರ ಜೊತೆ ದನಿಗೂಡಿಸಿದ ಕಾಂಗ್ರೆಸ್, ತನ್ನದೇ ದಾಟಿಯಲ್ಲಿ ಕಮಲ್ ಹೇಳಿಕೆ ಆಕ್ಷೇಪಿಸಿದ ಮುಖ್ಯಮಂತ್ರಿ, ಅನುಸರಿಸಿದ ಸಚಿವರು ಇವೆಲ್ಲಾ ರಾಜ್ಯದಲ್ಲಿ ವಾತಾವರಣವನ್ನು ಬಿಸಿಯೇರಿಸಿದವು. ಒಬ್ಬ ನಟನ 'ಬೀಸು' ಅಭಿಪ್ರಾಯಗಳಿಗೆ ಎಷ್ಟು ಬೆಲೆ ಕೊಡಬೇಕು, ಎಷ್ಟು ಒತ್ತು ನೀಡಬೇಕು ಎನ್ನುವುದರತ್ತ ಅಥವಾ ಪರಿಗಣಿಸುವ ಇಲ್ಲವೇ ತಿರಸ್ಕರಿಸುವ ಕಡೆಗೆ ಅಷ್ಟಾಗಿ ಯೋಚಿಸದೆ ಈ ಪ್ರಶ್ನೆಯನ್ನು ವಿಪರೀತಕ್ಕೆ ಎಳೆಸಿದ್ದು ಸೂಕ್ತವಲ್ಲ. ಕಮಲ್ ಹಾಸನ್ ಹೇಳಿಕೆಯ ಸಾಂದರ್ಭಿಕತೆಯನ್ನು ಲಕ್ಷಿಸುತ್ತಲೇ ಆ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ ಎನ್ನುವುದನ್ನು ಖಚಿತವಾಗಿ ಹೇಳಿ ನಿರಾಕರಿಸಿ ಆಕ್ಷೇಪ ದಾಖಲಿಸಿದ್ದರೆ ಸಾಕಾಗಿತ್ತು. ಯಾವುದೇ ಗಟ್ಟಿ ಆಧಾರವೇ ಇಲ್ಲದ ಒಬ್ಬರ ಹೇಳಿಕೆಯನ್ನು ವಿಪರೀತಕ್ಕೆ ಎಳಸಿ ಕನ್ನಡ ವರ್ಸಸ್ ತಮಿಳು ಎನ್ನುವಂತೆ ಬೆಳೆಸಿದ್ದು ಅನಾರೋಗ್ಯಕರ.

ಕಮಲ್ ಹಾಸನ್ ರವರು ತನ್ನ ಅಭಿಪ್ರಾಯಕ್ಕೆ ಸಮರ್ಥ ಕಾರಣ, ಸಾಕ್ಷಿಗಳನ್ನು ಕೊಡಲು ಆಗಲೇ ಇಲ್ಲ. ಮೇಲಾಗಿ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿ, ಅನುಭವದ ಮಿತಿಯ ಪರಿವೇ ಇಲ್ಲದೆ ಆಡಿದ ಮಾತುಗಳು ಅವಾಗಿದ್ದವು. ಹಾಗಿರುವಾಗ ತಮ್ಮ ಹೇಳಿಕೆಗೆ ಆಧಾರ ಏನು ಎನ್ನುವುದನ್ನು ತಿಳಿಸಿ ಅದು ಕೇವಲ ಅಭಿಪ್ರಾಯವೇ ಹೊರತು ಅಂತಿಮ ಸತ್ಯ ಅಲ್ಲ, ಈ ಬಗೆಗೆ ಇರುವ ಆಕ್ಷೇಪಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದಾಗಿ ಇನ್ನಷ್ಟು ಹೆಚ್ಚು ವಾಸ್ತವಗಳನ್ನು ಅರಿಯಲು ಪ್ರಯತ್ನಿಸುವುದಾಗಿ ಕಮಲ್ ಹಾಸನ್ ಹೇಳಿದ್ದರೆ ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಘನತೆ ಬರುತ್ತಿತ್ತು. ಆದರೆ ಹಾಗೆ ಮಾಡದೇ ಹೋದದ್ದು ಎನ್ನಬೇಕೋ ತಿಳಿಯದು. ಆದರೆ ಅವರು ಒದಗಿದ ಸಂದರ್ಭವನ್ನು ಬಳಸಿ ತಮಿಳು ಭಾಷೆಗೆ ಇರುವ ಅಂಥ ಬದ್ಧತೆಯನ್ನು ಸಾರಬೇಕು ಎಂಬ ಜನಪ್ರಿಯತೆಯ ಸೆಳವಿಗೆ ಬಿದ್ದರೋ ಎಂಬ ಅನುಮಾನ ಕಾಡುತ್ತದೆ.

**ಇರಬೇಕಾದ ಹೊಣೆಗಾರಿಕೆ**

ಕನ್ನಡವು ತಮಿಳಿಂದ ಹುಟ್ಟಿದೆ ಎನ್ನುವ ಅಭಿಪ್ರಾಯ ಅದರ ಸತ್ಯಾಸತ್ಯತೆಯನ್ನು ನಿಷ್ಕರ್ಷ ಮಾಡಬೇಕಾದವರು ಆ ಕ್ಷೇತ್ರದಲ್ಲಿನ ಪರಿಣಿತರು, ತಜ್ಞರು. ಕಮಲ್ ಹಾಸನರಿಗೆ ಅಂತಹ ಆಧಾರಗಳಿದ್ದಲ್ಲಿ ಅದನ್ನು ಸಾರ್ವಜನಿಕ ಅಥವಾ ಪ್ರಾಜ್ಞರ ನಿಷ್ಕರ್ಷಕ್ಕೆ ಒಳಪಡಿಸಬೇಕಿತ್ತು. ಇಂತಹ ವಿಷಯಗಳ ಚರ್ಚೆಗಳು ನಡೆಯಬೇಕಾದುದು ಸಿನಿಮಾ ಪ್ರಮೋಷನ್ ನ ಸಾರ್ವಜನಿಕ ವೇದಿಕೆಗಳಲ್ಲಿ ಬೇಕಾಬಿಟ್ಟಿಯಾಗಿಯೋ, ಹಗುರವಾಗಿ ತೇಲಿಸುವ ಮಾತುಗಳಾಗಿ ಅಲ್ಲ. ಅಂತಹ ಪರಿಣಿತರ ನಡುವೆ ಸಂಶೋಧನಾತ್ಮಕವಾಗಿ ಮಂಡಿಸಿ ಚರ್ಚೆಗಳು ನಡೆಯುವುದು ಸೂಕ್ತವಾದುದು. ಆದರೆ ಅಂತಹ ವಿಷಯಗಳನ್ನು ಸಾರ್ವಜನಿಕವಾಗಿ ಗೊಂದಲಗೊಳಿಸುವುದು ಯಾರಿಗೂ ಸೂಕ್ತವಾದದ್ದಲ್ಲ. ಯಾರೇ ಆಗಲಿ ಭಾಷೆಯಂತಹ ಭಾವನಾತ್ಮಕ ಮತ್ತು ಬದುಕಿನೊಂದಿಗೆ ನೇರ ನಿಕಟ ಸಂಬಂಧ ಹೊಂದಿರುವ ಪ್ರಶ್ನೆಯ ಬಗ್ಗೆ ಹೇಳಿಕೆ ನೀಡುವಾಗ ಇನ್ನಷ್ಟು ಎಚ್ಚರ ಮತ್ತು ವರ್ತಮಾನದ ಹೊಣೆಗಾರಿಕೆಯನ್ನು ಹೊಂದಿರಬೇಕಾಗುತ್ತದೆ.

ಈ ವಿವಾದ ಎರಡು ಸಹೋದರಿ ಭಾಷೆಗಳ ನಡುವಿನ ಜಗಳವಾಗದಂತೆ ಎಚ್ಚರ ವಹಿಸಬೇಕಾದುದು ಅತ್ಯಗತ್ಯ. ಒಂದು ಮಟ್ಟದಲ್ಲಿ ಅತಿರೇಕಕ್ಕೆ ಹೋಗದಂತೆ ಪ್ರೌಢಿಮೆಯನ್ನು ಎರಡೂ ಕಡೆಯ ಜನ ಸಾಮಾನ್ಯರು ವಹಿಸಿರುವುದು ಶ್ಲಾಘನೀಯ. ಜನರ ಸಾಮರಸ್ಯದ ಸಂಬಂಧಗಳಿಗೆ ಹಾನಿ ಮಾಡದಂತೆ ಇದು ಕೇವಲ ಕಮಲ ಹಾಸನ್ ಅವರ ವೈಯುಕ್ತಿಕ ಅಭಿಪ್ರಾಯದ ಮಟ್ಟಕ್ಕೆ ಉಳಿಯಬೇಕಿದೆ, ಉಳಿಸಬೇಕಿದೆ.

ತಮಿಳುನಾಡು, ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳು ಪ್ರಾಗ್‌ದ್ರಾವಿಡ ಮೂಲದ ಭಾಷೆಗಳು ಎಂದು ಪ್ರತಿಪಾದಿಸಲಾದ ಅಂಶ. ಆದರೆ ಇದನ್ನು ಮೀರಿದ ಭಿನ್ನ ಅಭಿಪ್ರಾಯಗಳನ್ನು ಯಾರಾದರೂ ಇರಿಸಿಕೊಂಡಿದ್ದರೆ ಅದು ಅವರ ಅಭಿಪ್ರಾಯ. ಅದನ್ನು ಎಲ್ಲರೂ ಒಪ್ಪಬೇಕಾದ ಅಗತ್ಯವಿಲ್ಲ. ಅಂತಲ್ಲಿ ಅಭಿಪ್ರಾಯ ಬೇಧಗಳನ್ನು ದಾಖಲಿಸಿ ಬಿಡುವುದು ಸಾಮಾನ್ಯ ಕ್ರಮ. ಇಲ್ಲವಾದಲ್ಲಿ ಚರ್ಚೆಗಳು ಕೊನೆಗೊಳ್ಳುವುದೂ ಇಲ್ಲ.

**ಶೋಭಿಸುವ ವಿಚಾರವಲ್ಲ**

ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕದಂತಹ ಇನ್ನಾವುದೇ ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಎಲ್ಲಾ ದಿಕ್ಕುಗಳಲ್ಲಿ ಯೋಚಿಸಬೇಕಾಗುತ್ತದೆ. ವರ್ತಮಾನದ ಸನ್ನಿವೇಶಗಳನ್ನು, ಅದು ಬೀರುವ ಪರಿಣಾಮಗಳನ್ನು ಲಕ್ಷ್ಯದಲ್ಲಿ ಇರಿಸದೇ ಚಿತ್ತ ವಿಹಾರಿಯಾಗಿ ಪ್ರತಿಕ್ರಿಯಿಸುವುದು ಕಮಲ್ ಹಾಸನ್ ಅಥವಾ ಯಾರಿಗೂ ಶೋಭೆ ತರುವುದಿಲ್ಲ. ಅಂತಹ ಹೇಳಿಕೆಗಳು ಸಮಾಜದ ಸ್ವಾಸ್ಥ್ಯವನ್ನು ಕಲಕ ಬಲ್ಲದು ಎನ್ನುವುದರ ಎಚ್ಚರ ಇರಬೇಕು. ಯಾವುದೇ ಭಾಷೆಯೊಂದರ ಹುಟ್ಟು, ಬೆಳವಣಿಗೆ ಅದರ ಪ್ರಾಚೀನತೆ ಇತ್ಯಾದಿಗಳ ಕುರಿತಾದಂತೆ ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸುವಾಗ ಆಳವಾದಂತಹ ಸಮರ್ಥ, ಸಂಶೋಧನಾತ್ಮಕ ಜ್ಞಾನ ಇರಬೇಕಾಗುತ್ತದೆ. ಅದು ಕನ್ನಡ, ತೆಲುಗು, ತಮಿಳು, ಮಲಯಾಳಂ ಯಾವುದೇ ಭಾಷೆಗಳಿಗೂ ಕೂಡ ಅನ್ವಯ ಆಗುವಂತದ್ದು ನಿಜ. ಈ ಭಾಷೆಗಳ ಬೆಳವಣಿಗೆ ಹೇಗಾಯಿತು ಅದರ ಮೂಲ ಇತ್ಯಾದಿಗಳ ಕುರಿತಾದಂತೆ ನಿರಂತರವಾದ ಅಕೆಡೆಮಿಕ್ ಜಿಜ್ಞಾಸೆಗಳು ಸಂಶೋಧನೆಗಳು ನಡೆಯುತ್ತಲೇ ಇವೆ. ಇವುಗಳೆಲ್ಲವೂ ಕೂಡ ಸಂಶೋಧನಾತ್ಮಕ ಬೌದ್ಧಿಕ ವಲಯದಲ್ಲಿ ನಡೆಯಬೇಕೇ ಹೊರತು ಸಾರ್ವಜನಿಕ ಚರ್ಚೆಗಳಲ್ಲಿ ಅಲ್ಲ. ಅವು ಹಾದಿ ಬೀದಿಯ ಬೀಸು ಮಾತುಗಳಾದರೆ ಸತ್ಯ ತಿಳಿಯುವ ನಿಜ ಉದ್ದೇಶ ಫಲಿಸುವುದಿಲ್ಲ. ಕಮಲ್ ಹಾಸನರಂತಹ ಒಬ್ಬ ಹಿರಿಯ ಸಂವೇದನಾಶೀಲ ನಟ ಈ ವಿಷಯದಲ್ಲಿ ಎಡವಿದ್ದಾರೆ ಅಥವಾ ಜನಪ್ರಿಯವಾದ ಪ್ರಚಾರದ ಸೆಳೆವಿಗೆ ಬಿದ್ದಿದ್ದಾರೆ.

**ಸಂಸ್ಕೃತ–ಕನ್ನಡ?**

ಕನ್ನಡದಲ್ಲಿ ಸಂಸ್ಕೃತ ಮತ್ತು ಇತರೆ ಭಾಷೆಗಳ ಶಬ್ದಗಳಿವೆ ಎನ್ನುವುದನ್ನೇ ಮುಂದಿಕ್ಕಿ 'ಕನ್ನಡವು ಸಂಸ್ಕೃತದಿಂದ ಹುಟ್ಟಿದೆ' ಎಂದು ನಂಬಿಸುವ ಪ್ರಯತ್ನ ನಿರತ ಪಂಡಿತರಿಗೇನೂ ಕಮ್ಮಿ ಇಲ್ಲ. ಸರಸ್ವತಿ ಸಮ್ಮಾನ್ ಪ್ರಶಸ್ತಿ ಭೂಷಣರಾದ ಕನ್ನಡದ ಹಿರಿಯ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪನವರು ಸ್ವತಃ ಈ ಹೇಳಿಕೆಯನ್ನು ಅನೇಕ ಸಲ ಹೇಳಿದ್ದಾರೆ. ತೀವ್ರ ಆಕ್ಷೇಪಗಳ ನಡುವೆಯೂ ಅದನ್ನೇ ಪ್ರತಿಪಾದಿಸುತ್ತಾ ಬರುತ್ತಿದ್ದಾರೆ. ಇಂತಹ ಮಾತುಗಳನ್ನು ಅವರು ಆಡಿದಾಗ ಕನ್ನಡದ ಹೋರಾಟಗಾರರು ಅಥವಾ ಇತರರು ಭೈರಪ್ಪನವರು ಕ್ಷಮೆ ಯಾಚಿಸಲೇಬೇಕು ಎಂದು ಎಂದಾದರೂ ಚಳುವಳಿ ನಡೆಸಿದ್ದಾರೆಯೇ? ಇಲ್ಲವೆಂದರೆ ಯಾಕಿಲ್ಲ? ಸಂಸ್ಕೃತ ದೇವಭಾಷೆ ಎಂಬ ಅವ್ಯಕ್ತ ಪೂಜ್ಯ ಭಾವನೆಯೇ? ಅಥವಾ ನಿರ್ಲಕ್ಷಿಸಬೇಕಾದ ಸಂಗತಿ ಅಂತಲೇ? ತಮಿಳಿನೊಂದಿಗೆ ಮಾತ್ರವೇ ಈ ಬಹಿರಂಗ ಜಿದ್ದಾಜಿದ್ದಿ ಯಾಕೆ? ನಮ್ಮ ಘನ ನ್ಯಾಯಾಲಯಗಳು ಭೈರಪ್ಪನವರ ಟೊಳ್ಳು ಸಂಗತಿಗಳನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಿರುವುದನ್ನು ಗಮನಿಸಿಲ್ಲವೇ?

**ಪ್ರಾದೇಶಿಕ ಭಾಷೆಗಳ ಮೇಲಿನ ದಾಳಿಗಳು**

ಕಮಲಹಾಸನ್ ಫಿಲಂ ಛೇಂಬರ್‌ಗೆ ಬರೆದ ಪತ್ರದಲ್ಲೂ ಮತ್ತು ಸಾರ್ವಜನಿಕವಾಗಿ ಪ್ರಕಟಿಸಿದಂತೆ ಅವರ ಮಾತುಗಳು ಎರಡು ರಾಜ್ಯಗಳು ಮತ್ತು ಎರಡು ಹಿರಿಯ ಸಿನಿಮಾ ನಟ ಮತ್ತು ಕುಟುಂಬಗಳ ನಡುವಿನ ಭಾವನಾತ್ಮಕ ಸಂಬಂಧದ ಪ್ರೀತಿಯ ದ್ಯೋತಕವಾಗಿ ಇವೆ ಎಂದುಕೊಂಡರೂ ಅಂತಹ ಬೀಸು ಹೇಳಿಕೆಗಳನ್ನು ನೀಡುವಾಗ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಎಚ್ಚರವು ಅಗತ್ಯ. ಇಂದು ಸಾವಿರಾರು ವರ್ಷಗಳ ಇತಿಹಾಸವುಳ್ಳ ಪ್ರಾದೇಶಿಕ ಭಾಷೆಗಳನ್ನು ನಿರ್ನಾಮ ಮಾಡಲು ಮತ್ತು ಆ ಭಾಷೆಗಳ ಮೇಲೆ ಹಿಂದಿ–ಸಂಸ್ಕೃತದಂತಹ ಭಾಷೆಗಳನ್ನು ಸ್ಥಾಪಿಸಿ, ಅವನ್ನು ಮೇಲೆರಿಸಿ ಮೆರೆಸುವ ನಿರಂತರ ಪ್ರಯತ್ನಗಳು ನಡೆದಿರುವಾಗ ನಮ್ಮ ಪ್ರಾದೇಶಿಕ ಭಾಷೆಗಳನ್ನು ಉಳಿಸಿಕೊಳ್ಳುವುದು ಅವುಗಳನ್ನು ಸಂರಕ್ಷಿಸಿ ಬೆಳೆಸಿಕೊಳ್ಳುವುದು ಬಹುದೊಡ್ಡ ಸವಾಲಾಗಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲಾ ಭಾರತೀಯ ಪ್ರಾದೇಶಿಕ ಭಾಷೆಗಳ ನಡುವಿನ ಸಂಬಂಧ ಗಟ್ಟಿಗೊಳ್ಳುವುದು ಮತ್ತು ಎದ್ದು ನಿಲ್ಲುವುದು ಬಹಳ ಪ್ರಮುಖವಾದ ಸಂಗತಿ, ಇಂಥ ಸನ್ನಿವೇಶದಲ್ಲಿ ಅದು ತಮಿಳುನಾಡಿನಲ್ಲಿ ಅಥವಾ ಕರ್ನಾಟಕದಲ್ಲಿ ಎಲ್ಲೇ ಆಗಲಿ ಭಾಷೆಗಳ ನಡುವಿನ ಸಾಮರಸ್ಯವನ್ನು ಕೆಡಿಸಲು ಸಂಬಂಧಗಳಿಗೆ ಹುಳಿ ಪುಟ 6 ಕ್ಕೆ

# ಭಯೋತ್ಪಾದನೆ, ಯುದ್ಧಕೋರತನ ಮತ್ತು ದ್ವೇಷಪ್ರಚಾರದ ವಿರುದ್ಧ ವಾರಾಚರಣೆ ತುರ್ತುಪರಿಸ್ಥಿತಿ-50ರ ಸಂದರ್ಭದಲ್ಲಿ ಸರ್ವಾಧಿಕಾರಶಾಹಿಯ ವಿರುದ್ಧ ಅಭಿಯಾನ –ಹೊಸ ಕೇಂದ್ರ ಸಮಿತಿಯ ಕರೆ

24ನೇ ಮಹಾಧಿವೇಶನದಲ್ಲಿ ಆಯ್ಕೆಯಾದ ಸಿಪಿಐ(ಎಂ) ಕೇಂದ್ರ ಸಮಿತಿಯು ಜೂನ್ 3 ರಿಂದ 5ರ ವರೆಗೆ ನವದೆಹಲಿಯ ಸುರ್ಜೀತ್ ಭವನದಲ್ಲಿ ಮೊದಲ ಬಾರಿಗೆ ಸಭೆ ಸೇರಿತು. ಭಯೋತ್ಪಾದಕ ದಾಳಿಯಲ್ಲಿ ಹತರಾದ ಜನರು, ಈಶಾನ್ಯದಲ್ಲಿ ಅಕಾಲಿಕ ಪ್ರವಾಹ ಮತ್ತು ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡವರಿಗೆ ಕೇಂದ್ರ ಸಮಿತಿ ಸಂತಾಪ ಸೂಚಿಸಿತು.

ಭಯೋತ್ಪಾದನೆ, ಯುದ್ಧಕೋರತನ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಬಳಸಿಕೊಂಡು ಕೋಮುವಾದಿ ದ್ವೇಷವನ್ನು ಹರಡುವ ಪ್ರಯತ್ನಗಳ ವಿರುದ್ಧ ಜೂನ್‌ನಲ್ಲಿ ಒಂದು ವಾರದ ಪ್ರಚಾರಾಂದೋಲನ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಮತ್ತು ತುರ್ತು ಪರಿಸ್ಥಿತಿ ಘೋಷಣೆಯಾಗಿ 50 ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ್ತು ಪ್ರಸ್ತುತ ಸರ್ಕಾರದ ಸರ್ವಾಧಿಕಾರಶಾಹಿಯನ್ನು ಬಯಲಿಗೆಳೆಯಲು ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ಪ್ಯಾಲೆಸ್ತೈನ್, ಗಾಜಾದಲ್ಲಿ ಇಸ್ರೇಲ್ ನಡೆಸಿರುವ ನರಮೇಧದ ವಿರುದ್ಧ ಇಡೀ ಪಕ್ಷವು ತಕ್ಷಣವೇ ಪ್ರತಿಭಟನೆಗಳನ್ನು ಸಂಘಟಿಸಲು ಕೂಡ ಅದು ನಿರ್ಧರಿಸಿತು.

ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ ನೇತೃತ್ವದ ಪಕ್ಷದ ಸಿಪಿಐ(ಎಂ) ನಿಯೋಗವು 2025 ಜೂನ್ 10–11 ರಂದು ಕಾಶ್ಮೀರಕ್ಕೆ ಭೇಟಿ ನೀಡಲಿದೆ.

ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿದ ಕೇಂದ್ರ ಸಮಿತಿ ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

**ಗಾಜಾದ ಮೇಲೆ ಇಸ್ರೇಲ್ ಆಕ್ರಮಣ:** ಗಾಜಾದ ಸಂಪೂರ್ಣ ನಾಶ ಮತ್ತು ಅದನ್ನು ಕೈವಶ ಮಾಡಿಕೊಳ್ಳುವ ಗುರಿಯಿಂದ ಮುಂದುವರಿದ ಇಸ್ರೇಲ್ ನರಮೇಧವನ್ನು ಕೇಂದ್ರ ಸಮಿತಿ ಖಂಡಿಸುತ್ತದೆ. ಬಿಜೆಪಿ ಸರ್ಕಾರವು ತಕ್ಷಣವೇ ಶಸ್ತ್ರಾಸ್ತ್ರಗಳ ರಫ್ತು ನಿಲ್ಲಿಸಬೇಕು ಮತ್ತು ಇಸ್ರೇಲ್‌ನೊಂದಿಗೆ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳನ್ನು ಕಡಿದುಕೊಳ್ಳಬೇಕು. ಸರ್ಕಾರವು ಪ್ಯಾಲೆಸ್ತೈನ್ ಗುರಿಸಾಧನೆಯ ಪರವಾಗಿ ದೃಢವಾಗಿ ನಿಲ್ಲಬೇಕು, ನಮ್ಮ ಸೌಹಾರ್ದವನ್ನು ಪುನರುಚ್ಚರಿಸಬೇಕು ಮತ್ತು ಎರಡು–ಪ್ರಭುತ್ವ ಪರಿಹಾರದ ನಮ್ಮ ದೀರ್ಘಕಾಲದ ವಿದೇಶಾಂಗ ನೀತಿ ನಿಲುವುಗಳಿಗೆ ಬದ್ಧವಾಗಿರಬೇಕು.

**ಪಹಲ್ಗಾಮ್ ಭಯೋತ್ಪಾದಕ ದಾಳಿಗಳು ಮತ್ತು ನಂತರ:** ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿ ಕುರಿತಂತೆ ದುಃಖದಲ್ಲಿ ಮತ್ತು ಅದನ್ನು ಖಂಡಿಸುವಲ್ಲಿ ಇಡೀ ದೇಶದ ಜನರು ಒಗ್ಗಟ್ಟಿನಿಂದ ನಿಂತರು ಎಂದು ಕೇಂದ್ರ ಸಮಿತಿ ಹೇಳಿದೆ. ಇದರಲ್ಲಿ, ಜಮ್ಮು ಮತ್ತು ಕಾಶ್ಮೀರದ ಜನರ ಸ್ಪಂದನೆ ಅನುಕರಣೀಯವಾಗಿದೆ, ಏಕೆಂದರೆ ಅವರು ಹಿಂಸಾಚಾರದ ವಿರುದ್ಧ ಸ್ವಯಂಸ್ಫೂರ್ತಿಯಿಂದ ಪ್ರತಿಭಟಿಸಿದರು. ಆದಾಗ್ಯೂ, ಜನರ ಈ ಒಗ್ಗಟ್ಟಿನ ಇಚ್ಛೆಗೆ ವಿರುದ್ಧವಾಗಿ, ಹಿಂದುತ್ವ ಶಕ್ತಿಗಳು ಮುಸ್ಲಿಮರು ಮತ್ತು ಕಾಶ್ಮೀರಿಗಳ ವಿರುದ್ಧ ದ್ವೇಷ ಅಭಿಯಾನವನ್ನು ನಡೆಸಲು ಈ ಘೋರ ಭಯೋತ್ಪಾದಕ ದಾಳಿಯನ್ನು ಬಳಸಿಕೊಳ್ಳಲು ಪ್ರಯತ್ನಿಸಿದವು.

'ಆಪರೇಷನ್ ಸಿಂಧೂರ್' ನಂತರ, ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಈ ಮಿಲಿಟರಿ ಕಾರ್ಯಾಚರಣೆಯನ್ನು ಪಕ್ಷಪಾತೀ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಯತ್ನಿಸಿವೆ. ಚುನಾವಣಾ ಉದ್ದೇಶಗಳಿಗಾಗಿ ಈ ಕಾರ್ಯಾಚರಣೆಯನ್ನು ಬಳಸಿಕೊಳ್ಳುತ್ತಿರುವುದು ಪ್ರಧಾನಮಂತ್ರಿ ಮೋದಿಯವರ ಭಾಷಣಗಳು ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಎದ್ದು ಕಾಣುತ್ತಿತ್ತು.

ಹಲವು ಗಂಭೀರ ಪ್ರಶ್ನೆಗಳಿವೆ, ಈ ಪ್ರಶ್ನೆಗಳಿಗೆ ಸರ್ಕಾರದಿಂದ ತಕ್ಷಣದ ಉತ್ತರದ ಅಗತ್ಯವಿದೆ. 370ನೇ ವಿಧಿಯನ್ನು ರದ್ದುಪಡಿಸಿದ ನಂತರ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಶೇಷ ಸ್ಥಾನಮಾನ ಮತ್ತು ರದ್ದತಿಯ ನಂತರ ಅಲ್ಲಿ ಪರಿಸ್ಥಿತಿ ಹೇಗೆ ಸಾಮಾನ್ಯ ಸ್ಥಿತಿಗೆ ಮರಳಿದೆ ಎಂಬುದರ ಬಗ್ಗೆ ಸರ್ಕಾರ ಹೆಮ್ಮೆಯಿಂದ ಹೇಳಿಕೊಳ್ಳುತ್ತಿತ್ತು. ಇಂತಹ ದೋಷಪೂರಿತ ನಿಲುವು ಗಂಭೀರ ಭದ್ರತಾ ವೈಫಲ್ಯಗಳಿಗೆ ಕಾರಣವಾಗಿದೆ. ಭಯೋತ್ಪಾದಕ ದಾಳಿಯ ಅಪರಾಧಿಗಳನ್ನು ಗುರುತಿಸಲಾಗಿದೆ, ಇನ್ನೂ ಹಿಡಿಯಲಾಗಿಲ್ಲ. ಈ ವೈಫಲ್ಯಗಳಿಗೆ ಕಾರಣರಾದವರನ್ನು ಮೊದಲು ಹೊಣೆಗಾರರನ್ನಾಗಿ ಮಾಡಬೇಕಾಗಿದೆ. ಭಯೋತ್ಪಾದನೆಯನ್ನು ಎದುರಿಸುವಲ್ಲಿ ಮೊದಲ ಪಾಠವೆಂದರೆ ಜನರ ಒಗ್ಗಟ್ಟನ್ನು ಕಟ್ಟುವುದು, ಅಗತ್ಯ ಭದ್ರತಾ ಕ್ರಮಗಳನ್ನು ಬಲಪಡಿಸುವುದು, ಎಲ್ಲಾ ಲೋಪದೋಷಗಳು ಮತ್ತು ನ್ಯೂನತೆಗಳನ್ನು ಸರಿಪಡಿಸುವುದು ಮತ್ತು ಜನರ ಜೀವಗಳನ್ನು ರಕ್ಷಿಸುವುದು.



ಮೇ 10 ರಂದು ಕದನ ವಿರಾಮ ಪ್ರಕಟಣೆ ನಡೆದ ರೀತಿಯ ಬಗ್ಗೆಯೂ ಪ್ರಶ್ನೆಗಳಿವೆ. ಎರಡೂ ಕಡೆಯವರು ಕದನ ವಿರಾಮಕ್ಕೆ ಒಪ್ಪಿಗೆ ನೀಡುವಂತೆ ಅಮೆರಿಕ ಮಧ್ಯಪ್ರವೇಶಿಸಿದೆ ಎಂದು ಅಧ್ಯಕ್ಷ ಟ್ರಂಪ್ ಪದೇ ಪದೇ ಪ್ರತಿಪಾದಿಸಿದ್ದಾರೆ. ಈ ಹೇಳಿಕೆಗೆ ಯಾವುದೇ ಪರಿಣಾಮಕಾರಿ ಖಂಡನೆ ಬಂದಿಲ್ಲ. ಸಿಪಿಐ(ಎಂ) ಕೇಂದ್ರ ಸಮಿತಿಯು ಈ ವಿಷಯದಲ್ಲಿ ಅಮೆರಿಕದ ಯಾವುದೇ ಹಸ್ತಕ್ಷೇಪವನ್ನು ಬಲವಾಗಿ ವಿರೋಧಿಸುತ್ತದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಸಮಸ್ಯೆಗಳ ಪರಿಹಾರದಲ್ಲಿ ಇಂತಹ ಬಾಹ್ಯ ಹಸ್ತಕ್ಷೇಪವು ನಮ್ಮ ದೇಶದಲ್ಲಿನ ರಾಜಕೀಯ ಒಮ್ಮತಕ್ಕೆ ವಿರುದ್ಧವಾಗಿದೆ.

ಭಯೋತ್ಪಾದಕ ದಾಳಿಗಳು ಮತ್ತು ಅವುಗಳ ಪರಿಣಾಮಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಲು ಸರ್ಕಾರ ನಿರಾಕರಿಸಿದ್ದನ್ನು ಕೇಂದ್ರ ಸಮಿತಿ ಖಂಡಿಸಿತು. ಸಂಸತ್ತನ್ನು ಕರೆಯುವ ಬದಲು, ಪ್ರಧಾನ ಮಂತ್ರಿಗಳು ಉನ್ಮಾದವನ್ನು ಬಡಿದೆಬ್ಬಿಸಲು ಮತ್ತು ರಾಜಕೀಯ ಲಾಭ ಪಡೆಯಲು ದೇಶಾದ್ಯಂತ ಪ್ರವಾಸ ಮಾಡಿದ್ದಾರೆ. ಸರ್ಕಾರವು ಕಾರ್ಯಾಚರಣೆ ಯಶಸ್ವಿಯಾಗಿದೆ ಮತ್ತು ಅದು ತನ್ನ ಉದ್ದೇಶಗಳನ್ನು ಸಾಧಿಸಿದೆ ಎಂದು ಘೋಷಿಸಿತ್ತು. ಆದರೆ ಪ್ರಧಾನ ಮಂತ್ರಿಗಳು ತಮ್ಮ ಎಲ್ಲಾ ಭಾಷಣಗಳಲ್ಲಿ ಕಾರ್ಯಾಚರಣೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆಯೇ ಹೊರತು ಕೊನೆಗೊಳಿಸಲಾಗಿಲ್ಲ ಎಂದು ಹೇಳುತ್ತಾರೆ. ಈ ಮೂಲಕ, ಅವರು ಈ ಕಾರ್ಯಾಚರಣೆಯನ್ನು ತಮ್ಮ ಪಕ್ಷದ ರಾಜಕೀಯ ಯೋಜನೆಗೆ ಬಳಸಲು ಉದ್ದೇಶಿಸಿದ್ದಾರೆ.

ಭಯೋತ್ಪಾದನೆಯನ್ನು ನಿಗ್ರಹಿಸಲು ಮಿಲಿಟರಿ ವಿಧಾನಗಳು ಏಕೈಕ ಪರಿಹಾರವಲ್ಲ ಎಂದು ಸಿಪಿಐ(ಎಂ) ನಿರಂತರವಾಗಿ ಪ್ರತಿಪಾದಿಸಿದೆ. ಭಯೋತ್ಪಾದನೆಯ ವಿರುದ್ಧ ಹೋರಾಡಲು ರಾಜತಾಂತ್ರಿಕ, ರಾಜಕೀಯ ಮತ್ತು ಇತರ ಕ್ರಮಗಳನ್ನು ಅನುಸರಿಸಬೇಕಾಗಿದೆ. ಪ್ರಧಾನಮಂತ್ರಿಗಳು ಘೋಷಿಸಿರುವ ಹೊಸ ತತ್ವವು ಈ ಎಲ್ಲಾ ಆಯ್ಕೆಗಳನ್ನು ಮುಚ್ಚಿ ಬಿಡುತ್ತದೆ. ಈ ವಿಧಾನವು ಉನ್ಮಾದವನ್ನು ಮಾತ್ರ ಉತ್ತೇಜಿಸುತ್ತದೆ, ಗಡಿಯ ಎರಡೂ ಬದಿಗಳಲ್ಲಿ ಉಗ್ರಗಾಮಿ ಶಕ್ತಿಗಳನ್ನು ಬಲಪಡಿಸುತ್ತದೆ ಮತ್ತು ಕೋಮು ವಿಭಜನೆಯನ್ನು ಮತ್ತಷ್ಟು ವಿಸ್ತರಿಸುತ್ತದೆ.

**ಕೋಮುವಾದಿ ಧ್ರುವೀಕರಣ ಮತ್ತು ದ್ವೇಷ ಅಭಿಯಾನ:** ಬಿಜೆಪಿ/ಆರ್‌ಎಸ್‌ಎಸ್ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡುತ್ತಾ ತಮ್ಮ ಕೋಮು ಅಭಿಯಾನವನ್ನು ತೀವ್ರಗೊಳಿಸಿವೆ. ಸಂತ್ರಸ್ತರ ಕುಟುಂಬಗಳು, ಸೇನೆಯ ವಕ್ತಾರರು ಮತ್ತು ವಿದೇಶಾಂಗ ಕಾರ್ಯದರ್ಶಿಗಳ ಮೇಲೆ ಟ್ರೋಲ್‌ಗಳನ್ನು ಹರಿಯಬಿಡಲಾಯಿತು. ಅವರ ಮೇಲೆ ಕ್ರಮಕೈಗೊಳ್ಳುವ ಬದಲು, ಸರ್ಕಾರವು ಮೌನವಾಗಿರಲು ನಿರ್ಧರಿಸಿತು, ದ್ವೇಷ ಅಭಿಯಾನಕ್ಕೆ ತನ್ನ ಮೌನ ಬೆಂಬಲವನ್ನು ತೋರಿಸಿತು. ಮುಖ್ಯವಾಹಿನಿಯ ಕಾರ್ಪೊರೇಟ್ ಮಾಧ್ಯಮಗಳ ಒಂದು ದೊಡ್ಡ ವಿಭಾಗವು ನಮ್ಮ ದೇಶದ ಪ್ರತಿಷ್ಠೆಯನ್ನು ಹಾಳುಮಾಡುವ ಉನ್ಮಾದವನ್ನು, ಕೋಮು ವಿಷವನ್ನು ಹರಡಿತು.

ಮತ್ತೊಂದೆಡೆ, ಸರ್ಕಾರವು ಎಲ್ಲಾ ವಿಮರ್ಶಾತ್ಮಕ ಧ್ವನಿಗಳನ್ನು ಅಡಗಿಸಲು ತನ್ನ ಪೊಲೀಸ್ ಮತ್ತು ತನಿಖಾ ಸಂಸ್ಥೆಗಳನ್ನು ಹರಿಯಬಿಟ್ಟಿದೆ. ಇಂತಹ ದಾಳಿಗಳು ಸರ್ಕಾರದ ನವ–ಫ್ಯಾಸಿಸ್ಟ್ ತೆರನ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತವೆ.

ವಲಸೆ ಮುಸ್ಲಿಮರನ್ನು, ವಿಶೇಷವಾಗಿ ಬಂಗಾಳಿ ಮಾತನಾಡುವ ವ್ಯಕ್ತಿಗಳನ್ನು ಬಾಂಗ್ಲಾ ದೇಶೀಯರೆಂದು ಗುರಿಯಾಗಿಸಿಕೊಂಡು ಬಲವಂತವಾಗಿ ಗಡೀಪಾರು ಮಾಡಲಾಗುತ್ತಿದೆ. ಬಿಜೆಪಿ ಸಚಿವರು ಮತ್ತು ನಾಯಕರು ಅತ್ಯಂತ ಅವಮಾನಕರ ಹೇಳಿಕೆಗಳನ್ನು ನೀಡಿದ್ದಾರೆ.

ಇಡೀ ದೇಶವು ಭಯೋತ್ಪಾದಕ ದಾಳಿಗಳು ಮತ್ತು ಕೋಮುವಾದಿ ದ್ವೇಷದಿಂದ ಕಳವಳಪಡುತ್ತಿರುವಾಗಲೇ, ಬಿಜೆಪಿ ಸರ್ಕಾರವು ತನ್ನ ಬಂಟರಿಗೆ ಪ್ರಯೋಜನವಾಗುವಂತೆ ತನ್ನ ನವ ಉದಾರವಾದಿ ನೀತಿಗಳನ್ನು ಆಕ್ರಾಮಕವಾಗಿ ಅನುಸರಿಸುತ್ತಿದೆ. ಜನರನ್ನು ವಿಭಜಿಸುವ ಆರ್‌ಎಸ್‌ಎಸ್/ಬಿಜೆಪಿ ಕೋಮುವಾದಿ ನೀತಿಗಳು ಅವರ ಗಮನವನ್ನು ಬೇರೆಡೆಗೆ ಸೆಳೆಯಲು, ಜನರ ಏಕತೆಯನ್ನು ಮುರಿಯಲು ಮತ್ತು ಅವರ ಜೀವನೋಪಾಯಗಳ ಮೇಲೆ ದಾಳಿಯನ್ನು ಮುಂದುವರಿಸುವ ಆಶಯವನ್ನೇ ಹೊಂದಿವೆ.



**ಭಾರತೀಯ ಅರ್ಥವ್ಯವಸ್ಥೆಯ ನಿಜವಾದ ಮುಖ:** ಸರ್ಕಾರವು ನಮ್ಮ ಆರ್ಥಿಕ ಪರಿಸ್ಥಿತಿಯ ವಾಸ್ತವತೆಯನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತಿದೆ. ಈ ವರ್ಷದ ಅಂತ್ಯದ ವೇಳೆಗೆ ಭಾರತದ ಅರ್ಥವ್ಯವಸ್ಥೆಯು ಜಪಾನನ್ನು ಹಿಂದಿಕ್ಕಿ ನಾಲ್ಕನೇ ಅತಿದೊಡ್ಡ ಅರ್ಥವ್ಯವಸ್ಥೆಯಾಗಲಿದೆ ಎಂದು ಡಂಗುರ ಬಾರಿಸುತ್ತಿದೆ, ಆದರೆ ನಮ್ಮೆರಡು ದೇಶಗಳ ತಲಾ ಆದಾಯಗಳ ನಡುವಿನ ಅಗಾಧ ವ್ಯತ್ಯಾಸದಂತಹ ಸಂಗತಿಗಳನ್ನು ಮರೆಮಾಡುತ್ತದೆ. ಹೆಚ್ಚುತ್ತಿರುವ ಅಸಮಾನತೆಗಳು, ದುಡಿಯುವ ಜನರ ಜೀವನೋಪಾಯದ ಬಿಕ್ಕಟ್ಟು ನಮ್ಮ ಅರ್ಥವ್ಯವಸ್ಥೆಯ ನಿಜವಾದ ಲಕ್ಷಣಗಳಾಗಿವೆ, ಇದನ್ನು ಬಯಲುಗೊಳಿಸಬೇಕಾಗಿದೆ.

**ಪ್ರಮುಖ ವಲಯಗಳ ಖಾಸಗೀಕರಣ:** ಪರಮಾಣು ವಿದ್ಯುತ್ ಉತ್ಪಾದನೆಯನ್ನು ಖಾಸಗೀಕರಿಸಲು ಮತ್ತು ವಿದೇಶಿ ನಿರ್ವಾಹಕರಿಗೆ ಅವಕಾಶ ಒದಗಿಸಲು ಸರ್ಕಾರ ಒಪ್ಪಿಕೊಂಡಿದೆ. ಅಮೆರಿಕಾ ಪರಮಾಣು ರಿಯಾಕ್ಟರ್ ತಯಾರಕರ ಪ್ರವೇಶಕ್ಕೆ ಅನುಕೂಲ ಕಲ್ಪಿಸಲು, ಭಾರತೀಯ ಜನರ ಸುರಕ್ಷತೆಯನ್ನು ಬಲಿಗೊಟ್ಟು ಪರಮಾಣು ಹೊಣೆಗಾರಿಕೆ ಷರತ್ತನ್ನು ತಿದ್ದುಪಡಿ ಮಾಡಲು ಸರ್ಕಾರ ಒಪ್ಪಿಕೊಂಡಿದೆ. ಮೊದಲ ಬಾರಿಗೆ, ಯುದ್ಧ ವಿಮಾನಗಳ ಉತ್ಪಾದನೆಯನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸಲಾಗುತ್ತಿದೆ. ರಕ್ಷಣೆ, ಗಣಿಗಾರಿಕೆ ಮತ್ತು ಪರಮಾಣು ಶಕ್ತಿಯಂತಹ ಪ್ರಮುಖ ಕ್ಷೇತ್ರಗಳ ಖಾಸಗೀಕರಣವು ನಮ್ಮ ಸಾರ್ವಭೌಮತ್ವ ಮತ್ತು ಭದ್ರತೆಗೆ ಅವಹೇಳನಕಾರಿಯಾಗಿದೆ.

**ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಮಣಿಯುವ ಒಪ್ಪಂದ:** ಭಾರತ ಸರ್ಕಾರವು ವರ್ಷಾಂತ್ಯದ ಮೊದಲು ಅಮೆರಿಕದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ)ಕ್ಕೆ ಸಹಿ ಹಾಕುವ ಗುರಿಯನ್ನು ಹೊಂದಿದೆ. ಜುಲೈ ಮೊದಲು, ಅದು ಮಧ್ಯಂತರ ವ್ಯಾಪಾರ ಒಪ್ಪಂದವನ್ನು ತೀರ್ಮಾನಿಸಲು ಉದ್ದೇಶಿಸಿದೆ. ವರದಿಗಳ ಪ್ರಕಾರ, ಅಮೆರಿಕದ ಬೇಡಿಕೆಗಳನ್ನು ಪೂರೈಸಲು ಸರ್ಕಾರವು ಈಗಾಗಲೇ ವಿವಿಧ ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲು ಒಪ್ಪಿಕೊಂಡಿದೆ. ಪ್ರಸ್ತಾವಿತ ಬಿಟಿಎ ಭಾರತೀಯ ರೈತರ ಜೀವನೋಪಾಯಕ್ಕೆ ಅಪಾಯವನ್ನು ಉಂಟುಮಾಡುತ್ತದೆ ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇಗಳು) ಮತ್ತು ಔಷಧೀಯ ವಲಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಷ್ಟ್ರೀಯ ಭದ್ರತೆಗೆ ಸಂಭಾವ್ಯ ಪರಿಣಾಮಗಳ ಬಗ್ಗೆ ಕಳವಳಗಳಿದ್ದರೂ, ಸರ್ಕಾರವು ಭಾರತದಲ್ಲಿ ಎಲೋನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಉಪಗ್ರಹ ಇಂಟರ್ನೆಟ್ ಸೇವೆಗಳನ್ನು ಅನುಮೋದಿಸುವ ಅಂಚಿನಲ್ಲಿದೆ. ಸರ್ಕಾರವು ಈಗಾಗಲೇ ಯುಕೆಯೊಂದಿಗೆ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ತೀರ್ಮಾನಿಸಿದೆ ಮತ್ತು ಇದೇ ರೀತಿಯ ಅನೇಕ ಒಪ್ಪಂದಗಳಿಗೆ ಸಿದ್ಧತೆ ನಡೆದಿದೆ. ಈ ಎಲ್ಲಾ ಒಪ್ಪಂದಗಳು ರೈತರು ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಸಮಾಲೋಚನೆಗಳು ಅಥವಾ ಕಾಳಜಿಗಳಿಲ್ಲದೆ ಅಪಾರದರ್ಶಕವಾಗಿವೆ.

ಭಾರತೀಯ ಕಾರ್ಮಿಕ ವರ್ಗ ಮತ್ತು ಅ ಜನರ ಹಿತಾಸಕ್ತಿಗಳನ್ನು ಬಲಗೊಡುವ ಇಂತಹ ಒಪ್ಪಂದಗಳನ್ನು ಕೇಂದ್ರ ಸಮಿತಿ ವಿರೋಧಿಸುತ್ತದೆ.

**ಸಾಮಾನ್ಯ ಜನಗಣತಿ ಮತ್ತು ಜಾತಿ ಗಣತಿ:** ಉದ್ದೇಶಪೂರ್ವಕ ಮತ್ತು ಅತಿಯಾದ ವಿಳಂಬದ ನಂತರ, ಕೇಂದ್ರ ಸರ್ಕಾರವು ಕೊನೆಗೂ 2027ರಲ್ಲಿ

ಸಾ ಮಾ ನ್ಯ ಪುಟ 6 ಕ್ಕೆ

# ಶಹಾಪುರ: ಕೃಷಿ ಪರಿಕರಗಳ ಮಾರಾಟಗಾರರ ವಂಚನೆ, ಕಾಳ ದಂಧೆ ಬಯಲು: ಪ್ರಶ್ನಿಸಿದ ರೈತ ಮುಖಂಡರ ಮೇಲೆ ದಬ್ಬಾಳಿಕೆ

**ಕೃಷಿ ಪರಿಕರಗಳ ಮಾರಾಟಗಾರರು ನಡೆಸುತ್ತಿರುವ ನಕಲಿ ಬೀಜ ಕಳಪೆ ಗೊಬ್ಬರ ಮತ್ತು ಕಲಬೆರಕೆ ಕ್ರಿಮಿನಾಶಕಗಳ ಪೂರೈಕೆಯ ವಿರುದ್ಧ ನಿರಂತರವಾಗಿ ಹೋರಾಟ ಮಾಡುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕತ್ವವನ್ನು ದಮನಿಸಲು ನಡೆಸಿದ ಕುತಂತ್ರದ ವಿರುದ್ಧ ಜನ ಸಿಡಿದೆದ್ದಿದ್ದಾರೆ. ಅಧಿಕಾರಸ್ಥರ ಸಕ್ರಿಯ ಬೆಂಬಲದಿಂದ ನಡೆಸಿದ ಷಡ್ಯಂತ್ರದ ವಿರುದ್ಧ ಜನತೆ ಒಡ್ಡಿರುವ ಪ್ರತಿರೋಧದ ವರದಿ ಇಲ್ಲಿ.**

ಕೃತಕ ರಸಗೊಬ್ಬರ ಅಭಾವ ಸೃಷ್ಟಿ, ನಕಲಿ ಬಿತ್ತನೆ ಬೀಜ ಮಾರಾಟದ ವಿರುದ್ದ ಧ್ವನಿಯೆತ್ತಿದ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಚನ್ನಪ್ಪ ಆನೇಗುಂದಿ ವಿರುದ್ದ ಕೃಷಿ ಪರಿಕರಗಳ ಮಾರಾಟಗಾರರು ದೂರು ನೀಡಿದ ಘಟನೆ ಯಾದಗಿರಿ ಜಿಲ್ಲೆಯ ಭೀಮರಾಯನ ಗುಡಿಯಲ್ಲಿ ನಡೆದಿದೆ. ಈ ಸಂಬಂಧ ಭೀಮರಾಯನಗುಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಕೃಷಿ ಪರಿಕರಗಳ ಮಾರಾಟಗಾರ ವಿರುದ್ದ ಕೊಟ್ಟ ದೂರನ್ನು ಪೊಲೀಸರು ಸ್ವೀಕರಿಸಲು ನಿರಾಕರಿಸಿದ್ದರು. ಇದು ಜಿಲ್ಲೆಯ ರೈತರನ್ನು ಕೆರಳಿಸಿತು. ರೈತ ಮುಖಂಡ ಚನ್ನಪ್ಪ ವರ್ತಕರ ಕ್ಷಮೆ ಕೇಳಬೇಕು, ಅಥವಾ ಪೊಲೀಸರು ಅವರನ್ನು ಬಂದಿಸಬೇಕು ಎಂದು ಒತ್ತಾಯಿಸಿ ವರ್ತಕರು ಒಂದು ದಿನ ತಮ್ಮ ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆ ನಡೆಸಿದರೆ, ರೈತರೂ ಸಹ ಜೂನ್ 6ರಂದು ಪ್ರತಿಭಟನೆ ನಡೆಸಿ ಸಹಾಪುರ ತಹಸಿಲ್ದಾರ ಅವರ ಮೂಲಕ ರಾಜ್ಯದ ಮುಖ್ಯಮಂತ್ರಿಯವರಿಗೆ ದೂರು ಕೊಟ್ಟಿದ್ದಾರೆ.

**ನಡೆದಿದ್ದೇನು?**

ಜೂನ್ 3ರಂದು ಯಾದಗಿರಿ ಜಿಲ್ಲೆಯ ಭೀಮರಾಯನಗುಡಿಯಲ್ಲಿನ ಕೃಷಿ ಮಹಾವಿದ್ಯಾಲಯದಲ್ಲಿ, ಕೃಷಿ ಇಲಾಖೆ ಹಾಗೂ ಯಾದಗಿರಿ ಜಿಲ್ಲಾ ಪಂಚಾಯತ್ ಜಂಟಿಯಾಗಿ ಕಾನೂನು ಅರಿವು ಕಾರ್ಯಾಗಾರ ಅಮ್ಮಿಕೊಂಡಿದ್ದವು. ಈ ಕಾರ್ಯಾಗಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಹಾಪುರ ಶಾಸಕರಾದ ಶರಣಬಸಪ್ಪ ದರ್ಶನಾಪುರ ಇದ್ದರು. ಜಿಲ್ಲಾ ಪಂಚಾಯತ್ ಸಿಇಓ, ಜಿಲ್ಲಾ ಕೃಷಿ ಜಂಟಿ ನಿರ್ದೇಶಕ ಮುಂತಾದ ಜಿಲ್ಲಾ ಮಟ್ಟದ ಅಧಿಕಾರಿಗಳೂ ಇದ್ದರು. ಇದರಲ್ಲಿ ಕೃಷಿ ಪರಿಕರಗಳ ಮಾರಾಟಗಾರರು, ಕೆಲ ರೈತ ಮುಖಂಡರೂ ಭಾಗಿಯಾಗಿದ್ದರು. ಕರ್ನಾಟಕ ಪ್ರಾಂತ ರೈತ ಸಂಘ (**KPRS**) ರಾಜ್ಯ ಸಹ ಕಾರ್ಯದರ್ಶಿ ಹಾಗೂ ಯಾದಗಿರಿ ಜಿಲ್ಲಾ ಅಧ್ಯಕ್ಷರಾದ ಚನ್ನಪ್ಪ ಆನೇಗುಂದಿ ಅವರೂ ಆಹ್ವಾನಿತರಾಗಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಚನ್ನಪ್ಪ ಆನೇಗುಂದಿ ಅವರು ಮಾತನಾಡುವಾಗ, ರೈತರು ಖರೀದಿ ಮಾಡುವ ಕೃಷಿ ಪರಿಕರಗಳಿಗೆ ಮಾರಾಟಗಾರರು ಸೂಕ್ತ ರಶೀದಿ ನೀಡದೇ ಇರುವುದು, ಮಳಿಗೆಗಳಲ್ಲಿ ದಾಸ್ತಾನು ಪಟ್ಟಿ ಮತ್ತು ದರ ಪಟ್ಟಿ ಪ್ರಕಟಿಸದೇ ಇರುವುದು, ಕಾಳಸಂತೆ ದರದಲ್ಲಿ ಮಾರಾಟ ಮಾಡುವುದು, ರೈತರು ಕೇಳಿದ ಬಿತ್ತನೆ ಬೀಜ, ಕ್ರಿಮಿನಾಶಕ ಹಾಗೂ ಗೊಬ್ಬರ ನೀಡದೇ ಕಳಪೆ ಹಾಗೂ ನಕಲಿ ಬ್ರಾಂಡ್ ಗಳನ್ನು ಕೊಳ್ಳುವಂತೆ ಒತ್ತಾಯಿಸುವುದು, ಮುಂತಾದ ಕಾನೂನು ಬಾಹಿರ ಹಾಗೂ ಅನುಚಿತ ವ್ಯಾಪಾರ ನಡೆಸುತ್ತಿದ್ದಾರೆ. ಇವುಗಳನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಹಾಪುರ ಶಾಸಕರಾದ ಶರಣಬಸಪ್ಪ ದರ್ಶನಾಪುರ ರವರನ್ನು ಆಗ್ರಹಿಸಿದರು. ಆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಓ, ಜಿಲ್ಲಾ ಕೃಷಿ ಜಂಟಿ ನಿರ್ದೇಶಕ ಮುಂತಾದ ಜಿಲ್ಲಾ ಮಟ್ಟದ ಅಧಿಕಾರಿಗಳಿದ್ದರು. ಇವರೆಲ್ಲರ ಸಮ್ಮುಖದಲ್ಲೇ ಉಸ್ತುವಾರಿ ಸಚಿವರಿಗೆ ಅಹವಾಲು ಹೇಳಿಕೊಳ್ಳಲಾಗಿದೆ.


ಹೋರಾಟದಲ್ಲಿ ಚನ್ನಪ್ಪ ಆನೇಗುಂದಿ

ಚನ್ನಪ್ಪನವರು ಮಾಡಿದ ಈ ಆರೋಪಗಳು ತಮಗಾದ ಅವಮಾನ ಎಂದು ಕೃಷಿ ಪರಿಕರಗಳ ಮಾರಾಟಗಾರರು ಭಾವಿಸಿದರು. ಚೆನ್ನಪ್ಪನವರು ತಮ್ಮ ಅಹವಾಲು ಹೇಳಿಕೊಳ್ಳುವ ಸಂದರ್ಭದಲ್ಲಿ ಸುಮ್ಮನಿದ್ದ ಮಾರಾಟಗಾರರು, ಸಚಿವರು ಮತ್ತು ಅಧಿಕಾರಿಗಳು ಕಾರ್ಯಕ್ರಮ ಮುಗಿಸಿ ತೆರಳಿದ ನಂತರ ಕೃಷಿ ಪರಿಕರಗಳ ಮಾರಾಟ ಸಂಘದ ರಾಜ್ಯಾಧ್ಯಕ್ಷ ಬಸನಗೌಡ ಮಾಲೀ ಪಾಟೀಲ್ ಹಾಗೂ ಅಶೋಕರೆಡ್ಡಿ ಲಿಂಗದಾಳ ರವರ ನೇತೃತ್ವದಲ್ಲಿ ಚನ್ನಪ್ಪ ಆನೇಗುಂದಿ ಅವರನ್ನು ಅವಾಚ್ಯವಾಗಿ ನಿಂದಿಸಿದರು. ಕೊಲೆ ಬೆದರಿಕೆ ಒಡ್ಡಿದರು ಮತ್ತು ಸರಿಯಾಗಿ ಬುದ್ದಿ ಕಲಿಸುವುದಾಗಿ ಬೆದರಿಕೆ ಹಾಕಿದರು.

**ಚನ್ನಪ್ಪ ವಿರುದ್ದ ದೂರು ದಾಖಲೆ**

ಕೃಷಿ ಪರಿಕರ ಮಾರಾಟಗಾರರಿಗೆ ಅವಹೇಳನಕಾರಿ ಹೇಳಿಕೆ ನೀಡಿದ್ದು, ಚೆನ್ನಪ್ಪ ಆನೇಗುಂದಿ ವರ್ತಕರ ಕ್ಷಮೆ ಯಾಚಿಸಬೇಕು ಅಥವ ಪೊಲೀಸರು ಅವರನ್ನು ಬಂಧಿಸಿ ಕ್ರಮಕೈಗೊಳ್ಳಬೇಕು ಎಂದು ವರ್ತಕರು ಪಟ್ಟು ಹಿಡಿದರು. ಕಾರ್ಯಾಗಾರದಲ್ಲಿ ಆಗಮಿಸಿದ್ದ ಸುಮಾರು 400 ಕ್ಕೂ ಹೆಚ್ಚು ವರ್ತಕರು ಮೆರವಣಿಗೆ ಮೂಲಕ ಭೀಮರಾಯಗುಡಿ ಪೊಲೀಸ್ ಠಾಣೆಗೆ ಹೋಗಿ, ಜೂನ್ 03 ರಂದು ಭೀಮರಾಯನ ಗುಡಿಯಲ್ಲಿ ಕೃಷಿ ಇಲಾಖೆ ವತಿಯಿಂದ ನಡೆದ ಮುಂಗಾರು ಹಬ್ಬ ಕಾರ್ಯಕ್ರಮದಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ರೈತ ಮುಖಂಡ ಚೆನ್ನಪ್ಪ ಆನೇಗುಂದಿ ಅವರು ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆಂದು ದೂರು ದಾಖಲಿಸಿದರು. ಮರುದಿನ ಜೂನ್ 4ರಂದು ತಮ್ಮ ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆ ವ್ಯಕ್ತಪಡಿಸಿದರು.

ರೈತ ಸಂಘದ ಮುಖಂಡ ಚೆನ್ನಪ್ಪ ಆನೇಗುಂದಿ ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು, ಇಲ್ಲವೇ ಪೊಲೀಸರು ಬಂಧಿಸಿ ಶಿಸ್ತು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ 1 ತಿಂಗಳು ಕಳೆದರು ನಾವು ಅಂಗಡಿಗಳನ್ನು ತೆರೆಯುವ ಮಾತೆ ಇಲ್ಲ. ಇದು ಕೇವಲ ತಾಲೂಕಿನಲ್ಲಿ ಅಷ್ಟೇ ಅಲ್ಲಾ, ಇಡೀ ಜಿಲ್ಲೆಯಾದ್ಯಂತ ಕೃಷಿ ಪರಿಕರಗಳ ಮಾರಾಟಗಾರರು ಅಂಗಡಿ ತೆಗೆಯುವುದಿಲ್ಲ ಎಂದು ಕೃಷಿ ಪರಿಕರ ಮಾರಾಟಗಾರರ ಸಂಘದ ಜಿಲ್ಲಾಧ್ಯಕ್ಷರಾದ ಬಸನಗೌಡ ಹೇಳಿದರು.

ಇದರಿಂದ ನಗರಕ್ಕೆಂದು ಬೀಜ, ರಸಗೊಬ್ಬರ ಖರೀದಿಗೆ ಬಂದಿದ್ದ ಅನ್ನದಾತರು ಸಪ್ಪೇ ಮೋರೆ ಹಾಕಿ ವಾಪಸ್ ತೆರಳಿದರು. ಈಗಾಗಲೇ ಮುಂಗಾರಿಗೂ ಮುನ್ನವೇ ಹೆಚ್ಚು ಮಳೆಯಾಗಿದ್ದು ರೈತರು ಬಿತ್ತನೆಗೆ ಉತ್ಸುಕರಾಗಿದ್ದು, ಬಿತ್ತನೆ ಬೀಜ, ರಸಗೊಬ್ಬರ ಖರೀದಿಯಲ್ಲಿ ನಿರತರಾಗಿದ್ದರು. ಆದರೆ 4ರಂದು ತಾಲೂಕಿನೆಲ್ಲೆಡೆ ಬೀಜದ ಅಂಗಡಿಗಳು ಬಂದ್ ಆಗಿದ್ದನ್ನು ಕಂಡು ವಾಪಸ್ ಗ್ರಾಮಗಳಿಗೆ ತೆರಳಿದರು. ವರ್ತಕರ ಈ ನಡೆ ರೈತರನ್ನು ಕೆರಳಿಸಿತು.

**ರೈತ ಮುಖಂಡರಿಂದ ಪ್ರತಿದೂರು**

ರೈತ ಮುಖಂಡ ಚೆನ್ನಪ್ಪ ಆನೇಗುಂದಿ ಅವರು ಅಂದು ನಡೆದ ಕಾರ್ಯಕ್ರಮದಲ್ಲಿ ನಕಲಿ ಬೀಜ, ನಕಲಿ ರಸಗೊಬ್ಬರ, ನಕಲಿ ಕ್ರಿಮಿನಾಶಕಗಳ ಅಭಾವ ಸೃಷ್ಟಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದು, ಅಂತಹ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ರೈತರ ಸಮಸ್ಯೆಗಳನ್ನು ಹೇಳಿದ್ದಾರೆ. ಆದರೆ ತಮ್ಮ ಕಳ್ಳ ವ್ಯಾಪಾರಕ್ಕೆ ಅಡ್ಡಿ ಆಗುತ್ತದೆ ಎಂದು ಕಾರ್ಯಕ್ರಮದಲ್ಲೆ ಇದ್ದ ವ್ಯಾಪರಸ್ಥರ ಸಂಘದ ಮುಖಂಡ ಬಸನಗೌಡ ಪಾಟೀಲ್ ಮರಕಲ್, ಅಶೋಕರೆಡ್ಡಿ ಲಿಂಗದಳ್ಳಿ ಇವರುಗಳು ಚೆನ್ನಪ್ಪ ಆನೇಗುಂದಿ ಅವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಹಲ್ಲೆ ಮಾಡಿದ್ದಾರೆ. ಇದನ್ನು ಬಿಡಿಸಲು ಹೋದ ನನ್ನ ಮೇಲೆಯೂ ಹಲ್ಲೆ ಮಾಡಲು ಮುಂದಾದರು. ಅವರು ಜೀವ ಬೆದರಿಕೆ ಹಾಕಿದ್ದಾರೆ ಎಂದು ರೈತ ಮುಖಂಡ ಭೀಮಣ್ಣ ಟಪ್ಪೇದಾರ ಪೊಲೀಸರಿಗೆ ಲಿಖಿತ ದೂರು ಸಲ್ಲಿಸಿದರು. ಆದರೆ, ಪೊಲೀಸರು ದೂರು ದಾಖಲಿಸಿಕೊಳ್ಳಲು ನಿರಾಕರಿಸಿದರು.

**ಸಂಯುಕ್ತ ರೈತ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ**

ಕೃಷಿ ಪರಿಕರ ಮಾರಾಟಗಾರ ಸಂಘದ ಜಿಲ್ಲಾಧ್ಯಕ್ಷ ಬಸನಗೌಡ ಹಾಗೂ ತಾಲೂಕ ಅಧ್ಯಕ್ಷ ಅಶೋಕರೆಡ್ಡಿ ಲಿಂಗದಳ್ಳಿ ಅವರ ಮೇಲೆ ದೂರು ದಾಖಲಾಗಬೇಕು ಮತ್ತು ಪಿಎಸ್ಐ ಅವರನ್ನು ಅಮಾನತು ಮಾಡಬೇಕು. ಬಿತ್ತನೆ ಬೀಜ, ಗೊಬ್ಬರ ಕ್ರಿಮಿನಾಶಕಗಳ ಮೇಲೆ ರೇಟ್ ಬೋರ್ಡ್ ಹಾಕಬೇಕು ಮತ್ತು ಸ್ಟಾಕ್ ಬೋರ್ಡ್ ಹಾಕಬೇಕು. ಕಡ್ಡಾಯವಾಗಿ ರಸೀದಿ ಕೊಡಬೇಕು ಎಂಬ ಬೇಡಿಕೆಗಳೊಂದಿಗೆ, ಜೂನ್ 6 ರಂದು ಶಹಾಪೂರ ಬಸವೇಶ್ವರ ವೃತ್ತದಲ್ಲಿ ಸಂಯುಕ್ತ ರೈತ ಹೋರಾಟ ಯಾದಗಿರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ರೈತರು ಧರಣಿ ಸತ್ಯಾಗ್ರಹ ನಡೆಸುತ್ತಾರೆ. ದಾಖಲಾಗಿರುವ ಸುಳ್ಳು ದೂರನ್ನು ರದ್ದುಪಡಿಸಿ, ಅನ್ಯಾಯ ಮತ್ತು ಅಕ್ರಮಗಳ ವಿರುದ್ಧ ಶ್ರಮಿಸುತ್ತಿರುವ ರೈತ ನಾಯಕರಿಗೆ ಸೂಕ್ತ ರಕ್ಷಣೆ ನೀಡಬೇಕು .ಇಲ್ಲವಾದರೆ ಬೃಹತ್ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ಎಚ್ಚರಿಸಿತು.

ಜೂನ್ 4ರ ರೈತರ ಬೃಹತ್ ಹೋರಾಟದ ಫಲವಾಗಿ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ಮುಂಗಾರು ಹಂಗಾಮಿನಲ್ಲಿ ಕೃತಕ ರಸಗೊಬ್ಬರ ಅಭಾವ ಹಾಗೂ ನಕಲಿ ಬೀಜ ಹಾಗೂ ರಸಗೊಬ್ಬರ ಮಾರಾಟ ಮಾಡುವ ಮಾಲೀಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಭೀಮರಾಯನಗುಡಿ ಮುಂಗಾರು ಹಬ್ಬ ಕಾರ್ಯಕ್ರಮದಲ್ಲಿ ರೈತ ಮುಖಂಡ ಚೆನ್ನಪ್ಪ ಆನೇಗುಂದಿ ಅವರು ಮಾತನಾಡುವಾಗ, ಕೃಷಿ ಪರಿಕರ ಮಾರಾಟಗಾರರಾದ ಬಸನಗೌಡ ಮರಕಲ್ ಹಾಗೂ ಅಶೋಕರೆಡ್ಡಿ ಲಿಂಗದಳ್ಳಿ ಅವರು ಜೀವ ಬೆದರಿಕೆ ಹಾಕಿದ್ದಾರೆ ಎಂದು ರೈತ ಮುಖಂಡ ಭೀಮಣ್ಣ ಟಪ್ಪೇದಾರ ಸಿಪಿಐ ಅವರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಕಳಪೆ ಬೀಜ ರಸಗೊಬ್ಬರ ಕ್ರಿಮಿನಾಶಕ ಕಾಳಸಂತೆ ಮಾರಾಟ ತಡೆಗಟ್ಟಲು ರೈತ ಸಂಪರ್ಕದಿಂದ ಸರಬರಾಜು ಮಾಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.






# ಸಶಸ್ತ್ರ ಪಡೆಗಳ ಗೌರವ, ಸ್ವಾಭಿಮಾನವನ್ನು ಉಳಿಸಿ:

## ರಾಷ್ಟ್ರಪತಿಗಳಿಗೆ ಮಾಜಿ ಸೇನಾ, ನೌಕಾಪಡೆ ಹಿರಿಯರ, ನಾಗರಿಕರ ಪತ್ರ

"ಬಿಜೆಪಿ ನಾಯಕರು ನೀಡಿದ ವಿವಾದಾತ್ಮಕ ಹೇಳಿಕೆಗಳ ಹಿನ್ನೆಲೆಯಲ್ಲಿ" ಭಾರತದ ಸಶಸ್ತ್ರ ಪಡೆಗಳ ಗೌರವ ಮತ್ತು ಸ್ವಾಭಿಮಾನವನ್ನು ಸುರಕ್ಷಿತಗೊಳಿಸಬೇಕು ಎಂದು ಸುಮಾರು ನೂರು ಹಿರಿಯ ನಾಗರಿಕರು, ಭಾರತದ ಸಶಸ್ತ್ರ ಪಡೆಗಳ ಸರ್ವೋಚ್ಚ ಸೇನಾಧಿಪತಿಯಾಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

ಇತ್ತೀಚಿನ ಭಾರತ–ಪಾಕಿಸ್ತಾನ ಸಂಘರ್ಷದ ಸಂದರ್ಭದಲ್ಲಿ ಮಧ್ಯಪ್ರದೇಶದ ಉಪಮುಖ್ಯಮಂತ್ರಿ ಜಗದೀಶ್ ದೇವ್ಡಾ ಮತ್ತು ಅದೇ ಸರ್ಕಾರದಲ್ಲಿ ಸಚಿವರಾಗಿರುವ ವಿಜಯ್ ಷಾ ರಂತಹ ಬಿಜೆಪಿ ನಾಯಕರು ಮಾಡಿರುವ ಟಿಪ್ಪಣಿಗಳು ಸಮಸ್ಯಾತ್ಮಕವಾಗಿವೆ ಎಂದು ಅವರು ಹೇಳಿದ್ದಾರೆ

ಭಾರತೀಯ ನೌಕಾಪಡೆಯ ಮಾಜಿ ಮುಖ್ಯಸ್ಥ ಅಡ್ಮಿರಲ್ ರಾಮದಾಸ್ (ನಿವೃತ್ತ) ಅವರ ಪತ್ನಿ ಶ್ರೀಮತಿ ಲಲಿತಾ ರಾಮದಾಸ್, ಭಾರತೀಯ ನೌಕಾಪಡೆಯ ಮಾಜಿ ಮುಖ್ಯಸ್ಥ ವಿಷ್ಣು ಭಾಗವತ್ (ನಿವೃತ್ತ), ಲೆಫ್ಟಿನೆಂಟ್ ಜನರಲ್ (ನಿವೃತ್ತ) ವಿಜಯ್ ಒಬೆರಾಯ್, ವೈಸ್ ಅಡ್ಮಿರಲ್ (ನಿವೃತ್ತ) ಸಂಜಯ್ ಮಿಶ್ರಾ, ಮೇಜರ್ ಎಂ.ಜಿ. ದೇವಸಹಾಯಂ ಐಎಎಸ್ (ನಿವೃತ್ತ) ಮತ್ತು ಇಎಎಸ್ ಶರ್ಮಾ ಮುಂತಾದವರು ಈ ಬಹಿರಂಗ ಪತ್ರಕ್ಕೆ ಸಹಿ ಮಾಡಿದ್ದಾರೆ.

ಈ ಇಬ್ಬರು ಸಚಿವರು ಮಾಡಿದ ಇಂತಹ ಅವಹೇಳನಕಾರಿ ಹೇಳಿಕೆಗಳು "ನಮ್ಮ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ನೈತಿಕ ಸ್ಥೈರ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ, ಇದರ ಪರಿಣಾಮವಾಗಿ ರಾಷ್ಟ್ರೀಯ ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆ ದುರ್ಬಲಗೊಳ್ಳುತ್ತದೆ" ಎಂದು ಈ ಪತ್ರದಲ್ಲಿ ಅವರು ಹೇಳಿದ್ದಾರೆ. ಆದ್ದರಿಂದ ಭಾರತೀಯ ನ್ಯಾಯ ಸಂಹಿತೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಇಂತಹ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಇಬ್ಬರು ಸಚಿವರ ವಿರುದ್ಧ ನಿರ್ಣಾಯಕ ಕ್ರಮ ಕೈಗೊಳ್ಳಬೇಕು ಎಂದು ಇವರುಗಳು ರಾಷ್ಟ್ರಪತಿಗಳನ್ನು ಒತ್ತಾಯಿಸಿದ್ದಾರೆ. ಮಧ್ಯಪ್ರದೇಶದ ಮುಖ್ಯಮಂತ್ರಿಗಳು ರಾಜ್ಯ ಸಚಿವ ಸಂಪುಟದಿಂದ ಇಬ್ಬರು ಸಚಿವರನ್ನು ತಕ್ಷಣ ತೆಗೆದುಹಾಕಬೇಕು, ಸಂಬಂಧಪಟ್ಟ ಪಕ್ಷದ ಕೇಂದ್ರ ನಾಯಕತ್ವವು ಇಬ್ಬರು ಸಚಿವರು ಮಾಡಿದ ಅವಹೇಳನಕಾರಿ ಹೇಳಿಕೆಗಳನ್ನು ಸಾರ್ವಜನಿಕವಾಗಿ ಖಂಡಿಸಬೇಕು ಮತ್ತು ಅವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸಶಸ್ತ್ರ ಪಡೆಗಳಲ್ಲಿನ ಕಠಿಣ ನಿಯಮಗಳು ಮತ್ತು ಶಿಸ್ತಿನ ಕಾರಣದಿಂದಾಗಿ ಅದರ ಸದಸ್ಯರು ಈ ಅವಹೇಳನಕಾರಿ ಹೇಳಿಕೆಗಳು ಮತ್ತು ಅವಮಾನಗಳಿಗೆ ಪ್ರತಿಕ್ರಿಯಿಸಲು ಸಾಧ್ಯವಾಗುತ್ತಿಲ್ಲ ಆದ್ದರಿಂದ, ಸಶಸ್ತ್ರ ಪಡೆಗಳ ಸರ್ವೋಚ್ಚ ಕಮಾಂಡರ್ ಆಗಿ ದ್ರೌಪದಿ ಮುರ್ಮುರವರು ಇಂತಹ ಅವಹೇಳನದಲ್ಲಿ ತೊಡಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮತ್ತು ಭವಿಷ್ಯದಲ್ಲಿ ಅದನ್ನು ತಡೆಯುವಂತೆ ಕ್ರಮ ಕೈಗೊಳ್ಳಬೇಕು ಪತ್ರದಲ್ಲಿ ಆಗ್ರಹಿಸಲಾಗಿದೆ.

ಮಧ್ಯಪ್ರದೇಶದ ಉಪಮುಖ್ಯಮಂತ್ರಿ ಜಗದೀಶ್ ದೇವ್ಡಾ ಮತ್ತು ಸಚಿವ ವಿಜಯ್ ಶಾ ಅವರ ಹೇಳಿಕೆಗಳು ಕೆಲವು ವಾರಗಳ ಹಿಂದೆ ತೀವ್ರ ಟೀಕೆಗೆ ಗುರಿಯಾದವು ಎಂಬುದನ್ನು ನೆನಪಿಸಿಕೊಳ್ಳಬಹುದು. ಇತ್ತೀಚಿನ ಭಾರತ–ಪಾಕ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಮೊದಲನೆಯದಾಗಿ, ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು ರಕ್ಷಣಾ ಪಡೆಗಳ ಅಧಿಕೃತ ವಕ್ತಾರೆ ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಪರೋಕ್ಷವಾಗಿ ಉದ್ದೇಶಿಸಿ ಸಾರ್ವಜನಿಕ ಹೇಳಿಕೆ ನೀಡಿದರು. ಷಾರವರ ಲಿಂಗ–ಸೂಕ್ಷ್ಮತೆಯಿಲ್ಲದ, ಜಾತ್ಯತೀತವಲ್ಲದ, ವಿಭಜಕ ಮನಸ್ಥಿತಿ ಈ ಹೇಳಿಕೆಯಲ್ಲಿ ಬಟ್ಟಬಯಲಾಗಿದೆ. ಇದು ಸಾಮಾನ್ಯವಾಗಿ ಮಹಿಳೆಯರನ್ನು ಸಾರ್ವತ್ರಿಕವಾಗಿ ಅವಹೇಳನ ಮಾಡುವ, ಕೋಮು ಬಿರುಕುಗಳನ್ನು ಪ್ರಚೋದಿಸುವ ಮತ್ತು ರಕ್ಷಣಾ ಪಡೆಗಳನ್ನು ಅವಮಾನಿಸುವ ಹೇಳಿಕೆಯಾಗಿದೆ ಎಂದು ಬಹಿರಂಗ ಪತ್ರ ವರ್ಣಿಸಿದೆ.

ಎರಡನೆಯದಾಗಿ, ಜಬಲ್ಪುರದಲ್ಲಿ ನಾಗರಿಕ ರಕ್ಷಣಾ ಸ್ವಯಂಸೇವಕರಿಗೆ ನಡೆದ ತರಬೇತಿ ಅಧಿವೇಶನದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಜಗದೀಶ್ ದೇವ್ಡಾ, "ನಾವು ಪ್ರಧಾನ ಮಂತ್ರಿಯವರಿಗೆ ಧನ್ಯವಾದ ಹೇಳಲು ಬಯಸುತ್ತೇವೆ; ಇಡೀ ದೇಶ, ದೇಶದ ಸೈನ್ಯ, ಅದರ ಸೈನಿಕರು ಅವರ ಪಾದಗಳಿಗೆ ನಮಸ್ಕರಿಸುತ್ತಿದ್ದಾರೆ. ಇಡೀ ದೇಶವೇ ಅವರ ಪಾದಗಳಿಗೆ ನಮಸ್ಕರಿಸುತ್ತಿದೆ. ಅವರು ನೀಡಿದ ಉತ್ತರಕ್ಕಾಗಿ" ಎಂದು ಹೇಳಿರುವುದಾಗಿ ವರದಿಯಾಗಿದೆ.

ಈ ಹಿಂದೆ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಏಪ್ರಿಲ್ 2019ರಲ್ಲಿ ಸಶಸ್ತ್ರ ಪಡೆಗಳನ್ನು "ಮೋದಿಜಿ ಕಿ ಸೇನಾ" ಎಂದು ಕರೆಯುವ ಮೂಲಕ ರಕ್ಷಣಾ ಪಡೆಗಳ ವಿರುದ್ಧ ಇದೇ ರೀತಿಯ ಅವಹೇಳನಕಾರಿ ಹೇಳಿಕೆ ನೀಡಿದ್ದರು ಎಂಬುದನ್ನು ಕೂಡ ಈ ಪತ್ರ ನೆನಪಿಸಿದೆ. ಸಶಸ್ತ್ರ ಪಡೆಗಳ ಘನತೆ ಮತ್ತು ನೈತಿಕತೆಯ ಮೇಲೆ ಪರಿಣಾಮ ಬೀರುವ ಈ ಎಲ್ಲಾ ಹೇಳಿಕೆಗಳ ಸಮಯದಲ್ಲಿ ಸರ್ಕಾರದ ಮೌನದಿಂದಾಗಿ ಸಶಸ್ತ್ರ ಪಡೆಗಳನ್ನು ಅವಮಾನಿಸುವ ಹೇಳಿಕೆಗಳು ಮತ್ತೆ ಮತ್ತೆ ಕೇಳುವಂತಾಗಿದೆ ಎಂದು ಪತ್ರ ಕಳವಳ ವ್ಯಕ್ತಪಡಿಸಿದೆ.

ಇಂತಹ "ನೀಚ ಕೃತ್ಯಗಳನ್ನು" ಪ್ರಶ್ನಿಸುವ ಮತ್ತು ಖಂಡಿಸುವ ಬದಲು, ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿಯ ಹಿರಿಯ ನಾಯಕರು ಮತ್ತು ಅವರ ಹಿಂಬಾಲಕರು ಅವರನ್ನು ಬೆಂಬಲಿಸುತ್ತಿರುವುದು ದುರದೃಷ್ಟಕರ ಎಂದೂ ಪತ್ರವು ಖೇದ ವ್ಯಕ್ತಪಡಿಸಿದೆ.

## ಕಮಲ್ ಹಾಸನ್ ಹೇಳಿಕೆ...... ಪುಟ 3 ರಿಂದ

ಹಿಂಡುವವರ ಪ್ರಯತ್ನಗಳು ಏನೂ ಕಡಿಮೆ ಇಲ್ಲ ಎನ್ನುವುದು ಕೂಡ ಗಮನಿಸಬೇಕಾದದ್ದೇ. ಇಂತಹ ಕಡೆಯಲ್ಲಿ ಎಲ್ಲಾ ವ್ಯಾಪಾರಿ ಹಿತಾಸಕ್ತಿಗಳನ್ನು ಮೀರಿ ನಿಲ್ಲಬೇಕಾದ ಸಂಗತಿ ನಮ್ಮೆದುರಿದೆ.

ಈ ವಿಷಯದಲ್ಲಿ ಪ್ರಾದೇಶಿಕ ವಿಭಿನ್ನತೆಗಳ ವೈಶಿಷ್ಟತೆ ಹೊಂದಿರುವ ಭಾಷೆಗಳ ಮೇಲೆ ಹಿಂದಿ, ಸಂಸ್ಕೃತ ದಂತಹ ಭಾಷೆಗಳ ಹೇರಿಕೆ ದಾಳಿ ತೀವ್ರಗೊಂಡಿರುವಾಗ, ಪ್ರಾದೇಶಿಕ ಜನ ಭಾಷೆಗಳ ಅಸ್ತಿತ್ವಕ್ಕೆ ತೀವ್ರ ಬೆದರಿಕೆ ಉಂಟಾಗಿರುವಾಗ ಕಮಲ್ ಹಾಸನ್ ಯೋಚನೆ ಆದ್ಯತೆ ಬದಲಾಗಿರಬೇಕಿತ್ತು. ಇರಬೇಕು.

ಈ ಸನ್ನಿವೇಶದ ಸೂಕ್ಷ್ಮತೆಗಳನ್ನು ಅರಿತು ಕಮಲಹಾಸನ್ ಮತ್ತು ಕನ್ನಡದ ಅಗ್ರಹ ನಿರತ ಸಂಘಟನೆಗಳು ಮತ್ತು ನಾಯಕರು ಎತ್ತಿರುವ ಆಕ್ಷೇಪಗಳ ಬಗ್ಗೆ ಯಾವುದೇ ಭಾಷಾ ಪ್ರೇಮದ ಉದ್ವೇಗವನ್ನಾಗಲೀ ಅಥವಾ ವ್ಯಾಪಾರೀ ಹಿತಾಸಕ್ತಿಗಳನ್ನಾಗಲೀ ಇರಿಸಿಕೊಳ್ಳದೆ ಮುಂದಡಿ ಇಡಬೇಕು. ಯಾರೇ ಆಗಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಿಗತವಾಗಿ ಇರಿಸಿ ಕೊಳ್ಳ ಬಹುದಾದರೂ ಸಾಮರಸ್ಯವನ್ನು ಕದಡಬಾರದು, ಅದನ್ನು ಕಾಪಾಡುವುದೇ ಆದ್ಯತೆ ಆಗಬೇಕು. ಸತ್ಯ ಸಂಗತಿಗಳತ್ತ ಮುಕ್ತ ಚಿಂತನೆಯನ್ನು ಇರಿಸಿಕೊಳ್ಳುವ ಹಕ್ಕನ್ನು ಹೊಂದುತ್ತಾ ಈಗಿನ ಕಹಿ ವಾತಾವರಣವನ್ನು ಬದಲಾಯಿಸಲು ಮುಂದಾಗಬೇಕಿದೆ. ನೆಲಮೂಲದ ಜನ ಭಾಷೆಗಳು ಪರಸ್ಪರ ಮುಖಾಮುಖಿಯಾದರೆ ಸರ್ವ ರೀತಿಯಲ್ಲಿ ಸರ್ವಾಧಿಕಾರವನ್ನು ಹೇರ ಬಯಸುವ ಏಕಸ್ವಾಮ್ಯದ ವಿಭಜನಕಾರಿ ಚಿಂತಕರಿಗೆ ಅತ್ಯಂತ ಸುಲಭ ಹಾದಿ ತೆರೆದಿಟ್ಟಂತೆ ಆಗುತ್ತದೆ ಎನ್ನುವ ಎಚ್ಚರ ಇರಬೇಕು.

**ಈಗಲಾದರೂ**

ಈಗಲಾದರೂ ನ್ಯಾಯಾಲಯದ ಮುಂದಿರುವ ಪ್ರಕರಣದಲ್ಲಿ ಇಂದಿನ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳುವುದು ಅಗತ್ಯ. (ನ್ಯಾಯಾಲಯದ ವಿಚಾರಣಾ ಧಾಟಿ, ಹೇಳಿಕೆಯ ದನಿಯೂ ಕೊಂಚ ಬದಲಾಗಬೇಕು) ಈ ಕಾರಣದಿಂದಲೇ ಸಿನಿಮಾ ಬಿಡುಗಡೆ ಮಾಡಲು ಅವಕಾಶ ನೀಡುವುದಿಲ್ಲ ಎಂಬ ನಿಲುವನ್ನು ಫಿಲಂ ಛೇಂಬರ್ ಸಹ ಬದಲಿಸಿಬೇಕು. ಈ ಬಗ್ಗೆ ಮಾತುಕತೆಗೆ ಇರುವ ನ್ಯಾಯಾಲಯದ ಅವಕಾಶವನ್ನು ಉಭಯತ್ರರು ಬಳಸಿಕೊಳ್ಳಬೇಕು.

ಗತಕಾಲದ ಬಗ್ಗೆ ಯಾರೂ ಹೇಗೆಲ್ಲಾ ಚಿಂತಿಸಬಹುದಾದರೂ ಗತಕಾಲದ ಊಹೆಗಳನ್ನು ಆಧರಿಸಿ ವರ್ತಮಾನದಲ್ಲಿ ಸಂಕ್ಷೋಭೆ ಸಂಕಷ್ಟಗಳನ್ನು ತರುವುದು ಯಾರಿಗೂ ಶೋಭಾಯಮಾನವಲ್ಲ. ಆ ವಿವೇಕ ಎಲ್ಲರಲ್ಲೂ ಇರಬೇಕು.

## ಹೊಸ ಕೇಂದ್ರ ಸಮಿತಿಯ ಕರೆ....... ಪುಟ 4 ರಿಂದ

ಜನಗಣತಿಯನ್ನು ಮತ್ತು ಅದರೊಂದಿಗೆ ಜಾತಿ ಗಣತಿಯನ್ನು ನಡೆಸುವುದಾಗಿ ಘೋಷಿಸಲೇ ಬೇಕಾಗಿ ಬಂದಿದೆ. ಸರ್ಕಾರವು ಅನುಸರಿಸಲು ಉದ್ದೇಶಿಸಿರುವ ವಿಧಾನಗಳನ್ನು ಕುರಿತಂತೆ ಅದರ ಉದ್ದೇಶಗಳ ಬಗ್ಗೆ ವಿವಿಧ ಸಂದೇಹಗಳು ವ್ಯಕ್ತವಾಗುತ್ತಿವೆ. ಸರ್ಕಾರವು ತಕ್ಷಣವೇ ಸರ್ವಪಕ್ಷ ಸಭೆಯನ್ನು ಕರೆದು ಈ ವಿಷಯಗಳ ಬಗ್ಗೆ ಚರ್ಚಿಸಬೇಕು.

**ರಾಜ್ಯಪಾಲರ ಅಧಿಕಾರಗಳ ಕುರಿತು ಸುಪ್ರೀಂ ಕೋರ್ಟ್ ತೀರ್ಪು:** ರಾಜ್ಯಪಾಲರ ಅಧಿಕಾರಗಳ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಸ್ವೀಕರಿಸಲು ಮತ್ತು ರಾಜ್ಯ ಶಾಸಕಾಂಗಗಳ ಇಚ್ಛೆಯನ್ನು ಗೌರವಿಸಲು ಕೇಂದ್ರ ಸರ್ಕಾರ ನಿರಾಕರಿಸುತ್ತಿದೆ. ಅದು ಸುಪ್ರೀಂ ಕೋರ್ಟ್‌ಗೆ ರಾಷ್ಟ್ರಪತಿಗಳ ಉಲ್ಲೇಖದ ಮೊರೆ ಹೋಗಿದೆ. ಇದು ಬಿಜೆಪಿಯ ಸರ್ವಾಧಿಕಾರಿ ನಿಲುವು ಮತ್ತು ಒಕ್ಕೂಟ ತತ್ವಗಳ ಬಗ್ಗೆ ಅದರ ತಿರಸ್ಕಾರವನ್ನು ಬಿಂಬಿಸುತ್ತದೆ.

**ಜುಲೈ 9ರ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ:** ಕೇಂದ್ರ ಕಾರ್ಮಿಕ ಸಂಘಗಳು ಕರೆ ನೀಡಿದ ಜುಲೈ 9ರ ಸಾರ್ವತ್ರಿಕ ಮುಷ್ಕರಕ್ಕೆ ಕೇಂದ್ರ ಸಮಿತಿಯು ಸಂಪೂರ್ಣ ಬೆಂಬಲವನ್ನು ನೀಡುತ್ತದೆ. ಅದೇ ದಿನ, ರೈತರು ಮತ್ತು ಕೃಷಿ ಕಾರ್ಮಿಕರು ತಮ್ಮ ಬೇಡಿಕೆಗಳ ಮೇಲೆ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಮುಷ್ಕರವನ್ನು ಯಶಸ್ವಿಗೊಳಿಸಲು ಪಕ್ಷದ ಎಲ್ಲಾ ಸದಸ್ಯರು ಮತ್ತು ಘಟಕಗಳು ಮುಷ್ಕರಕ್ಕೆ ಬೆಂಬಲವಾಗಿ ಸಕ್ರಿಯವಾಗಿ ಪ್ರಚಾರ ಮಾಡುವಂತೆ ಅದು ಕರೆ ನೀಡುತ್ತದೆ.

**ಈಶಾನ್ಯದಲ್ಲಿ ಪ್ರವಾಹ:** ಈಶಾನ್ಯ ಭಾರತದಲ್ಲಿ ಸಂಭವಿಸಿದ ಅಕಾಲಿಕ ಪ್ರವಾಹವು ಜೀವ ಮತ್ತು ಆಸ್ತಿಪಾಸ್ತಿಗೆ ಅಪಾರ ಹಾನಿಯನ್ನುಂಟುಮಾಡಿದೆ. 36ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ ಮತ್ತು 5,00,000 ಕ್ಕೂ ಹೆಚ್ಚು ಜನರು ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ. ಕೇಂದ್ರ ಸರ್ಕಾರವು ತಕ್ಷಣ ಮಧ್ಯಪ್ರವೇಶಿಸಿ ಸಾಕಷ್ಟು ಪರಿಹಾರ ಮತ್ತು ಪುನರ್ವಸತಿಯನ್ನು ಖಚಿತಪಡಿಸಬೇಕು.

**ಚುನಾವಣೆಗಳು:** ಬಿಹಾರ ವಿಧಾನಸಭೆಗೆ ಚುನಾವಣೆಗಳು ಅಕ್ಟೋಬರ್ 2025ರಲ್ಲಿ ನಡೆಯಲಿದ್ದು, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಸೋಲಿಗೆ ಜಂಟಿಯಾಗಿ ಕೆಲಸ ಮಾಡಲು ಪಕ್ಷವು ಬಿಹಾರದ ಎಲ್ಲಾ ಎಡ ಮತ್ತು ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆಗಳನ್ನು ಪ್ರಾರಂಭಿಸಿದೆ.

**ಭವಿಷ್ಯದ ಕರೆಗಳು:** ಭಯೋತ್ಪಾದನೆ, ಯುದ್ಧಕೋರತನ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಬಳಸಿಕೊಂಡು ಕೋಮುವಾದಿ ದ್ವೇಷವನ್ನು ಹರಡುವ ಪ್ರಯತ್ನಗಳ ವಿರುದ್ಧ ಜೂನ್‌ನಲ್ಲಿ ಒಂದು ವಾರದ ಪ್ರಚಾರಾಂದೋಲನ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ನೇತೃತ್ವದ ಪಕ್ಷದ ಒಂದು ನಿಯೋಗವು 2025 ಜೂನ್ 10–11 ರಂದು ಕಾಶ್ಮೀರಕ್ಕೆ ಭೇಟಿ ನೀಡಲಿದೆ. ನಿಯೋಗದ ಇತರ ಸದಸ್ಯರು: ಅಮ್ರಾ ರಾಮ್, ಪೊಲಿಟ್ ಬ್ಯೂರೋ ಸದಸ್ಯರು, ಸಂಸದ (ಲೋಕಸಭೆ); ಕೆ ರಾಧಾಕೃಷ್ಣನ್, ಕೇಂದ್ರ ಸಮಿತಿ ಸದಸ್ಯ, ಸಂಸದ (ಲೋಕಸಭೆ); ಕೇಂದ್ರ ಸಮಿತಿಯ ಆಹ್ವಾನಿತರಾದ ಜಾನ್ ಬ್ರಿಟ್ಟಾಸ್, ಸಂಸದ (ರಾಜ್ಯಸಭೆ); ಬಿಕಾಶ್ ರಂಜನ್ ಭಟ್ಟಾಚಾರ್ಯ, ಸಂಸದ (ರಾಜ್ಯಸಭೆ); ಸು. ವೆಂಕಟೇಶನ್, ಸಂಸದ (ಲೋಕಸಭೆ) ಮತ್ತು ಎ.ಎ. ರಹೀಮ್, ಸಂಸದ (ರಾಜ್ಯಸಭೆ).

ಪ್ಯಾಲೆಸ್ಟೈನ್, ಗಾಜಾದಲ್ಲಿ ಇಸ್ರೇಲ್ ನಡೆಸಿರುವ ನರಮೇಧದ ವಿರುದ್ಧ ಇಡೀ ಪಕ್ಷವು ತಕ್ಷಣವೇ ಪ್ರತಿಭಟನೆಗಳನ್ನು ಸಂಘಟಿಸುತ್ತವೆ.

ಕೇಂದ್ರ ಸಮಿತಿಯು ತುರ್ತು ಪರಿಸ್ಥಿತಿ ಘೋಷಣೆಯಾಗಿ 50 ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ್ತು ಪ್ರಸ್ತುತ ಸರ್ಕಾರದ ಸರ್ವಾಧಿಕಾರಶಾಹಿಯನ್ನು ಬಯಲಿಗೆಳೆಯಲು ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿತು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಆರ್‌ಎಸ್‌ಎಸ್‌ನ ವಂಚಕ ಪಾತ್ರವನ್ನು ಬಯಲಿಗೆಳೆಯಲು ಈ ಸಂದರ್ಭವನ್ನು ಬಳಸಿಕೊಳ್ಳಲಾಗುವುದು.

ಕೇಂದ್ರ ಸಮಿತಿಯು ಕೆಲವು ಸಾಂಸ್ಥಿಕ ವಿಷಯಗಳನ್ನು ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಂಡಿತು. ಎಂ.ಎ.ಬೇಬಿ, ಬಿ.ವಿ.ರಾಘವುಲು, ಮುರಳೀಧರನ್, ರಾಜೇಂದ್ರ ಶರ್ಮಾ, ಕೆ. ಹೇಮಲತಾ, ವಿಕ್ರಮ್ ಸಿಂಗ್ ಮತ್ತು ಕೆ.ಎನ್. ಉಮೇಶ್ ಅವರನ್ನು ಒಳಗೊಂಡ ಕೇಂದ್ರ ಕಾರ್ಯದರ್ಶಿ ಮಂಡಳಿಯನ್ನು ರಚಿಸಲಾಯಿತು.

# ಕಾಶ್ಮೀರ ದಾಳಿಗೆ ಭಾರತದ ಪ್ರತಿಕ್ರಿಯೆ: ಸಂಸತ್ತಿನ ಮುಂಚೂಣಿ ಅಗತ್ಯವೇ ಹೊರತು ಕೀಳು ಪ್ರಚಾರವಲ್ಲ

ಪ್ರಕಾಶ್ ಕಾರಟ್

‘ನನ್ನ ನರನಾಡಿಗಳಲ್ಲಿ ಹರಿಯುತ್ತಿರುವುದು ಸಿಂಧೂರವೇ ಹೊರತು ರಕ್ತವಲ್ಲ’ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಮಾತು ಸಿಂಧೂರೋತ್ತರ (ಅಂದರೆ ಆಪರೇಷನ್ ಸಿಂಧೂರ) ಪ್ರಚಾರಕ್ಕೆ ಸಂಬಂಧಿಸಿ ಮೋದಿಯ ಪ್ರಚಾರದ ಶೈಲಿಯನ್ನು ವ್ಯಾಖ್ಯಾನಿಸುತ್ತದೆ. ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ ಮೋದಿ ಅಥವಾ ಅವರ ಸರಕಾರ ಇದಕ್ಕಿಂತ ಬೇರೇನು ಮಾಡಬಹುದಿತ್ತು, ಅಲ್ಲವೇ? ಪಾರದರ್ಶಕತೆ ಅಥವಾ ಆತ್ಮಾವಲೋಕನ ಎನ್ನುವುದು ಯಾವತ್ತೂ ಈ ಸರಕಾರದ ಬಲ ಆಗಲೇ ಇಲ್ಲ.



ಕೃಪೆ: ಸತೀಶ್ ಆಚಾರ್ಯ

ಮೋದಿ ಸರಕಾರದ ವಿದೇಶಾಂಗ ನೀತಿಯು ಮುಖ್ಯವಾಗಿ ಪ್ರಧಾನಿಯನ್ನೇ ಕೇಂದ್ರ ಬಿಂದುವಾಗಿ ಬಿಂಬಿಸುವುದರ ಮೇಲೆ ಅವಲಂಬಿತವಾಗಿದೆ. ಒಂದು ಸುಸಂಬದ್ಧ ರಾಜತಾಂತ್ರಿಕತೆಯನ್ನು ಅನುಸರಿಸುವ ಬದಲು ವ್ಯಕ್ತಿ ಪೂಜೆ ಸಂಸ್ಕೃತಿಯನ್ನು ಬೆಳೆಸುವ ಪ್ರಯತ್ನದ ಭಾಗ ಇದಾಗಿದೆ. ಪ್ರಧಾನ ಮಂತ್ರಿಯ ವ್ಯಕ್ತಿತ್ವವೇ ವಿದೇಶಾಂಗ ನೀತಿಯ ಮುಂಚೂಣಿ ಅಂಶ ಎಂಬ ಸ್ಥಾನಮಾನ ನೀಡುವುದರಿಂದ ಸಾಂಪ್ರದಾಯಿಕ ರಾಜತಾಂತ್ರಿಕ ವಿವೇಕ ಎನ್ನುವುದು ಹಿನ್ನಡೆ ಅನುಭವಿಸಿದ್ದು ಸುಸಂಸ್ಥಾಪಿತ ರಾಜತಾಂತ್ರಿಕ ನಿಯಮಗಳು ಹಿನ್ನೆಲೆಗೆ ಸರಿದಿವೆ.

ಐತಿಹಾಸಿಕವಾಗಿ, ಭಾರತದ ವಿದೇಶಾಂಗ ನೀತಿಯು ದೇಶೀಯ ಅಡಿಪಾಯಗಳಲ್ಲಿ ಬೇರೂರಿದೆ: ಸದೃಢ ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ಒಕ್ಕೂಟತತ್ವ ಆಧಾರಿತ ವಿವಿಧತೆಯಲ್ಲಿ ಏಕತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕೆ ಬದ್ಧತೆ –ಇವೇ ಆ ತತ್ವಗಳಾಗಿವೆ. ಈ ತತ್ವಗಳೇ ರಾಷ್ಟ್ರಗಳ ಸಮೂಹದಲ್ಲಿ ಭಾರತದ ಗೌರವವನ್ನು ಹೆಚ್ಚಿಸಿದ ಮೂಲಾಧಾರಗಳಾಗಿವೆ. ಬಹುತ್ವ ಜನಸಂಖ್ಯೆಯ ಸಮಾನ ಪೌರತ್ವ ಆಧರಿಸಿದ ವಿವಿಧತೆಯಲ್ಲಿ ಏಕತೆಯು ಭಾರತೀಯ ಗಣರಾಜ್ಯದ ವಿಶಿಷ್ಟ ವ್ಯಾಖ್ಯಾನವಾಗಿದೆ.

ದುರಂತವೆಂದರೆ, ಈಗ ಈ ಪರಂಪರೆಯನ್ನು ಬುಡಮೇಲು ಮಾಡಲಾಗುತ್ತಿದೆ. ವ್ಯವಸ್ಥಿತ ಮತ್ತು ತತ್ವಬದ್ಧ ವಿದೇಶಾಂಗ ನೀತಿಯ ಸ್ಥಾನಕ್ಕೆ ಪರ್ಯಾಯವಾಗಿ ಇಮೇಜ್–ಕೇಂದ್ರಿತ, ವ್ಯಕ್ತಿ–ಕೇಂದ್ರಿತ ರಾಜತಾಂತ್ರಿಕತೆಯನ್ನು ಮೆರೆಸಲಾಗುತ್ತಿದೆ. ಆದರೆ, ವಿಶೇಷವಾಗಿ ಹಲವು ದಶಕಗಳ ಕಾಲದಲ್ಲಿ ರೂಪುಗೊಂಡ ಜಾಗತಿಕ ಸ್ಥಾನಮಾನ ಹೊಂದಿರುವ ಭಾರತದಂಥ ದೇಶವೊಂದಕ್ಕೆ ಈ ಧೋರಣೆ ಸಮರ್ಥನೀಯವಾದುದಲ್ಲ. ವಸಾಹತುಶಾಹಿ–ವಿರೋಧಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇರು ಹೊಂದಿರುವ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ವಿಕಾಸ ಹೊಂದಿದ್ದರಲ್ಲಿ ಅದು ಆಳವಾಗಿ ಬೇರೂರಿದೆ. ಈ ಪರಂಪರೆಯಿಂದ ದೂರವಿರುವುದು ಹಿಂದುತ್ವ ಶಕ್ತಿಗಳು ಮತ್ತು ಆರ್‌ಎಸ್‌ಎಸ್‌ನ ಸೈದ್ಧಾಂತಿಕ ಡಿಎನ್‌ಎಯ ಭಾಗವಾಗಿದೆ.

**ಭದ್ರತಾ ವೈಫಲ್ಯ**

ಪಹಲ್ಗಾಮ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ, ‘ಭದ್ರತಾ ವೈಫಲ್ಯ’ ಆಗಿದೆಯೆಂದು ಸರಕಾರ ಅಂತಿಮವಾಗಿ ಒಪ್ಪಿಕೊಳ್ಳುವ ಅನಿವಾರ್ಯತೆಗೆ ಒಳಗಾಯಿತು. ಆದರೆ ಈ ತಪ್ಪೊಪ್ಪಿಗೆಯು ತುಂಬಾ ಚಿಕ್ಕದು, ತುಂಬಾ ವಿಳಂಬವಾದುದು. ಈ ವೈಫಲ್ಯದ ಸ್ವರೂಪವೇನು ಹಾಗೂ ಅಗಾಧತೆ ಎಷ್ಟೆಂಬುದನ್ನು ಸ್ಪಷ್ಟವಾಗಿ ವಿವರಿಸಲು ಮಾತ್ರ ಸರಕಾರ ಈಗಲೂ ವಿಫಲವಾಗಿದೆ.

ನಾಲ್ಕು ದಿನಗಳ ಸಂಘರ್ಷದ ವೇಳೆ ಭಾರತದ ವಿಮಾನ ನಷ್ಟವಾಗಿದ್ದನ್ನು ಚೀಫ್ ಆಫ್ ಡಿಫೆನ್ಸ್ ಸ್ಟಾಫ್ (ಮೂರೂ ಪಡೆಗಳ ಮುಖ್ಯಸ್ಥ) ಅನಿಲ್ ಚೌಹಾಣ್ ಒಪ್ಪಿಕೊಂಡಿದ್ದಾರೆ. ಸಿಂಗಾಪುರದಲ್ಲಿ ನಡೆದ ಭದ್ರತಾ ಮಾತುಕತೆಗಳ ಸಂದರ್ಭದಲ್ಲಿ ಇದನ್ನು ಹೇಳಿರುವ ಚೌಹಾಣ್, ಆ ಬಗ್ಗೆ ಹೆಚ್ಚಿನ ವಿವರಗಳನ್ನು ಒದಗಿಸಿಲ್ಲ. ಇಂಥ ಅಪೂರ್ಣ ವಿವರಣೆಗಳು ವೈಫಲ್ಯದ ಪೂರ್ಣ ಮಾಹಿತಿಯನ್ನು ತಿಳಿಸುವಲ್ಲಿ ವಿಫಲವಾಗುತ್ತವೆ.

ಮೋದಿ ಸರಕಾರದ 11 ವರ್ಷದ ದಾಖಲೆಯನ್ನು –ಅದರಲ್ಲೂ ವಿಶೇಷವಾಗಿ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿದ್ದು– ಈಗಿನ ಬಿಕ್ಕಟ್ಟನ್ನು ಪರಿಗಣಿಸಿದಾಗ ನಿರ್ಲಕ್ಷಿಸುವಂತಿಲ್ಲ. 370ನೇ ವಿಧಿಯ ರದ್ದತಿ ಮತ್ತು ಭಾರತಕ್ಕೆ ಸೇರ್ಪಡೆಯಾಗಲು ಅವಕಾಶ ಮಾಡಿದ ಇನ್‌ಸ್ಟ್ರುಮೆಂಟ್ ಆಫ್ ಅಕ್ಸೆಶನ್‌ನ ಐತಿಹಾಸಿಕ ಅಂಶಗಳ ಮಹತ್ವವನ್ನು ತಳ್ಳಿ ಹಾಕಿದ್ದರಿಂದ ಭಾರತ ಒಕ್ಕೂಟದಲ್ಲಿ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆಯ ಪರಂಪರೆಯನ್ನು ಕಡೆಗಣಿಸಿದಂತಾಗಿದೆ. ಇದು ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರತಿರೋಧಿಸುವಲ್ಲಿ ಜಮ್ಮು ಮತ್ತು ಕಾಶ್ಮೀರದ, ಅದರಲ್ಲೂ ವಿಶೇಷವಾಗಿ ಕಣಿವೆ ಜನರ ನಿರ್ಣಾಯಕ ಪಾತ್ರವನ್ನು ಅಳಿಸಿ ಹಾಕುತ್ತದೆ ಎನ್ನುವುದು ಇನ್ನೂ ಗಂಭೀರ ವಿಚಾರವಾಗಿದೆ. ಪಹಲ್ಗಾಮ್ ದುರಂತದ ನಂತರದ ವಿದ್ಯಮಾನಗಳಿಂದ ಇದು ಇನ್ನೂ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಪಹಲ್ಗಾಮ್ ಕೊಲೆಗಳನ್ನು ಖಂಡಿಸಿ ಕಣಿವೆಯಾದ್ಯಂತ ಜನರು ಬೀದಿಗಿಳಿದು ಪ್ರತಿಭಟಿಸಿದ್ದು ಒಂದು ಪ್ರಬಲವಾದ ಸಾರ್ವಜನಿಕ ಒಗ್ಗಟ್ಟಾಗಿದ್ದು ಒಂದು ಸಕಾರಾತ್ಮಕ ಬೆಳವಣಿಗೆಯೂ ಆಗಿತ್ತು. ಆದರೆ ಸರಕಾರ ಇದನ್ನು ಗುರುತಿಸಲೂ ಇಲ್ಲ ಮೆಚ್ಚಿಕೊಳ್ಳಲೂ ಇಲ್ಲ. ಅದಕ್ಕೆ ಬದಲು, ದಾಳಿಯಲ್ಲಿ ಕಾಶ್ಮೀರಿ ಜನರನ್ನೇ ಸಿಲುಕಿಸಲು ಪ್ರಯತ್ನಗಳನ್ನು ನಡೆಸಲಾಯಿತು. ಇದು ಸರಕಾರದ ನಿಜವಾದ ಉದ್ದೇಶ ಹಾಗೂ ಸೈದ್ಧಾಂತಿಕ ದೃಷ್ಟಿಕೋನವನ್ನು ಬಯಲುಗೊಳಿಸುತ್ತದೆ. ಸಂವಿಧಾನದಲ್ಲಿ ಅಡಕವಾಗಿರುವ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ತತ್ವಗಳನ್ನು ಎತ್ತಿ ಹಿಡಿಯುವ ಸರಕಾರಗಳ ಬಹುಪಕ್ಷೀಯ ಧೋರಣೆಯನ್ನು ಈಗ ಆಳವಾಗಿ ಧ್ರುವೀಕೃತ ಧೋರಣೆಯಾಗಿ ಬದಲಾಯಿಸಲಾಗಿದೆ.

ಭಯೋತ್ಪಾದನೆ ವಿರುದ್ಧದ ಹೋರಾಟವನ್ನು ಮಿಲಿಟರಿ ಸಂಘರ್ಷವೊಂದಕ್ಕೆ ಮಾತ್ರ ಸೀಮಿತಗೊಳಿಸಬಾರದು. ಉದ್ದೇಶದಲ್ಲಿ ಸ್ಪಷ್ಟತೆ ಹಾಗೂ ರಾಷ್ಟ್ರೀಯ ಏಕತೆಯನ್ನು ಬಲಪಡಿಸುವಲ್ಲಿ ಶಾಂತಿಗಾಗಿನ ನಿಜವಾದ ಬಯಕೆ ಪ್ರತಿಫಲನಗೊಳ್ಳಬೇಕು. ವಿದೇಶ ನೀತಿ ಮತ್ತು ರಾಜತಾಂತ್ರಿಕತೆಯು ಪ್ರತ್ಯೇಕಿತ ವಿಚಾರಗಳಲ್ಲ. ಅವುಗಳು ದೇಶೀಯ ನೀತಿಗಳ ವಿಸ್ತರಣೆಗಳಾಗಿವೆ.

ಹೆಚ್ಚುತ್ತಿರುವ ಕೋಮುವಾದಿ ಧ್ರುವೀಕರಣ ಮತ್ತು ಜನತಾಂತ್ರಿಕ ಹಾಗೂ ಅಲ್ಪಸಂಖ್ಯಾತರ ಹಕ್ಕುಗಳ ನಾಶವೇ ಪ್ರಧಾನ ಲಕ್ಷಣವಾಗಿರುವ ಕಳೆದ 11 ವರ್ಷಗಳ ಬೆಳವಣಿಗೆಗಳನ್ನು ನಿರ್ಲಕ್ಷಿಸಲಾಗದು. ಅದರಲ್ಲೂ ವಿಶೇಷವಾಗಿ ಅಂತರ್ ಸಂಬಂಧ ಹೊಂದಿರುವ, ಮಾಹಿತಿಯೇ ಆಧಾರಿತ ಜಾಗತಿಕ ಪರಿಸ್ಥಿತಿಗಳ ಇಂದಿನ ದಿನಮಾನದಲ್ಲಿ ಹಾಗೆ ಮಾಡಲಾಗದು.

ನಾಗರಿಕ ಹಕ್ಕುಗಳ ಗುಂಪು ರೂಪಿಸಿರುವ ಸತ್ಯಶೋಧನಾ ತಂಡದ ವರದಿಯೊಂದು, ಪಹಲ್ಗಾಮ್ ದಾಳಿಗಳ ನಂತರದಲ್ಲಿ ನಡೆದಿರುವ 184 ಮುಸ್ಲಿಂ ವಿರೋಧಿ ದ್ವೇಷಾಪರಾಧಗಳನ್ನು ದಾಖಲಿಸಿದೆ. ಅವು ಒಟ್ಟಾರೆಯಾಗಿ ಮುಸ್ಲಿಮರು, ನಿರ್ದಿಷ್ಟವಾಗಿ ಕಾಶ್ಮೀರಿಗಳನ್ನು ಗುರಿಯಾಗಿಸಿದ ದಾಳಿಗಳಾಗಿವೆ. ಇಂಥ ಘಟನೆಗಳು ಎಗ್ಗಿಲ್ಲದೆ ಮುಂದುವರಿಯುತ್ತಿವೆ.

ಪಹಲ್ಗಾಮ್ ಕೊಲೆಗಳ ವಿಚಾರದಲ್ಲಿ ಸಮಗ್ರ ದಾಖಲೆಗಳು ಹಾಗೂ ಗಡಿಯಾಚೆಯಿಂದ ಪ್ರಭುತ್ವ (ಸರಕಾರ) ಪ್ರಾಯೋಜಿತ ಭಯೋತ್ಪಾದನಾ ಗುಂಪುಗಳ ವಿಶಾಲ ಕಾರ್ಯಯೋಜನೆಗಳ ಬಗೆಗಿನ ಪುರಾವೆಗಳ ಕೊರತೆಯಿಂದಾಗಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಕೇಸ್ ದುರ್ಬಲವಾಗಿದೆ. ಪಾಕಿಸ್ತಾನದ ಉದ್ದೇಶಗಳ ಬಗ್ಗೆ ಭಾರತದ ಜನರು ಮನವರಿಕೆ ಮಾಡಿಕೊಳ್ಳಬಹುದು, ಆದರೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ಮನವರಿಕೆ ಮಾಡಲು ಇನ್ನೂ ಹೆಚ್ಚು ಕಠಿಣ ಮತ್ತು ಪಾರದರ್ಶಕವಾದ ಪುರಾವೆಗಳು ಅಗತ್ಯವಾಗುತ್ತವೆ.

**ಯುದ್ಧ ಬಾಲಿವುಡ್ ಸಿನಿಮಾವಲ್ಲ...**

ಮಾಜಿ ಭೂ ಸೇನಾ ಮುಖ್ಯಸ್ಥ ಜನರಲ್ ಮನೋಜ್ ನರವಾಣೆ ಸ್ಪಷ್ಟತೆ ನೀಡಿರುವುದು ಒಂದು ಅಪರೂಪದ ಕ್ಷಣವಾಗಿದೆ. ‘ಯುದ್ಧವು ರೊಮ್ಯಾಂಟಿಕ್ ಅಲ್ಲ. ಅದು ನಿಮ್ಮ ಬಾಲಿವುಡ್ ಸಿನಿಮಾವಲ್ಲ. ಯುದ್ಧವೆನ್ನುವುದು ಒಂದು ಗಂಭೀರವಾದ ವ್ಯವಹಾರವಾಗಿದೆ... ಕೆಲವು ಅವಿವೇಕಿ ಜನರು ನಮ್ಮ ಮೇಲೆ ಯುದ್ಧವನ್ನು ಹೇರಿದರೂ ನಾವು ಅದಕ್ಕೆ ಪ್ರೋತ್ಸಾಹ ನೀಡಬಾರದು’ ಎಂದು ಜನರಲ್ ನರವಾಣೆ ಹೇಳಿದ್ದಾರೆ. ಸಿದ್ಧತೆ ಮಾಡಿಕೊಂಡಿರುವುದು ಅಗತ್ಯ ಎಂದು ನರವಾಣೆ ಪ್ರತಿಪಾದಿಸಿದ್ದಾರೆ. ಆದಾಗ್ಯೂ ಶಾಂತಿಯುತ ಮಾತುಕತೆಗಳು ಆದ್ಯತೆಯ ಹಾದಿಯಾಗಿರಬೇಕು ಎಂದೂ ಹೇಳಿದ್ದಾರೆ.

ರಾಜತಾಂತ್ರಿಕವಾಗಿ ವಿದೇಶಗಳಿಗೆ ವಿವರಣೆ ನೀಡುವ ಉದ್ದೇಶದಿಂದ ವಿವಿಧ ಪಕ್ಷಗಳನ್ನು ಪ್ರತಿನಿಧಿಸುವ 59 ಸಂಸತ್ ಸದಸ್ಯರನ್ನು 32 ದೇಶಗಳಿಗೆ ಕಳಿಸಲಾಗಿದೆ. ವಿದೇಶಿ ಸಂಸದರು, ಅಕಾಡೆಮಿಷಿಯನ್‌ಗಳು, ಚಿಂತನ ಚಿಲುಮೆಗಳು, ಮತ್ತು ಮಾಧ್ಯಮ ಪ್ರತಿನಿಧಿಗಳನ್ನು ಭೇಟಿಯಾಗಿ ಪಹಲ್ಗಾಮ್ ಪ್ರಕರಣದ ಕುರಿತು ಭಾರತ ಸರಕಾರದ ನಿಲುವನ್ನು ವಿವರಿಸುವುದು ಸಂಸದೀಯ ತಂಡಗಳ ಉದ್ದೇಶವಾಗಿದೆ. ಸಂಸದೀಯ ನಿಯೋಗಗಳು ಭೇಟಿಯಾಗುವ ದೇಶಗಳಲ್ಲಿ ಒಂದು ಕೂಡ ನೆರೆಹೊರೆ ದೇಶವಾಗಿಲ್ಲ ಎನ್ನುವುದು ಗಮನಾರ್ಹವಾಗಿದೆ. ‘ನರನಾಡಿಗಳಲ್ಲಿ ಹರಿಯುತ್ತಿರುವುದು ರಕ್ತವಲ್ಲ, ಸಿಂಧೂರ’ ಎಂಬ ಹೇಳಿಕೆ ಸಹಿತ ಪ್ರಧಾನಿಯ ದೇಶೀಯ ವಾಕ್ಚಾತುರ್ಯದ ಹೇಳಿಕೆಗಳಿಗೆ ತದ್ವಿರುದ್ಧವಾಗಿದೆ ಈ ರಾಜತಾಂತ್ರಿಕ ಪ್ರಯತ್ನ. ಭಯೋತ್ಪಾದನೆ–ವಿರೋಧಿ ಕಾರ್ಯಾಚರಣೆಗಳು ಸರಕಾರದ ದೊಡ್ಡ ಸಾಧನೆಗಳಲ್ಲಿ ಸೇರಿದೆ ಎಂದು ಮೋದಿ ಘೋಷಿಸಿರುವುದಕ್ಕೂ ಇದು ತದ್ವಿರುದ್ಧವಾಗಿದೆ.

ಆದರೆ ವಿಳಂಬವಾದ ಇಂಥ ರಾಜತಾಂತ್ರಿಕ ಮನವೊಲಿಕೆ ಪ್ರಕ್ರಿಯೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ (ಐಎಂಎಫ್) ನೂರು ಕೋಟಿ ಡಾಲರ್ ಸಾಲ ಮತ್ತು ವಿಶ್ವ ಬ್ಯಾಂಕ್‌ನಿಂದ 4 ಕೋಟಿ ಡಾಲರ್ ನೆರವನ್ನು ಪಾಕಿಸ್ತಾನ ಯಾವುದೇ ವಿರೋಧವಿಲ್ಲದೆ ಪಡೆದಿದ್ದರಲ್ಲಿ ವ್ಯಕ್ತವಾಗುತ್ತದೆ. ಇಸ್ರೇಲ್ ಮತ್ತು ತಾಲಿಬಾನ್ ನೇತೃತ್ವದ ಆಫ್ಘಾನಿಸ್ತಾನ ಸರಕಾರ ಹೊರತುಪಡಿಸಿದರೆ ಬೇರೆ ಯಾವುದೇ ದೇಶವು ಭಾರತದ ನಿಲುವನ್ನು ಬೆಂಬಲಿಸಿಲ್ಲ. ಈ ವಾಸ್ತವವನ್ನು ನಿರಾಕರಿಸುವುದರಿಂದ ಯಾರಿಗೂ ನೆರವಾಗುವುದಿಲ್ಲ.

**ನದಿ ನೀರಿನ ಹಂಚಿಕೆ ತತ್ವ**

ದಶಕಗಳಷ್ಟು ಹಳೆಯ ಸಿಂಧು ನದಿ ನೀರಿನ ಒಪ್ಪಂದವನ್ನು ರದ್ದುಪಡಿಸುವುದಾಗಿ ಹಠಾತ್ತನೆ ಘೋಷಿಸಿದ್ದು ಪರಿಸ್ಥಿತಿಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಮೇಲ್ಭಾಗ ಮತ್ತು ಕೆಳಭಾಗ ಈ ಎರಡೂ ಕಡೆಯವರು ನೀರಿನ ಹಕ್ಕು ಹೊಂದಿರುವುದನ್ನು ಜಾಗತಿಕವಾಗಿ ಮಾನ್ಯ ಮಾಡಲಾದ ಸೀಮಾಂತರ (ಟ್ರಾನ್ಸ್ ಬೌಂಡರಿ) ನದಿ ನೀರಿನ ಹಂಚಿಕೆ ತತ್ವ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಪರಸ್ಪರ ಸಹಮತದಿಂದ ರೂಪುಗೊಂಡ ಒಡಂಬಡಿಕೆಯನ್ನು ಏಕಪಕ್ಷೀಯವಾಗಿ ವಾಪಸ್ ಪಡೆಯುವ ಧೋರಣೆಗೆ ಅಂತಾರಾಷ್ಟ್ರೀಯ ಸಮುದಾಯದ ಬೆಂಬಲ ಸಿಗುವ ಸಾಧ್ಯತೆಯಿಲ್ಲ. ಪ್ರಾಯೋಗಿಕವಾಗಿ ಹೇಳುವುದಾದರೆ, ನದಿಯ ಹರಿವನ್ನು ತಡೆಯುವ ಜಲಾಶಯ ಸಾಮರ್ಥ್ಯವನ್ನು ಭಾರತ ಹೊಂದಿಲ್ಲ. ಮತ್ತು ನೀರಿಗೆ ಸಂಬಂಧಪಟ್ಟ ದತ್ತಾಂಶಗಳನ್ನು (ಹೈಡ್ರೊಲಾಜಿಕಲ್ ಡೇಟಾ) ಪ್ರಕಟಿಸುವುದನ್ನು ಸರಕಾರ ಪುನರಾರಂಭಿಸಿಲ್ಲ. ಒಂದು ವೇಳೆ ಪ್ರವಾಹ ಅಥವಾ ಬರಗಾಲ ಉಂಟಾದರೆ ಪಾಕಿಸ್ತಾನಿ ರೈತರು ಮತ್ತು ಜನಸಾಮಾನ್ಯರು ಹೆಚ್ಚಿನ ಸಂಕಟ ಅನುಭವಿಸ ಬೇಕಾಗುತ್ತದೆ ಎನ್ನುವುದು ಇದರ ಅರ್ಥವಾಗಿದೆ.

ಭಯೋತ್ಪಾದನೆ ವಿರುದ್ಧದ ಹೋರಾಟವು ಭಯೋತ್ಪಾದಕರ ವಿರುದ್ಧವಾದುದೇ ಹೊರತು ಜನರ ವಿರುದ್ಧದ ಹೋರಾಟವಲ್ಲ; ಅದು ಭಾರತದಲ್ಲೇ ಇರಲಿ, ಪಾಕಿಸ್ತಾನದಲ್ಲೇ ಇರಲಿ. ಭಯೋತ್ಪಾದಕರನ್ನು ಪ್ರತ್ಯೇಕಿಸಬೇಕು. ಇಡೀ ಸಮುದಾಯಗಳ ವಿರುದ್ಧ ಹೋರಾಡುವುದರಿಂದ ಯಾವುದೇ ಧನಾತ್ಮಕ ಫಲಿತಾಂಶ ಸಿಗುವುದಿಲ್ಲ. ಆದ್ದರಿಂದ, ರಣತಂತ್ರಾತ್ಮಕ ಪ್ರತಿಕ್ರಿಯೆಗಳು ಒಂದು ಸಮಗ್ರ ಹಾಗೂ ತತ್ವಬದ್ಧ ಕಾರ್ಯತಂತ್ರಕ್ಕೆ ಪರ್ಯಾಯ ಆಗಲಾರದು.

ಪ್ರಸಕ್ತ ಬಿಕ್ಕಟ್ಟಿನ ಕುರಿತ ಎಲ್ಲ ಅಂಶಗಳ ಚರ್ಚೆಗೆ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ಪ್ರತಿಪಕ್ಷಗಳು ಒತ್ತಾಯಿಸಿದ್ದು ನಿಖರವಾಗಿ ಈ ಕಾರಣಕ್ಕಾಗಿಯೇ ಆಗಿದೆ. ಇಂಥ ಅಧಿವೇಶನ ವ್ಯವಸ್ಥೆಗೊಳಿಸುವಂತೆ ಆಗ್ರಹಿಸಿ 16 ಪಕ್ಷಗಳು ಸರಕಾರಕ್ಕೆ ಜಂಟಿ ಪತ್ರ ಬರೆದಿವೆ. ಅನುಮಾನಗಳನ್ನು ನಿವಾರಿಸಲು ಇದು ಸೂಕ್ತವಾದ ವೇದಿಕೆ ಎಂಬುದು ಅವುಗಳ ಅಭಿಮತವಾಗಿದೆ. ನಾವು ಈಗ ಎದುರಿಸುತ್ತಿರುವ ಸವಾಲುಗಳಿಗೆ ಪ್ಯಾಚ್‌ವರ್ಕ್‌ಗಳು ಪರಿಹಾರ ಆಗಲಾರವು.

ಪ್ರಧಾನಿ ಮೋದಿ ಯುದ್ಧ ಪುಟ 12 ಕ್ಕೆ



**RCB ಗೆಲುವಿನ ಸಂಭ್ರಮವು 11 ಜನರ ಪ್ರಾಣವನ್ನು ಬಲಿ ತೆಗೆದುಕೊಂಡಿದೆ. ಕ್ರಿಕೆಟ್ ಎಂಬ ಆಟವನ್ನು ವ್ಯಾಪಾರೀಕರಣವನ್ನಾಗಿ ಮಾಡಿಕೊಂಡಿರುವುದು, ಅದರಲ್ಲಿ ನುಸುಳಿದ ರಾಜಕೀಯ ನಾಯಕರುಗಳು, ಐಪಿಎಲ್ ಗೆಲುವಿನಲ್ಲಿಯೂ ರಾಜಕೀಯ ಲಾಭ ಪಡೆಯಲು ಮುಗಿಬಿದ್ದ ರಾಜಕೀಯ ಪಕ್ಷಗಳು, ಜನರಲ್ಲಿ ಹುಚ್ಚು ಉನ್ಮಾದ ಸೃಷ್ಟಿಸಿದ ಟಿವಿ ಚಾನಲ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು, ಸಮೂಹ ಸನ್ನಿಗೆ ಒಳಗಾದ ಯುವಜನತೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ತಮಗಿರುವ ಅಧಿಕಾರವನ್ನು ನಿಷ್ಠುರವಾಗಿ ಪರಿಪಾಲಿಸದೆ ಒತ್ತಡಗಳಿಗೆ ಮಣಿದು ತರಾತುರಿಯಲ್ಲಿ ಸಂಭ್ರಮಾಚರಣೆ ಮಾಡಲು ಅವಕಾಶ ಕೊಟ್ಟ ಪೊಲೀಸರು, ಭದ್ರತಾ ವೈಫಲ್ಯ,... ಹೀಗೆ ಈ ದುರಂತಕ್ಕೆ ಹಲವು ಕಾರಣಗಳನ್ನು ಬೊಟ್ಟುಮಾಡಿ ತೋರಿಸಬಹುದು. ಮತ್ತೊಂದು ಆಘಾತಕಾರಿ ಸಂಗತಿಯೆಂದರೆ, ಐಪಿಎಲ್ ಫೈನಲ್ ಪಂದ್ಯ ಪ್ರಾರಂಭವಾಗುವ ಮೊದಲೇ ಆರ್‌ಸಿಬಿ ತಂಡದ ಗೆಲುವಿನ ಸಂಭ್ರಮಾಚರಣೆ ನಡೆಸುವ ನಿರ್ಧಾರವಾಗಿತ್ತು!!**

# ಐಪಿಎಲ್ ವಿಜಯೋತ್ಸವದಲ್ಲಿ ಕಾಲ್ತುಳಿತ: ಹೊಣೆ ಯಾರು?

ಸಿ.ಸಿದ್ದಯ್ಯ



ಕ್ರಿಕೆಟ್ ಜಗತ್ತಿನಲ್ಲಿ ಒಂದು ದೊಡ್ಡ ದುರಂತ ನಡೆದುಹೋಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ಗೆಲುವಿನ ಸಂಭ್ರಮಾಚರಣೆಯು ಹನ್ನೊಂದು ಜನರ ಪ್ರಾಣವನ್ನು ಬಲಿ ತೆಗೆದುಕೊಂಡಿದೆ. ಐಪಿಎಲ್ ಫೈನಲ್‌ನಲ್ಲಿ ಪ್ರಶಸ್ತಿ ಗೆದ್ದ RCB ತಂಡವನ್ನು ಗೌರವಿಸಲು ಜೂನ್ 4ರಂದು, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವನ್ನು ಭವ್ಯವಾಗಿ ಅಲಂಕರಿಸಲಾಗಿತ್ತು. ಕ್ರೀಡಾಂಗಣ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಲಕ್ಷಾಂತರ ಅಭಿಮಾನಿಗಳು ಮತ್ತು ಜನರು ನೆರೆದಿದ್ದರು. ಈ ವೇಳೆ 11 ಜನರು ಅನಗತ್ಯವಾಗಿ ಸಾವನ್ನಪ್ಪಿದ್ದು ಎಲ್ಲರನ್ನೂ ಆಘಾತಗೊಳಿಸಿದೆ. ಮೃತರಲ್ಲಿ ಆರು ಪುರುಷರು ಮತ್ತು ಐವರು ಮಹಿಳೆಯರು. ಮೃತರಲ್ಲಿ ಒಂಬತ್ತು ಮಂದಿ 20 ವರ್ಷದೊಳಗಿನ ಯುವಜನತೆ. ಕಾಲ್ತುಳಿತದಲ್ಲಿ 64 ಜನರು ಗಂಭೀರವಾಗಿ ಗಾಯಗೊಂಡರು.

**ಉನ್ಮಾದವೇ ವಿಜಯೋತ್ಸವಕ್ಕೆ ದಾರಿ ಮಾಡಿಕೊಟ್ಟಿತು**

ಐಪಿಎಲ್ ಪಂದ್ಯಗಳಲ್ಲಿ ಆರ್ ಸಿಬಿ ಗೆದ್ದರೆ ದೇಶವೇ ಗೆದ್ದಂತೆ ಎಂದು ಬಿಂಬಿಸಲಾಯ್ತು. ಕರ್ನಾಟಕದ ಕ್ರಿಕೆಟ್ ಅಭಿಮಾನಿಗಳಂತೂ ಆರ್‌ಸಿಬಿ ನಮ್ಮದೇ ಎಂಬಂತೆ ಅದರ ಗೆಲುವನ್ನು ಬಯಸಿದರು. 'ಈ ಸಲ ಕಪ್ ನಮ್ದೆ' ಎಂಬ ಘೋಷಣೆ ಎಲ್ಲೆಡೆ ಕೇಳಿಬಂತು. ಆರ್‌ಸಿಬಿ ಫೈನಲ್ ಪ್ರವೇಶಿಸಿದ ನಂತರ ಅಭಿಮಾನಿಗಳ ನಿರೀಕ್ಷೆ ಮತ್ತಷ್ಟು ಹೆಚ್ಚಾಯಿತು. ಜೂನ್ 3 ರಂದು ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಐಪಿಎಲ್ ಅಂತಿಮ ಪಂದ್ಯವನ್ನು ಕೋಟ್ಯಂತರ ಜನರು ವೀಕ್ಷಿಸಿದರು. ಆರ್‌ಸಿಬಿ ತಂಡ ಜಯಗಳಿಸುತ್ತಿದ್ದಂತೆಯೇ ರಾಜ್ಯದಲ್ಲೆಡೆ ಸಂಭ್ರಮಾಚರಣೆಗಳು ರಾತ್ರಿಯಿಡೀ ನಡೆದವು. ರಸ್ತೆಗಿಳಿದ ಯುವಜನ ಹುಚ್ಚೆದ್ದು ಕುಣಿದಾಡಿದರು. ಯುವಜನರ ಈ ಉನ್ಮಾದದ ಲಾಭ ಪಡೆಯಲು ಸರ್ಕಾರ, ರಾಜಕೀಯ ನಾಯಕರು, ಆರ್‌ಸಿಬಿ ತಂಡ, ಕರ್ನಾಟಕ ಕ್ರಿಕೆಟ್ ಸಂಸ್ಥೆ ಹಾಗೂ ಈವೆಂಟ್ ಮ್ಯಾನೆಜ್ ಮೆಂಟ್ ನಡೆಸುವು ಡಿಎನ್‌ಎ ಸಂಸ್ಥೆ ಮುಂದಾದವು. ವಿಧಾನಸೌಧದ ಎದುರು ಆರ್‌ಸಿಬಿ ತಂಡವನ್ನು ಸನ್ಮಾನಿಸಿದರೆ ಸರ್ಕಾರದ ವರ್ಚಸ್ಸು ಹೆಚ್ಚಾಗುತ್ತದೆ ಎಂದು ಕೆಲವರು ಸಲಹೆ ನೀಡಿದರು. ಅಲ್ಲಿ ಕೆಲವೇ ಗಂಟೆಗಳಲ್ಲಿ ವೇದಿಕೆ ನಿರ್ಮಾಣಗೊಂಡು ಎಲ್ಲವೂ ಸಜ್ಜಾಯಿತು.

**ಕೆಎಸ್ ಸಿಎ ಅಧಿಕಾರಿಯಿಂದ 3ರ ಸಂಜೆಯೇ ಮನವಿ!!**

ಜೂನ್ 3ರ ಸಂಜೆ 6 ಗಂಟೆಗೆ ತರಾತುರಿಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭೇಂದ್ ಘೋಷ್ ಅವರು, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ, ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮವನ್ನು ಜೂನ್ 4ರಂದು ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಠಾಣೆಯ ಇನ್ ಸ್ಪೆಕ್ಟರ್ ಎ.ಕೆ.ಗಿರೀಶ್ ಅವರಿಗೆ ಮನವಿ ಸಲ್ಲಿಸಿದ್ದರು ಎಂಬ ಅಂಶ ಪೊಲೀಸರ ಎಫ್‌ಐಆರ್ ನಿಂದ ತಿಳಿದುಬಂದಿದೆ. ಕ್ರಿಕೆಟ್ ಸಂಸ್ಥೆಯ ಈ ಮನವಿಗೆ ಇನ್‌ಸ್ಪೆಕ್ಟರ್ ಗಿರೀಶ್ ಅವರು, "ಆರ್‌ಸಿಬಿ ತಂಡ ಗೆದ್ದರೆ, ಅಭಿಮಾನಿಗಳು ರಾತ್ರಿಯಿಡೀ ಸಂಭ್ರಮವನ್ನು ಆಚರಿಸುತ್ತಾರೆ, ಇದಕ್ಕೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಬೇಕಿರುತ್ತದೆ. ನೀವು ತಿಳಿಸಿದಂತೆ ಕಾರ್ಯಕ್ರಮ ಆಯೋಜಿಸಿದರೆ ಲಕ್ಷಾಂತರ ಜನರು ಜಮಾವಣೆಗೊಂಡು ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ. ಅಲ್ಲದೆ ಸಮರ್ಪಕ ಬಂದೂಬಸ್ತ್ ವ್ಯವಸ್ಥೆಗೂ ಸಮಯಬೇಕಿದೆ" ಎಂದು ಹೇಳಿ ಅನುಮತಿ ನೀಡಲು ನಿರಾಕರಿಸಿದ್ದರು ಎಂಬ ಮಾಹಿತಿ ಎಫ್‌ಐಆರ್ ನಲ್ಲಿದೆ.

> ಪಂದ್ಯ ಪ್ರಾರಂಭವಾಗುವ ಮೊದಲೇ ಸಂಭ್ರಮಾಚರಣೆಗೆ ನಿರ್ಧಾರ!!

**ಪೊಲೀಸರ ಮೇಲೆ ಹೆಚ್ಚಿದ ಒತ್ತಡ**

ಜೂನ್ 4ರಂದು ನಡೆಸಲು ಉದ್ದೇಶಿಸಿದ್ದ ವಿಜಯೋತ್ಸವ ಕಾರ್ಯಕ್ರಮಕ್ಕೆ ಅನುಮತಿ ಕೊಟ್ಟು ಭದ್ರತೆ ಒದಗಿಸಬೇಕೆಂಬ ಒತ್ತಡ ಸರ್ಕಾರ ಮತ್ತು ರಾಜಕೀಯ ಪಕ್ಷಗಳ ನಾಯಕರಿಂದಲೂ, ಕ್ರಿಕೆಟ್ ಸಂಸ್ಥೆಯಿಂದಲೂ ಪೊಲೀಸರ ಮೇಲೆ ಬರತೊಡಗುತ್ತದೆ. ಒತ್ತಡ ಹೆಚ್ಚಾದಾಗ ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆ ಕೈಬಿಟ್ಟು, ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಸುವ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಅಂತಿಮ ಪಂದ್ಯ ಆರಂಭಕ್ಕೂ ಮುನ್ನ ಈ ವಿಜಯೋತ್ಸವ ಕಾರ್ಯಕ್ರಮಕ್ಕೆ ನಿರ್ಧರಿಸಲಾಗಿತ್ತು ಎಂಬುದನ್ನು ಗಮನಿಸಿದರೆ, ದೆಹಲಿಯಿಂದಲೂ ಈ ಒತ್ತಡ ಬಂದಿರಬಹುದು.

**ತೆರೆದ ವಾಹನದಲ್ಲಿ ಮೆರವಣಿಗೆ ಕೈಬಿಟ್ಟಿದ್ದಕ್ಕೆ ಬಿಜೆಪಿ ಟೀಕೆ**

ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆ ಕೈಬಿಟ್ಟ ಕ್ರಮವನ್ನು ಬಿಜೆಪಿ ಟೀಕಿಸುತ್ತದೆ. ಕಾಂಗ್ರೆಸ್ ಸರ್ಕಾರ ಅಭಿಮಾನಿಗಳ ಸಂಭ್ರಮಕ್ಕೆ



ಅಡ್ಡಿ ಮಾಡುತ್ತಿದೆ ಎಂದು ಅದು ಆರೋಪಿಸಿತು. 'ಬಿಜೆಪಿ ಕರ್ನಾಟಕ' ಫೇಸ್ಬುಕ್‌ನಲ್ಲಿ ಈ ರೀತಿ ಪೋಸ್ಟ್ ಮಾಡಲಾಗಿದೆ: "ಹಲವಾರು ವರ್ಷಗಳ ಅಭಿಮಾನಿಗಳ ಕನಸನ್ನು Royal Challengers Bangaluru ಈ ವರ್ಷ ನನಸು ಮಾಡಿದೆ!! ಆದರೆ ತೆರೆದ ವಾಹನದಲ್ಲಿ ಆಟಗಾರರ ವಿಜಯೋತ್ಸವಕ್ಕೆ ಅನುಮತಿ ನಿರಾಕರಿಸುವ ಮೂಲಕ ಆಕಸ್ಮಿಕ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ತಾವೊಬ್ಬ ಅಸಮರ್ಥ ಹಾಗೂ ಅದಕ್ಷ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ತಮ್ಮ ನೆಚ್ಚಿನ ಆಟಗಾರರನ್ನು ಅತಿ ಹತ್ತಿರದಿಂದ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾಯುತ್ತಿದ್ದು, ಅಭಿಮಾನಿಗಳ ಈ ಸಂಭ್ರಮಕ್ಕೆ ಕಲ್ಲು ಹಾಕಿದ ಪರಮೇಶ್ವರ್." ಎಂದು ಪೋಸ್ಟ್ ಮಾಡಿತ್ತು. ಅದರ ನಾಯಕರೂ ಸರ್ಕಾರದ ಈ ನಡೆಯನ್ನು ಟೀಕಿಸಿದರು. ಆ ಮೂಲಕ ಐಪಿಲ್ ಗೆಲುವು ಮತ್ತು ಅಭಿಮಾನಿಗಳ ಸಂಭ್ರಮದ ಲಾಭವನ್ನು ತಾನೂ ಪಡೆಯಲು ರಾಜ್ಯ ಬಿಜೆಪಿ ಯತ್ನಿಸಿತು. ಆದರೆ, ಕಾಳ್ತುಳಿತದ ನಂತರ ಇದಕ್ಕೆ ಸರ್ಕಾರವೇ ಹೊಣೆ, ಸಂಭ್ರಮದ ಮನೆಯಲ್ಲಿ ಸೂತಕ ಉಂಟಾಗಲು ನೇರ ಕಾರಣ ಸಿಎಂ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಎಂದು ಬಿಜೆಪಿ ಕಟುವಾಗಿ ಟೀಕಿಸಿತು.

**ವಿಜಯೋತ್ಸವದಲ್ಲಿ ಭಾಗಿಯಾಗಲು ಕರೆ, ನೇರ ಪ್ರಸಾರ**

ಆರ್‌ಸಿಬಿ ಪ್ರಾಂಚೈಸಿ ತನ್ನ ಅಧಿಕೃತ 'ಎಕ್ಸ್' (ಹಿಂದಿನ ಟ್ವಿಟರ್) ಖಾತೆಯಲ್ಲಿ ಜೂನ್ 4ರ ಬೆಳಿಗ್ಗೆ ಕ್ರೀಡಾಂಗಣದಲ್ಲಿ ನಡೆಯುವ ↗



## ಗೆಲ್ಲುವ ಮೊದಲೇ ಸಂಭ್ರಮಾಚರಣೆ ನಿರ್ಧಾರವಾಗಿತ್ತು!!

**ಆರ್‌ಸಿಬಿ ತಂಡದ ಗೆಲುವಿಗೆ ಮೊದಲೇ ಬೆಂಗಳೂರಿನಲ್ಲಿ ಗೆಲುವಿನ ಸಂಭ್ರಮಾಚರಣೆ ನಿರ್ಧಾರವಾಗಿತ್ತೇ? ಹೌದು ಎನ್ನುತ್ತದೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಎಫ್‌ಐಆರ್ ವರದಿ. ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಐಪಿಎಲ್ ಅಂತಿಮ ಪಂದ್ಯದ ಟಾಸ್ ಪ್ರಕ್ರಿಯೆ ಆರಂಭವಾಗುವ ಹೊತ್ತಿನಲ್ಲೇ ಬೆಂಗಳೂರಿನಲ್ಲಿ ವಿಜಯೋತ್ಸವ ಆಚರಿಸಲು ನಿರ್ಧರಿಸಲಾಗಿದೆ ಎಂಬ ಅಂಶ ಬಹಿರಂಗವಾಗಿದೆ. ಈ ನಿರ್ಧಾರದ ಬೆನ್ನಲ್ಲೆ ಜೂನ್ 3ರ ಸಂಜೆ 6 ಗಂಟೆಗೆ ತರಾತುರಿಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭೇಂದ್ ಘೋಷ್ ಅವರು, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ, ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮವನ್ನು ಜೂನ್ 4ರಂದು ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಠಾಣೆಯ ಇನ್ ಸ್ಪೆಕ್ಟರ್ ಎ.ಕೆ.ಗಿರೀಶ್ ಅವರಿಗೆ ಮನವಿ ಸಲ್ಲಿಸಿದ್ದರು ಎಂಬ ಅಂಶ ಪೊಲೀಸರ ಎಫ್‌ಐಆರ್ ನಿಂದ ತಿಳಿದುಬಂದಿದೆ. ಈ ವಿಷಯ ಕ್ರಿಕೆಟ್ ಅಭಿಮಾನಿಗಳನ್ನು ಬೆಚ್ಚಿಬೀಳಿಸಿದೆ. ಕೆಲವರು ಇದನ್ನು ಮ್ಯಾಚ್ ಫಿಕ್ಸಿಂಗ್ ಎನ್ನುತ್ತಾರೆ.**

# ಅವೈಜ್ಞಾನಿಕ, ಅವ್ಯವಸ್ಥಿತ ಆಯೋಜನೆಯಿಂದಾಗಿ 11 ಜನರ ಸಾವು

ಬೆಂಗಳೂರು: RCB ಕ್ರಿಕೆಟ್ ತಂಡದ ಗೆಲುವಿನ ಸಂಭ್ರಮಾಚರಣೆಯ ಹೊತ್ತಿನಲ್ಲಿ ಆಯೋಜಕರ ಅವೈಜ್ಞಾನಿಕ, ಅವ್ಯವಸ್ಥಿತ ಆಯೋಜನೆಯಿಂದಾಗಿ ಕಾಲ್ತುಳಿತಕ್ಕೆ ಸಿಲುಕಿ 11 ಜನರ ಜೀವವನ್ನು ಬಲಿ ಪಡೆದಿದೆ. ಇದೊಂದು ಅತ್ಯಂತ ದುರಂತದ ಘಟನೆಯಾಗಿದ್ದು, ಇದರ ಹೊಣೆಗಾರಿಕೆಯನ್ನು ಕರ್ನಾಟಕ ಸರಕಾರ ಹೊರಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಡಾ.ಕೆ.ಪ್ರಕಾಶ್ ಆಗ್ರಹಿಸಿದ್ದಾರೆ.

ನಿಧನರಾದ ಜೀವಗಳಿಗೆ ಸಂತಾಪಗಳನ್ನು ಸೂಚಿಸಿ, ಕುಟುಂಬದವರಿಗೆ ಸಾಂತ್ವನಗಳನ್ನು ಹೇಳಿರುವ ಅವರು, ಐಪಿಎಲ್ ಒಂದು ಖಾಸಗೀ ಸಂಸ್ಥೆ ಆಯೋಜಿಸಿದ ಕ್ರೀಡಾಕೂಟವಾಗಿದೆ. ಅದರ ಗೆಲುವು ನಲಿವುಗಳನ್ನು ಕ್ರೀಡಾ ಪ್ರೇಮಿಗಳು ಅವರಿಗೆ ಬೇಕಾದ ಹಾಗೆ ನಿನ್ನೆ ಇಡಿಯಾಗಿ ಸಂಭ್ರಮಿಸಿದ್ದಾರೆ. ಆದರೆ ಸರಕಾರವೊಂದು ಕ್ರೀಡೆಯನ್ನು ರಾಜಕೀಯವಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಿ, ಹತ್ತಾರು ಜೀವಗಳ ಬಲಿಗೆ ಕಾರಣವಾಗಿದೆ.

ಕ್ರಿಕೆಟ್ ಕ್ರೀಡೆಯನ್ನು ವ್ಯಾಪಾರೀಕರಣ ಮತ್ತು ಖಾಸಗೀಕರಣಕ್ಕೆ ಒಳಪಡಿಸಿದ ಪರಿಣಾಮವಾಗಿ ಉಂಟಾಗಿರುವ ಕ್ರಿಕೆಟ್ ಸರಕೀಕರಣದ ಲಾಭವನ್ನು ರಾಜಕೀಯವಾಗಿ ಪಡೆಯಲು ರಾಜ್ಯ ಸರ್ಕಾರ ಮುಂದಾಗಿ ಈ ಸಂಭ್ರಮಾಚರಣೆಯನ್ನು ಆಯೋಜಿಸಿದೆ ಎಂಬುದು ನಿಸ್ಸಂದೇಹ. ಹಾಗೆ ಮಾಡುವಾಗ ಸರಿಯಾದ ಪೂರ್ವ ಸಿದ್ಧತೆಗಳನ್ನು ಬಂದೋಬಸ್ತ್ ಮಾಡಿಕೊಳ್ಳದೇ, ಅವಸರದಲ್ಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸಿದ ಸರಕಾರದ ಕ್ರಮ ಖಂಡನೀಯ ಎಂದಿರುವ ಅವರು, ಈ ದುರಂತದ ನಿಜವಾದ ಕಾರಣವನ್ನು ಸಮಗ್ರ ತನಿಖೆಯ ಮೂಲಕ ಬಹಿರಂಗ ಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಸರಕಾರದ ಖರ್ಚು ವೆಚ್ಚದಲ್ಲಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡಬೇಕು. ನಿಧನರಾದ ಕುಟುಂಬಕ್ಕೆ ಸೂಕ್ತ ಪರಿಹಾರಗಳನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಜೂನ್ 3ರ ರಾತ್ರಿ ನಡೆದ ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್.ಸಿ.ಬಿ. ತಂಡವು ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದ ವಿರುದ್ಧ ಗೆಲುವು ಪಡೆದು ಟ್ರೋಫಿ ತನ್ನದಾಗಿಸಿಕೊಂಡಿತು. ಈ ಗೆಲುವಿನ ಸಂಭ್ರಮಾಚರಣೆಯನ್ನು ಜೂನ್ 4ರಂದು ಆರ್.ಸಿ.ಬಿ. ಫ್ರಾಂಚೈಸಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತು ರಾಜ್ಯ ಸರ್ಕಾರವು ವಿಧಾನಸೌಧ ಮುಂಭಾಗ ಆಯೋಜಿಸಿದ್ದವು. ಸಂಭ್ರಮಾಚರಣೆಗೆ ಸಾವಿರಾರು ಜನರು ಸೇರುವುದನ್ನು ರಾಜ್ಯ ಸರ್ಕಾರ ಅಂದಾಜಿಸಿ ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದ ಪರಿಣಾಮ ಹಾಗೂ ಭದ್ರತಾ ವೈಫಲ್ಯದಿಂದ ಕಾಲ್ತುಳಿತ ಸಂಭವಿಸಿ 11 ಜನರ ಸಾವು ಸಂಭವಿಸಿದೆ ಮತ್ತು ಹಲವಾರು ಮಂದಿಯನ್ನು ಗಂಭೀರವಾದ ಗಾಯದ ಸ್ಥಿತಿಗೆ ದೂಡುವಂತೆ ಮಾಡಿದೆ.








ವಿಜಯೋತ್ಸವದಲ್ಲಿ, ವಿಧಾನಸೌಧದಿಂದ ಕ್ರೀಡಾಂಗಣದವರೆಗೆ ನಡೆಯುವ ಆಟಗಾರರ ಮೆರವಣಿಯಲ್ಲಿ ಸಾರ್ವಜನಿಕರು ಹಾಗೂ ಅಭಿಮಾನಿಗಳು ಸೇರಬೇಕೆಂದು ಕರೆ ನೀಡುತ್ತದೆ. ಕ್ರೀಡಾಂಗಣ ಪ್ರವೇಶಕ್ಕೆ ಉಚಿತ ಟಿಕೆಟ್ ನೀಡಲಾಗುವುದು ಎಂದೂ ಆರ್‌ಸಿಬಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ. ಪೊಲೀಸ್ ಇಲಾಖೆಯ ಸಲಹೆಯನ್ನು ಗಂಭೀರವಾಗಿ ಪರಿಗಣಿಸದ ಸರ್ಕಾರ, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸುವುದಾಗಿ ಹೇಳುತ್ತದೆ. ಇದಕ್ಕೆ ಪೂರಕವಾಗಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯನವರ 'ಎಕ್ಸ್' ಹೇಳಿಕೆಗಳು ಹೊರಬರುತ್ತವೆ. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ತಂಡವನ್ನು ಸನ್ಮಾನಿಸುವ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬುತ್ತದೆ.

ಆರ್‌ಸಿಬಿ ಆಟಗಾರರ ತಂಡವು ಮಧ್ಯಾಹ್ನ 2.45 ರ ಹೊತ್ತಿಗೆ ಬೆಂಗಳೂರಿಗೆ ತಲುಪಿತು. ಡಿ.ಕೆ. ಶಿವಕುಮಾರ್ ಅವರು ಎಚ್.ಎ.ಎಲ್ ವಿಮಾನ ನಿಲ್ದಾಣದಲ್ಲೇ ತಂಡವನ್ನು ಎದುರುಗೊಳ್ಳುತ್ತಾರೆ ಮತ್ತು ವಿಶೇಷ ಭದ್ರತೆಯಲ್ಲಿ ಆಟಗಾರರನ್ನು ನಗರಕ್ಕೆ ಕರೆತರುತ್ತಾರೆ. ಇದರ ವಿಡಿಯೋಗಳು ಟಿವಿ ಚಾನಲ್‌ಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತವೆ. ಈ ಉನ್ಮಾದವೇ ವಿಜಯೋತ್ಸವಕ್ಕೆ ದಾರಿ ಮಾಡಿಕೊಟ್ಟಿತು. ಇದು ಸಾಗರೋಪಾದಿಯಲ್ಲಿ ಅಭಿಮಾನಿಗಳು ಸಂಭ್ರಮಾಚರಣೆಯ ಸ್ಥಳಗಳಿಗೆ ಬರಲು ಪ್ರಮುಖ ಕಾರಣ.

ನಗರದ ಎಲ್ಲಾ ಕಡೆಗಳಿಂದಲೂ ಗುಂಪು ಗುಂಪಾಗಿ ಜನರು ವಿಜಯೋತ್ಸವದ ಸ್ಥಳಕ್ಕೆ ಬರುತ್ತಿದ್ದಾಗಲೂ ಪೊಲೀಸರು ಅವರನ್ನು ದಾರಿಯಲ್ಲೇ ತಡೆಯುವ ಪ್ರಯತ್ನ ಮಾಡಲಿಲ್ಲವೇಕೆ? ಮೆಟ್ರೋ ರೈಲಿನಲ್ಲಿ, ಮೆಟ್ರೋ ನಿಲ್ದಾಣಗಳಲ್ಲಿ ಜನರು ಕಿಕ್ಕಿರಿದು ತಂಬಿದ್ದುದು ಪೊಲೀಸರಿಗೆ ತಿಳಿದಿರಲಿಲ್ಲವೇ? ಅವರಲ್ಲಿ ಬಹಳಷ್ಟು ಜನರನ್ನು ಅಲ್ಲಲ್ಲಿಯೇ ತಡೆಯಲು ಸಾಧ್ಯವಿತ್ತು. ಮೆಟ್ರೋ ರೈಲುಗಳನ್ನು ಕೆಲವು ಗಂಟೆಗಳವರೆಗೆ ನಿಲ್ಲಿಸುವುಂತೆ ಸೂಚಿಸಿದ್ದರೂ ಸಹಸ್ರಾರು ಜನರು ಅಲ್ಲಿಗೆ ಬರುವುದನ್ನು ತಡೆಯಬಹುದಿತ್ತು. ಕಾರ್ಯಕ್ರಮ ಸ್ಥಳಕ್ಕೆ ಬರುವ ವಾಹನಗಳನ್ನು, ಪಾದಚಾರಿಗಳನ್ನು ಐದಾರು ಕಿಮೀ ದೂರದಲ್ಲಿಯೇ ತಡೆಯಬಹುದಿತ್ತು. ಇವೆಲ್ಲವನ್ನು ಮಾಡದಂತೆ ಪೊಲೀಸರನ್ನು ತಡೆದವರು ಯಾರು? ಇದಕ್ಕೆ ಉತ್ತರವನ್ನೂ ಕಂಡುಕೊಳ್ಳಬೇಕಿದೆ.

**ಕ್ರೀಡಾಂಗಣದ ಗೇಟ್ ಗಳನ್ನು ಬಂದ್ ಮಾಡಿಸಿದ್ದರು!**

ರಾಜ್ಯ ಸರ್ಕಾರದ ಪರವಾಗಿ ವಿಧಾನಸೌಧದಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ತಂಡವನ್ನು ಸನ್ಮಾನಿಸಿದರು. ವಿಧಾನಸೌಧದ ಎದುರು ಹೆಚ್ಚಿನ ಸಂಖ್ಯೆಯ ಅಭಿಮಾನಿಗಳು ಕಾಣಿಸಬೇಕು ಎನ್ನುವ ಕಾರಣಕ್ಕೆ ಕೆಲವರು ಒತ್ತಡ ತಂದು ಕ್ರೀಡಾಂಗಣದ ಗೇಟ್ ಗಳನ್ನು ಬಂದ್ ಮಾಡಿಸಿದ್ದರು ಎಂದು ಹೇಳಲಾಗುತ್ತಿದೆ. ಮಧ್ಯಾಹ್ನ 3 ಗಂಟೆಯ ನಂತರ ಒಂದೊಂದೇ ಗೇಟ್ ತೆರೆದು ಪ್ರವೇಶ ನೀಡಲಾಯಿತು. ಕ್ರೀಡಾಂಗಣವು 35,000 ಪ್ರೇಕ್ಷಕರ ಸಾಮರ್ಥ್ಯವನ್ನು ಹೊಂದಿದೆ, ಆದರೆ ಕ್ರೀಡಾಂಗಣದ ಹೊರಗೆ ಸುಮಾರು ಎರಡು ಲಕ್ಷಕ್ಕೂ ಜನರು ಸೇರಿದ್ದರೆಂದು ಅಂದಾಜಿಸಲಾಗಿದೆ. ಇದರಿಂದಾಗಿ ತಳ್ಳಾಟ, ನೂಕುನುಗ್ಗಲು ಉಂಟಾಯಿತು. ಈ ಕಾರಣದಿಂದ ಮತ್ತೆ ಗೇಟ್ ಬಂದ್ ಮಾಡಲಾಯಿತು. ಇದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಯ್ತು. ಕೆಲವರು ಗೇಟ್ ತಳ್ಳಿದರೆ, ಕೆಲವರು ಕಾಂಪೌಂಡ್ ಹತ್ತಿದರು. ಕೆಲವೇ ನಿಮಷಗಳ ಅಂತರದಲ್ಲಿ ಕೆಲವು ಗೇಟ್ ಗಳ ಬಳಿ ಕಾಲ್ತುಳಿತ ಸಂಭವಿಸಿತು. ಜನರು ಮತ್ತು ಅಭಿಮಾನಿಗಳ ಭಾವನೆಗಳನ್ನು ನಿರ್ಣಯಿಸುವುದು ಮತ್ತು ಅದಕ್ಕೆ ಅನುಗುಣವಾಗಿ ವ್ಯವಸ್ಥೆ ಮಾಡುವುದು ಸರ್ಕಾರ ಮತ್ತು ಸಂಘಟಕರ ಜವಾಬ್ದಾರಿಯಾಗಿದೆ. ಆದರೆ, ಕೆಲವು ಗಂಟೆಗಳ ಕಾಲ ತಮಗೆ ಪ್ರಥಮ ಚಿಕಿತ್ಸೆ ಕೂಡ ಲಭ್ಯವಿರಲಿಲ್ಲ ಎಂದು ಸಂತ್ರಸ್ತರು ತಮಗಾದ ನೋವನ್ನು ಹೇಳಿಕೊಂಡಿದ್ದಾರೆ. ಸರ್ಕಾರ ಮತ್ತು ಕ್ರಿಕೆಟ್ ಮಂಡಳಿಯು ಅವರಿಗೆ ಮೂಲಭೂತ ಸೌಲಭ್ಯಗಳು ಮತ್ತು ಅಗತ್ಯವಾದಷ್ಟು ಭದ್ರತೆಯನ್ನು ಒದಗಿಸುವಲ್ಲಿ ವಿಫಲವಾಗಿರುವುದು ಇಲ್ಲಿ ಎದ್ದುಕಾಣುತ್ತದೆ.




**ಹೊರಗೆ ಸಾವು ಬದುಕಿನ ಹೋರಾಟ: ಒಳಗೆ ವಿಜಯೋತ್ಸವ!!**

ಗೆಲುವಿನ ಸಂಭ್ರಮದಲ್ಲಿ ಕ್ರೀಡಾಂಗಣದ ಹೊರೆಗೆ, ಕೆಲವರು ಜೀವ ಕಳೆದುಕೊಂಡು, ಸಹಸ್ರಾರು ಜನರು ಉಸಿರುಗಟ್ಟಿದ ಸ್ಥಿತಿಯಲ್ಲಿ ತಮ್ಮ ಪ್ರಾಣ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವ ಸಮಯದಲ್ಲಿಯೂ, ಕ್ರೀಡಾಂಗಣದ ಒಳಗೆ ವಿಜಯೋತ್ಸದ ಆಚರಣೆ ನಡೆಯುತ್ತಲೇ ಇತ್ತು. ಸಂಘಟಕರು, ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಕೂಡ ಆಚರಣೆಯತ್ತ ಗಮನಹರಿಸಿತ್ತು. ಆಂಬ್ಯುಲೆನ್ಸ್‌ಗಳು ಹೊರಗೆ ಸೈರನ್ ಮೊಳಗಿಸುತ್ತಿದ್ದಾಗ, ಸಂಘಟಕರು ಒಳಗೆ ಪ್ರೇಕ್ಷಕರೊಂದಿಗೆ ಸಂಭ್ರಮದಿಂದ ನೃತ್ಯ ಮಾಡುತ್ತಿದ್ದರು. ಕ್ರೀಡಾಂಗಣದೊಳಗಿನ ಈ ಸಂಭ್ರಮದ ಹೆಜ್ಜೆಗಳು ಅಸಭ್ಯ ದೃಶ್ಯವಾಯಿತು. ವಿರಾಟ್ ಕೊಹ್ಲಿ ಮತ್ತು ಅವರ ತಂಡವು ಕಿರೀಟದೊಂದಿಗೆ ಮೈದಾನವನ್ನು ಸುತ್ತುವರೆದಾಗ, ಹೊರಗೆ ಅಭಿಮಾನಿಗಳು ತಮ್ಮ ಜೀವಕ್ಕಾಗಿ ಹೋರಾಡುತ್ತಿದ್ದರು. ಹೊರಗೆ ಜನಸಮೂಹವನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಮಾಡುತ್ತಿದ್ದರು. ಕ್ರೀಡಾಂಗಣದೊಳಗಿನ ಯಾರಿಗೂ ಸಹ ಹೊರಗಿನ ದುರಂತದ ಬಗ್ಗೆ ತಿಳಿದಿರಲಿಲ್ಲ ಎಂದು ನಂಬಲಾಗದು. ಒಳಗಿದ್ದ ನಮಗೆ ಹೊರಗೆ ಏನಾಗುತ್ತಿದೆ ಎಂಬುದೇ ತಿಳಿದಿರಲಿಲ್ಲ ಎಂದು ಕ್ರೀಡಾಂಗಣದ ಒಳಗೆ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದ ಕ್ರೀಡಾಭಿಮಾನಿಯೊಬ್ಬರು ಹೇಳುತ್ತಾರೆ. ಏನೇ ಇರಲಿ, ದುರಂತದ ಹೊರತಾಗಿಯೂ ಕ್ರೀಡಾಂಗಣದಲ್ಲಿ ಆಚರಣೆಗಳು ನಡೆಯಬಾರದಿತ್ತು.

**ಹಲವು ಅಧಿಕಾರಿಗಳ ಮೇಲೆ ಕ್ರಮ**

ಈ ಘಟನೆ ನಡೆದ ನಂತರ ಜನರ ಅಕ್ರೋಶಗಳಿಂದ ಬೆಚ್ಚಿ ಬಿದ್ದಿರುವ ರಾಜ್ಯ ಸರ್ಕಾರ ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿತು. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಅವರನ್ನು ಹುದ್ದೆಯಿಂದ ಕೈಬಿಟ್ಟರು. ನಗರ ಪೊಲೀಸ್ ಆಯುಕ್ತರು ಸೇರಿದಂತೆ ಕೆಲವು ಪ್ರಮುಖ ಅಧಿಕಾರಿಗಳನ್ನು ಅಮಾನತುಗೊಳಿಸಿದೆ. ಗುಪ್ತಚರ ಮುಖ್ಯಸ್ಥರ ಜೊತೆಗೆ ಹಲವಾರು ಪ್ರಮುಖ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. RCB, ರಾಜ್ಯ ಕ್ರಿಕೆಟ್ ಸಂಘ ಮತ್ತು ಈವೆಂಟ್ ಮ್ಯಾನೇಜ್ಮೆಂಟ್ ವಿರುದ್ಧ FIR ದಾಖಲಿಸಲಾಗಿದೆ ಮತ್ತು ಕೆಲವರನ್ನು ಬಂಧಿಸಲಾಗಿದೆ. ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಸರ್ಕಾರ ಆದೇಶಿಸಿದೆ. ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ.

ಕಾಲ್ತುಳಿತದ ದೃಶ್ಯಗಳನ್ನು ನೋಡಿದರೆ, ನಿರ್ವಹಣೆ, ಭದ್ರತಾ ವೈಫಲ್ಯಗಳು ಮತ್ತು ಕಣ್ಗಾವಲು ಕೊರತೆ ಎದ್ದು ಕಾಣುತ್ತಿದೆ. ಘಟನೆಯ ಗಂಭೀರತೆಯಿಂದಾಗಿ, ರಾಜ್ಯ ಹೈಕೋರ್ಟ್ ಕೂಡ ಇದನ್ನು ಸ್ವಯಂಪ್ರೇರಿತವಾಗಿ ಸ್ವೀಕರಿಸಿ ಘಟನೆ ನಡೆದ ಮರುದಿನವೇ ತಕ್ಷಣದ ತನಿಖೆಯನ್ನು ಪ್ರಾರಂಭಿಸಿದೆ. ಎತ್ತಲಾದ ಪ್ರಶ್ನೆಗಳು ಮೂಲತಃ ಕಾರ್ಯಕ್ರಮ ನಿರ್ವಹಣೆಯಲ್ಲಿನ ನ್ಯೂನತೆಗಳನ್ನು ದೃಢಪಡಿಸುತ್ತಿವೆ. ರಾಜ್ಯ ಸರ್ಕಾರ ಅವುಗಳಲ್ಲಿ ಕೆಲವನ್ನು ಒಪ್ಪಿಕೊಂಡಿದೆ. ನ್ಯಾಯಾಲಯವು ಈ ತಿಂಗಳ 10 ರೊಳಗೆ ಸಮಗ್ರ ವರದಿಯನ್ನು ಸಲ್ಲಿಸುವಂತೆ ಸರ್ಕಾರಕ್ಕೆ ಆದೇಶಿಸಿತು.

**ಸಂಪೂರ್ಣವಾಗಿ ಒಂದು ವಾಣಿಜ್ಯ ಕ್ರೀಡೆ**

ನವ ಉದಾರವಾದಿ ನೀತಿಗಳ ಪರಿಣಾಮವಾಗಿ ಐಪಿಎಲ್ ಬಂದಿತು. ಇದು ಸಂಪೂರ್ಣವಾಗಿ ಒಂದು ವಾಣಿಜ್ಯ ಕ್ರೀಡೆ. ಇದರಲ್ಲಿ ಪ್ರಾಯೋಜಕರು ಮತ್ತು ದೈತ್ಯ ಕಂಪನಿಗಳ ಹಸ್ತಕ್ಷೇಪಕ್ಕೆ ಮಿತಿಯಿಲ್ಲ. ತಮ್ಮ ಆಯ್ಕೆಯ ಆಟಗಾರರನ್ನು ಖರೀದಿಸಿ ತಂಡಗಳನ್ನು ರಚಿಸಿ, ಅವರೊಂದಿಗೆ ಆಟವಾಡಿಸುವುದು ಮತ್ತು ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರ ಮಾಡುವುದು ಜೂಜಾಟವನ್ನು

ಪುಟ 15 ಕ್ಕೆ

# ಕನ್ನಡದಲ್ಲಿ ಪರಿಸರ ಸಾಹಿತ್ಯ



ಅಹಮದ್ ಹಗರೆ

'ಆಗಸದ ಬಾಗು,
ಚಂದ್ರಮನ ಗುಂಡಿನ ನುಣ್ಣು
ಸಾಗರದ ತೆರೆವಂಕು, ಗಿಡಬಳ್ಳಿ ಬಳುಕು
ಮೇಘವರ್ಣಚ್ಛಾಯೆಯೀ ಸೃಷ್ಟಿಯಿಂ ನಮ್ಮೊ
ಳಾಗಿಹುದು ರೂಪರುಚಿ ಮಂಕುತಿಮ್ಮ'

ಕನ್ನಡ ಸಾಹಿತ್ಯ ಭಾರತದಲ್ಲಿಯೇ ಹಿಂದಿಯ ನಂತರ ಅತಿಹೆಚ್ಚು ಜ್ಞಾನಪೀಠ ಪಡೆದ ಸಾಹಿತ್ಯದಂಗಳ, ಕನ್ನಡ ಸಾಹಿತ್ಯಲೋಕವನ್ನು ಕವಿರಾಜಮಾರ್ಗದಿಂದ ಹಿಡಿದು ಇಂದಿನವರೆಗೂ ಸುಮಾರು 1200 ವರ್ಷಗಳಿಂದ ಪಕ್ವವಾಗಿ, ವೈವಿಧ್ಯವಾಗಿ, ಬಹುಮುಖಿಯಾಗಿ ಸೃಜನ ಶೀಲಗೊಂಡು ಸಮೃದ್ಧವಾಗಿಸಿದೆ. ಕನ್ನಡ ಸಾಹಿತ್ಯಕ್ಕೆ ಪಂಪನ ಕಾಲದಲ್ಲಿ ಸೌಹಾರ್ದ ಲಹರಿಯಾಗಿ ಛಂದೋಬದ್ಧಗೊಂಡು, ವಚನ ಚಳವಳಿ ಕಾಲದಲ್ಲಿ ಜನಭಾಷೆಯಾಗಿ ಹದಗೊಂಡು, ನವೋದಯದ ಕಾಲಘಟ್ಟದಲ್ಲಿ ಸ್ವಾಭಿಮಾನ–ಸ್ವಾತಂತ್ರ್ಯದ ಹೊಳೆಯಾಗಿ, ಚಳುವಳಿಯ ದನಿಯಾಗಿ ವಿಕಾಸಗೊಂಡು ಅರಳಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದೆ ನಿಜ. ಆದರೆ ಈ ಕಾಲಘಟ್ಟದಲ್ಲೇ ನಿಧಾನವಾಗಿ ವಿಕಾಸಗೊಂಡು, ನವೋದಯ ಕಾಲದಲ್ಲಿ ಸ್ಫೋಟಿಸಿದ ವಿಜ್ಞಾನ ಜನರ ಬಳಿ ಬರದೆ ಬಂಡವಾಳಿಗರ ಪದತಳದಲ್ಲಿ ಕುಳಿತಾಗ, ಇಂಗ್ಲೀಷ್ ಸಾಹಿತ್ಯ ಮಾತನಾಡಿದಷ್ಟು ಗಟ್ಟಿಯಾಗಿ ಕನ್ನಡ ಸಾಹಿತ್ಯ ಮಾತನಾಡಲಿಲ್ಲ. ಈಗ ನವಉದಾರವಾದಿ ಕಾಲದಲ್ಲಿ ಪರಿಸರ ತನ್ನ ಅಸ್ತಿತ್ವ ಕಳೆದುಕೊಳ್ಳುವ ಹಂತಕ್ಕೆ ಬಂದಿದೆ, ಭೂ ತಾಪಮಾನ ಹವಾಮಾನದ ವಿಪ್ಲವಕ್ಕೆ ಕಾರಣವಾಗಿದೆ, ವಿಜ್ಞಾನಿಗಳು ಪರಿಸರ ಸಮಸ್ಥಿತಿಗೆ ತರಲು ಭೂತಾಪಮಾನವನ್ನು ನಿರ್ಭಂದಿಸುವ ಎಚ್ಚರಿಕೆಯ ಕರೆಗಂಟೆಯನ್ನು ಕೊಟ್ಟಿದ್ದಾರೆ, 20ನೇ ಶತಮಾನದ ಶ್ರೇಷ್ಠ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಬುದ್ಧಿ ಕಲಿಯದಿದ್ದರೆ 100 ವರ್ಷದೊಳಗೆ ಮಾನವ ಬೇರೆ ಗ್ರಹ ನೋಡಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ವಿಜ್ಞಾನಿಗಳ ಮಾತನ್ನು ಅಲಕ್ಷಿಸಿದ ಅಮೆರಿಕಾ ತಿಂಗಳಿಂದ ಕಾಡ್ಗಿಚ್ಚಿನ ದಳ್ಳುರಿಗೆ ಸಿಲುಕಿ ಅಪಾರ ಪ್ರಮಾಣದಲ್ಲಿ ನಷ್ಟ ಅನುಭವಿಸುತ್ತಿದೆ!

ರಿನೇಸಾನ್ಸಿಗೆ ಮುನ್ನುಡಿ ಬರೆದ ಸಾಹಿತ್ಯ, ಶರಣ ಚಳವಳಿಗೆ ಆಸರೆಯಾದ ಸಾಹಿತ್ಯ, ವಿಮೋಚನಾ ಹೋರಾಟಕ್ಕೆ ಹೆಗಲೆಣೆಯಾದ ಸಾಹಿತ್ಯ, ಈಗ ಹವಾಮಾನ ವಿಪ್ಲವದಲ್ಲಿ ನಲುಗುತ್ತಿರುವ ಮೂಕ ಪೃಥ್ವಿಗೆ ಮಾತು ನೀಡಬೇಕಿದೆ.

**ಪರಿಸರ ಸಾಹಿತ್ಯ ಮತ್ತು ಪರಿಸರ ವಿಮರ್ಶೆಯ ಮೂಲ ಮತ್ತು ಅಭಿವೃದ್ಧಿ**

'ಪರಿಸರ' ಎಂಬ ಪದವು 'ಎನ್ವಿರಾನ್' ಎಂಬ ಫ್ರೆಂಚ್ ಪದದಿಂದ ಹುಟ್ಟಿಕೊಂಡಿದೆ. ಅಂದರೆ 'ಸುತ್ತುವರೆದಿರುವುದು' ಎಂದು ಅರ್ಥ. ಈ ಶಬ್ಧ ಮೊದಲು ದಾಖಲೆಗೆ ಸಿಗುವುದು 1603ರಲ್ಲಿ, ಅದು ಆಕ್ಸ್‌ಫರ್ಡ್ ನಿಘಂಟಿನಲ್ಲಿ. ಅದರ ಪ್ರಕಾರ ಇಂಗ್ಲೀಷಿನ ಇಕಾಲಜಿ ಎಂಬ ಶಬ್ಧದಿಂದ ಬಂದದ್ದು, ಈ ಪದದ ನಿಜ ಮೂಲ ಗ್ರೀಕಿನ 'ಐಕೋಸ್'. ಐಕೋಸ್ ಅಂದರೆ 'ಮನೆ' ಎಂದರ್ಥ. ಹಾಗಾಗಿ ಪರಿಸರ ಎಂದರೆ ಮನೆಗೆ ಸಂಬಂದಿಸಿದ ವಿಷಯ. ಮನೆ ಎಂದ ಮೇಲೆ ಮನಸುಗಳು ಇರಬೇಕಲ್ಲ, ಹಾಗಾಗಿ ಪರಿಸರ ಎಂದರೆ ಮನಸುಗಳೂ ಕೂಡ ಎಂದರ್ಥ. 'ಮನಸುಗಳ ಮಾತು ಮಧುರ' ಅದು ಮಧುರ ಪರಿಸರದ ಲಾಲಿತ್ಯ. ಹಾಗಾಗಿ ಸಮಸ್ತ ವಸ್ತುಗಳ ವ್ಯವಸ್ಥಿತ ಸಮ್ಮಿಳನವೇ ಪರಿಸರ. ಅದರ ಅಂತರಂಗದ ಸತ್ವವನ್ನು ಸತ್ವಯುತವಾಗಿ ದಾಖಲಿಸುವುದೇ ಸಾಹಿತ್ಯ, ಪರಿಸರ ಸಾಹಿತ್ಯ. ಪರಿಸರ ಸಾಹಿತ್ಯದ ಪರಿಸರವನ್ನು ಮಾನವನ ಹಿತಾಸಕ್ತಿಗೆ ಒಗ್ಗಿಸಿಕೊಳ್ಳಲು ಮಾನವ ನಿಸರ್ಗದ ನಿಯಮವನ್ನು ಅರಿತು, ಹಿಡಿತ ಸಾಧಿಸಿದ, ತಾಂತ್ರಿಕತೆ ಕಲಿತ, ತಕ್ಷಣ ನಾಗರೀಕತೆ ವೇಗವಾಗಿ ಬೆಳೆಯಲಾರಂಬಿಸಿತು. ನಿಸರ್ಗದ ಬಳುವಳಿಯಾಗಿ ಕಾರು, ಬಂಗಲೆ ಎಲ್ಲಾ ಬಂತು, ಜೊತೆಗೆ ಹವಾಮಾನ ಸಂಕಟವೂ ತಂದಿತು!

**ಪರಿಸರ ವಿಜ್ಞಾನ**

ಪರಿಸರ ವಿಜ್ಞಾನ ("ಪರಿಸರ–ಕಾಲ್ಪನಿಕ" ಅಥವಾ "ಪರಿಸರ ಕಾದಂಬರಿ") ಎಂಬುದು ಸಾಹಿತ್ಯದ ಶಾಖೆಯಾಗಿ ಅದು ಶಾಸ್ತ್ರೀಯವಾಗಿ (ಕ್ಲಾಸಿಕ್), ಜಾನಪದೀಯವಾಗಿ (ಪ್ಯಾಸ್ಟೋರಲ್), ಕಾಲ್ಪನಿಕ ಸೃಜನಶೀಲವಾಗಿ (ಮ್ಯಾಜಿಕಲ್ ರಿಯಲಿಸಂ), ಜೀವಿಗಳ ರೂಪಾಂತರದ ಓದಾಗಿ (ಅನಿಮಲ್ ಮೆಟಾಮಾರ್ಫೋಸಸ್), ವೈಜ್ಞಾನಿಕ ಕಾಲ್ಪನಿಕ (ಸೈಂಟಿಫಿಕ್ ಫಿಕ್ಷನ್) ಮತ್ತು ಇತರ ಪ್ರಕಾರಗಳಲ್ಲಿ ವಿಲಿಯಂ ವರ್ಡ್ಸ್‌ವರ್ತ್ ಕಾಲದಿಂದಲೂ ತಣ್ಣಗೆ ಬೆಳೆದು ಬರುತ್ತಿತ್ತು. ಆದರೆ ಪರಿಸರ ಮತ್ತು ಪರಿಸರದ ಸ್ಫೋಟಕ್ಕೆ ವೇದಿಕೆಯನ್ನು ಸೃಷ್ಟಿಸಿದ 1960ರ ದಶಕದವರೆಗೆ ಪರಿಸರ ವಿಜ್ಞಾನ ಎಂಬ ಪದವು ಜನಪ್ರಿಯವಾಗಲಿಲ್ಲ.

ಅಮೆರಿಕದ ಲೇಖಕಿ, ಜೀವಶಾಸ್ತ್ರಜ್ಞೆ ಮತ್ತು ಪತ್ರಕರ್ತೆ ರ‍್ಯಾಕಲ್ ಕಾರ್ಸೆಲ್ 1962ರಲ್ಲಿ "ಸೈಲೆಂಟ್ ಸ್ಪ್ರಿಂಗ್" ಎನ್ನುವ ಶಿರೋನಾಮೆಯಲ್ಲಿ ಒಂದು ಸರಣಿ ಲೇಖನವನ್ನು ಅಮೆರಿಕಾದ ಪತ್ರಿಕೆಯೊಂದರಲ್ಲಿ ಪ್ರಕಟಿಸುತ್ತಾಳೆ. (ನಂತರ ಅದು ಪುಸ್ತಕ ರೂಪದಲ್ಲಿ ಹೊರಬರುತ್ತೆ) ಇದರಲ್ಲಿ ಕೈಗಾರಿಕೀಕರಣ ಮತ್ತು ನಗರೀಕರಣದ ದುಷ್ಪರಿಣಾಮಗಳ ಅನುಭವದ ಹಿನ್ನೆಲೆಯಲ್ಲಿ ರಾಸಾಯನಿಕ ಕೀಟನಾಶಕಗಳು ಜೀವವೈವಿಧ್ಯತೆಯ ಮೇಲೆ ಬೀರುವ ಋಣಾತ್ಮಕ ಪರಿಣಾಮದ ಬಗ್ಗೆ ದಾಖಲೆಗಳನ್ನಿಟ್ಟು ಮನಮುಟ್ಟುವಂತೆ ಬರೆಯುತ್ತಾಳೆ. ಈ ಲೇಖನ ಅಮೆರಿಕಾದ ಬೀದಿ ಬೀದಿಯಲ್ಲಿ ಚರ್ಚೆ ಹುಟ್ಟು ಹಾಕುತ್ತೆ. (ಯೂರೋಪು ಮತ್ತು ಅಮೆರಿಕ ಬಹಳ ವಿಶೇಷವಾದ ದೇಶಗಳು. ಅಲ್ಲಿ ಏನೇ ಹೊಸದು ಮೂಡಿದರೆ ಅದು ಬೀದಿಗಳಲ್ಲಿ, ಹೊಟೆಲ್ಲುಗಳಲ್ಲಿ, ಮರದ ನೆರಳಿನಲ್ಲಿ, ಶಾಲೆಯ ಸಭಾಂಗಣದಲ್ಲಿ, ಬಸ್ಸುಗಳಲ್ಲಿ ಪರ–ವಿರೋಧದ ಚರ್ಚೆಗಳ ಮೇಲೆ ಚರ್ಚೆಗಳು ನಡೆಯುತ್ತವೆ. ಅದಕ್ಕಾಗಿಯೇ ಅಲ್ಲಿ ವಿಜ್ಞಾನ ಬೆಳದದ್ದು). ಇದು ಪರಿಸರವಾದ ಹುಟ್ಟಲಿಕ್ಕೆ ಪ್ರೇರೇಪಿಸಿತು. ಇಕೋಕ್ರಿಟಿಸಿಸಮ್ ಎನ್ನುವ ಸಾಹಿತ್ಯ ಮತ್ತು ಪರಿಸರದ ಒಂದು ಅಂತರಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನಮಾಡುವ ಒಂದು ಶಾಖೆಯನ್ನೇ ಹುಟ್ಟಿಹಾಕುತ್ತೆ. ಬಹಳಷ್ಟು ಇಂಗ್ಲೀಷ್ ಸಾಹಿತಿಗಳು ತಮ್ಮ ವಿಷಯ ವಸ್ತುವನ್ನು ಇತ್ತಕಡೆ ತಿರುಗಿಸುತ್ತಾರೆ.

ಈ ಲೇಖನ ಹುಟ್ಟುಹಾಕಿದ ಚರ್ಚೆಯ ಭಾಗವಾಗಿ 1972ರಲ್ಲಿ ಸ್ಟಾಕ್ ಹೋಂನಲ್ಲಿ ನಡೆದ 'ಮಾನವ ಪರಿಸರ'ದ ಪ್ರಪ್ರಥಮ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ, ಪರಿಸರ ಸಮಸ್ಯೆಗಳನ್ನು ಬಗೆಹರಿಸಬೇಕಾದಲ್ಲಿ ಮೊಟ್ಟಮೊದಲಿಗೆ ಸಮಸ್ಯೆಯ ಸ್ಪಷ್ಟ ಪರಿಚಯವಿರಬೇಕು. ಅದು ನಮ್ಮ ದಿನನಿತ್ಯದ ಜೀವನದ ಮೇಲೆ ಬೀರುವ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಬೇಕು. ಎಂತಹ ಕ್ರಮಗಳಿಂದ ಸಮಸ್ಯೆಯನ್ನು ತಡೆಗಟ್ಟಿ ಪರಿಹರಿಸಬಹುದೆಂಬುದನ್ನು ತಿಳಿದುಕೊಳ್ಳಬೇಕು ಎನ್ನುವ ಮಹತ್ತರ ಕಲ್ಪನೆಯಲ್ಲಿ ಪರಿಸರ ಶಿಕ್ಷಣದ ಕಲ್ಪನೆ ಮೊದಲು ಮೂಡಿಬಂತು. ಪರಿಸರ ಶಿಕ್ಷಣ ಮೂಲಭೂತವಾಗಿ ಪರಿಸರದ ವಿವಿಧ ಘಟಕಗಳ ಮಹತ್ವವನ್ನು ತಿಳಿಸಿ, ಸಮಸ್ಯೆಯನ್ನು ಪರಿಚಯ ಮಾಡಿಕೊಟ್ಟು, ಪರಿಣಾಮಗಳನ್ನು ಎತ್ತಿತೋರಿಸಿ, ಪರಿಹಾರದ ಮಾರ್ಗಗಳನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಪರಿಸರ ಪರಿಣಾಮ ಸಾಹಿತ್ಯ ಹುಟ್ಟಿಕೊಳ್ಳಲು ಪ್ರೇರಣೆ ನೀಡುತ್ತದೆ.

**ಪರಿಸರದ ರಾಯಭಾರಿಯಾಗಿ ಭಾರತ ಮತ್ತು ಕನ್ನಡ ಸಾಹಿತ್ಯ**

ಭಾರತೀಯ ಇತಿಹಾಸಕಾರ, ಪರಿಸರವಾದಿ, ಬರಹಗಾರ ಮತ್ತು ಬುದ್ಧಿಜೀವಿ ರಾಮಚಂದ್ರ ಗುಹಾ ಮಹಾತ್ಮ ಗಾಂಧಿಯನ್ನು ಭಾರತದ ಆರಂಭಿಕ ಪರಿಸರವಾದಿ ಎಂದು ಪರಿಗಣಿಸುತ್ತಾರೆ. ಅವರ ಪ್ರಸಿದ್ಧ "ಜಾಗತಿಕ ಇತಿಹಾಸ" ಪುಸ್ತಕವು ವಿಶ್ವಾದ್ಯಂತ ಪರಿಸರ ಚಳುವಳಿಯೊಳಗಿನ ಪ್ರಮುಖ ಪ್ರವೃತ್ತಿಗಳು, ಕಲ್ಪನೆಗಳು, ಅಭಿಯಾನಗಳು ಮತ್ತು ಚಿಂತಕರ ಬಗ್ಗೆ ಸಮಗ್ರ ವಿವರಣೆಯನ್ನು ನೀಡುತ್ತದೆ. ರಾಮಚಂದ್ರ ಗುಹಾ ಮತ್ತು ಜೋನ್ ಮಾರ್ಟಿನೆಜ್ ಅಲಿಯರ್ ಬರೆದ "ಉತ್ತರ ಮತ್ತು ದಕ್ಷಿಣ" ಅನ್ನುವ ಪ್ರಬಂಧವು ನಾಲ್ಕು ಖಂಡಗಳಲ್ಲಿನ ಪರಿಸರ ಸಂಘರ್ಷಗಳು ಮತ್ತು ಸಿದ್ಧಾಂತಗಳ ವಿಶ್ಲೇಷಣೆಯನ್ನು ಪ್ರಸ್ತುತ ಪಡಿಸುತ್ತದೆ: ನಮ್ಮ ಪ್ರತಿಯೊಂದು ನದಿಗಳು ಜೈವಿಕವಾಗಿ ಸತ್ತಿವೆ" ಎಂದು ರಾಮಚಂದ್ರ ಗುಹಾ ಹೇಳುತ್ತಾರೆ. ನಮ್ಮ ಸ್ವಂತ ಒಳಿತಿಗಾಗಿ ನಮ್ಮ ಪರಿಸರದ ಮೇಲೆ ಮತ್ತಷ್ಟು ಹಾನಿ ಉಂಟುಮಾಡುವುದನ್ನು ನಿಲ್ಲಿಸಲು ಮಾನವ ಕುಲವನ್ನು ಒತ್ತಾಯಿಸುವ ಒಂದು ಕಳಕಳಿಯಿದೆ, ಸಾಹಿತ್ಯ ಇದರ ಮುಂಚೂಣಿಯಲ್ಲಿ ಇರಬೇಕು ಎನ್ನುತ್ತಾರೆ.

ಸಾಹಿತ್ಯ ಮತ್ತು ಭೌತಿಕ ಪರಿಸರದ ನಡುವಿನ ಸಂಬಂಧದ ಅಧ್ಯಯನವಾಗಿ ಚೆರಿಲ್ ಗ್ಲೋಟ್‌ಫೆಲ್ಟಿಯವರ ಪರಿಸರ–ವಿಮರ್ಶೆ (ದಿ ಇಕೋ–ಕ್ರಿಟಿಸಿಸಂ ರೀಡರ್) ಮತ್ತು ಸಾಹಿತ್ಯದಲ್ಲಿ ಒಂದು ಚಳುವಳಿಯಾಗಿ ರಾಚೆಲ್ ಕಾರ್ಸನ್ ಅವರ ಸೈಲೆಂಟ್ ವ್ಯಾಲಿ ಜಾಗತಿಕ ಪರಿಸರ ಸೃಜನಾತ್ಮಕ ಸಾಹಿತ್ಯದ ಸಂವರ್ಧನೆಗೆ ಅಡಿಗಲ್ಲಾಗಿದೆ.

ಭಾರತೀಯ ಇಂಗ್ಲಿಷ್ ಬರಹಗಾರರಲ್ಲಿ ಒಬ್ಬರಾದ ರಸ್ಕಿನ್ ಬಾಂಡ್ (1934–), ಪ್ರಕೃತಿಗೆ ಬಹಳ ಹತ್ತಿರದಲ್ಲಿ ಬದುಕುವವರು ಧನ್ಯರು ಎಂದು ನಂಬುತ್ತಾರೆ; ಪ್ರಕೃತಿ ಅವರ ಬರಹಗಳ ಆತ್ಮ. ವರ್ಡ್ಸ್‌ವರ್ತ್‌ನಂತೆ, ಅವರು ಪ್ರಕೃತಿಯಲ್ಲಿರುವ ಸಣ್ಣ ವಿಷಯಗಳಲ್ಲಿ ಮೋಡಿ ಮಾಡುವಿಕೆಯನ್ನು ಬರೆಯುತ್ತಾರೆ. ಅವರ ಸಣ್ಣ ಕಥೆಗಳಾದ ದಿ ಚೆರ್ರಿ ಟ್ರೀ, ಮೈ ಸ್ಟೋರೀಸ್ ಸ್ಟಿಲ್ ಗ್ರೋ ಇನ್ ಡೆಹ್ರಾ, ಟೈಮ್ ಸ್ಟಾಪ್ಸ್ ಅಟ್ ಶಾಮ್ಲಿ, ದಿ ವಿಂಡೋ, ಡಸ್ಟ್ ಆನ್ ದಿ ಮೌಂಟೇನ್; ಮನುಷ್ಯ ಮತ್ತು ಪ್ರಕೃತಿಯ ನಡುವಿನ ಆಳವಾದ ಬಂಧದ ಮಹತ್ವವನ್ನು ಚಿತ್ರಿಸುತ್ತದೆ.

ಭಾರತೀಯ ಲೇಖಕಿ ಅರುಂಧತಿ ರಾಯ್ ನವ ಅಭಿವೃದ್ಧಿಯು ಉಂಟುಮಾಡುವ ಪರಿಸರ ಬಿಕ್ಕಟ್ಟಿನಿಂದ ಜನರು ಎದುರಿಸುತ್ತಿರುವ ಸವಾಲುಗಳನ್ನು ತಮ್ಮ ಬರಹಗಳಲ್ಲಿ ಗಟ್ಟಿಯಾಗಿ ದಾಖಲಿಸುತ್ತಾರೆ. ಅವರ ಬುಕರ್ ಪ್ರಶಸ್ತಿ ವಿಜೇತ ಕಾದಂಬರಿ "ಗಾಡ್ಸ್ ಆಫ್ ಸ್ಮಾಲ್ ಥಿಂಗ್ಸ್"ನಲ್ಲಿ, ಭಾರತೀಯ ಸಮಾಜದಲ್ಲಿ ಸಣ್ಣ ಸಣ್ಣ ವಿಷಯಗಳನ್ನು ನಿರ್ಲಕ್ಷಿಸಲಾಗಿರುವುದರಿಂದ ಅವು ಉಂಟುಮಾಡುವ ಪರಿಸರ ಸಮಸ್ಯೆಗಳನ್ನು ಬೊಟ್ಟುಮಾಡಿ ತೋರಿಸುತ್ತಾರೆ. ಯುಗ ಯುಗಗಳಿಂದ ನಮ್ಮ ಪರಿಸರವು ಅಪರಿಮಿತ ವಿನಾಶವನ್ನು ಅನುಭವಿಸುತ್ತಿದೆ ಎಂದು ಅವರು ವಿಷಾದಿಸುತ್ತಾರೆ.

**ಕನ್ನಡ ಸಾಹಿತ್ಯದಲ್ಲಿ ಪರಿಸರದ ಒಳನೋಟ–ಹೊರನೋಟ**

ಇದೆಲ್ಲಾ ಜಾಗತಿಕ ಪರಿಸರ, ಪರಿಸರ ಶಿಕ್ಷಣ, ಪರಿಸರ ಚಳುವಳಿ ಮತ್ತು ಸೃಜನಶೀಲ ಪರಿಸರ ಸಾಹಿತ್ಯದ ಕೆಲಸವಾಯಿತು. 1200 ವರ್ಷದ ಇತಿಹಾಸದಿಂದ ಕನ್ನಡ ಸಾಹಿತ್ಯ ಪ್ರಕೃತಿ ಮತ್ತು ಪರಿಸರದ ಕುರಿತು ಏನೇನು ಮಾತಾಡಿದೆ ಎಂದು ಸಂಕ್ಷಿಪ್ತವಾಗಿ ನೋಡೋಣ.

ರಾಮಚಂದ್ರ ಗುಹ ಹಾಗೂ ಅರುಂದತಿ ರಾಯ್ ಅವರ ಪರಿಸರ ಸಾಹಿತ್ಯದ ಪ್ರಖರ ಕೆಲಸಗಳ ಕೃತಿಗಳು ಕನ್ನಡದಲ್ಲಿಯೂ ತರ್ಜುಮೆಗೊಂಡು ಕನ್ನಡ ಸಾಹಿತ್ಯಲೋಕಕ್ಕೆ ಹಸಿರು ಸಾಹಿತ್ಯದ ಜಾಗ ತುಂಬಿಕೊಳ್ಳುತ್ತದೆ.

ವೇದೋಪನಿಷತ್ತು ಕಾಲದ ಕವಿಗಳು ಪರಿಸರದ ನಡುಗರ್ಭದಲ್ಲೇ ಕುಳಿತು ಕಾವ್ಯಗಳನ್ನು, ಮಹಾಕಾವ್ಯಗಳನ್ನುರಚಿಸಿದರು,ಮೂಲಭೂತವಾಗಿ ರಾಮಾಯಣ ವಿಕಾಸವಾದದ ನೆಲೆಯಿಂದ ಬೋರ್ಗರೆವ ದಟ್ಟವಾದ ಕಾಡನ್ನು ಕೃಷಿಯೋಗ್ಯ ಮಾನವ ಭೂಮಿಯನ್ನಾಗಿ ಪರಿವರ್ತಿಸಿದ ಯಶೋಗಾಥೆ; ರಾಮಾಯಣದ ಸೀತೆ, ರಾಮ, ಹನುಮಂತ, ಶಬರಿ, ರಾವಣ, ವಾಲಿ–ಸುಗ್ರೀವರ ಪಾತ್ರಗಳು ಈ ವಿಕಾಸ ಸಂಕಥನದ ಸಂಕೇತಗಳು. ಮತ್ತು ಮಹಾಭಾರತ ಪರಿಸರದ ಮೇಲೆ ದಾಳಿಮಾಡುತ್ತಾ ಗಣ ಸಂಸ್ಕೃತಿಗಳು ಜನಪದಗಳಾಗಿ, ಮಹಾ ಜನಪದಗಳಾಗಿ ನಗರೀಕರಣಗೊಳ್ಳುವ ಪ್ರಕ್ರಿಯೆ. ಇಲ್ಲಿ ಪರಿಸರ ಒಂದು ತಪೋವನ.

ಹಳೆಗನ್ನಡದ ಕವಿಗಳು ಪರಿಸರ ಅಥವ ಪ್ರಕೃತಿಯನ್ನು ಸೌಂಧರ್ಯದ ವಸ್ತುವಾಗಿ, ರಮಣೀಯ ಅದ್ಭುತವಾಗಿ ನೋಡಿದರು ಮತ್ತದು ಅವರ ಕಾಲಕ್ಕೆ ಸಿರಿಸಂಪನ್ನ ದೈವೀ ಪ್ರಭೆಯಾಗಿತ್ತು, ಬದುಕಿನ ಅಗತ್ಯ ಪೂರೈಸಿಕೊಡುವ ಉಗ್ರ ಭಂಢಾರವಾಗಿತ್ತು, ಅದು ಅವರಿಗೆ ಮಾಯಾಲೋಕವಾಗಿತ್ತು, ಪೊಗದಸ್ತಾಗಿ ಹಸಿರು ಎತ್ತೆತ್ತಲೂ ಕಾಣಸಿಗುತ್ತಿತ್ತು. ಈಗ ನಾವು ಎದುರುಗೊಳ್ಳುತ್ತಿರುವ ಭೂಗೋಳ ವಿಪ್ಲವದ ಲವಲೇಶವೂ ಅವರಿಗೆ ಕಾಣಲು ಸಾಧ್ಯವೇ ಇರಲಿಲ್ಲ! ಹಾಗಾಗಿ ಪ್ರಕೃತಿ ಜೀವಪರಿಸರದ ಕೇಂದ್ರ ವಸ್ತುವಾಗಿತ್ತು. ಈ ನೆಲೆಯಲ್ಲೇ ತಮ್ಮ ಕಾವ್ಯದೊಳಗೆ ಸೌಂದರ್ಯದ ವಸ್ತುವಾಗಿ ಢಾಳಾಗಿ ಬಳಕೆಯಾಗುತ್ತಿತ್ತು. ಉದಾಹರಣೆಗೆ ಸೂರ್ಯೋದಯ ದೃಶ್ಯಕ್ಕಿಂತ ಅದರ ಪರಿಣಾಮವನ್ನು, ಕುಮುದ ಮುಚ್ಚಿತು, ಕಮಲ ಅರಳಿತು, ಚಕ್ರವಾಕಗಳು ಸೇರಿದುವು, ಚಿಕೋರ ಕೊರಗಿತು, ತಾರೆ ಮಸುಳಿದವು ಇತ್ಯಾದಿ ಕವಿಸಮಯ ನಿರ್ಮಿತವಾದ ಸಂಕೇತಗಳಿಂದ ಬಣ್ಣಿಸುವುದು ಅವರ ಪದ್ಧತಿ. (ಜಿ.ಎಸ್.ಎಸ್–ಸೌಂಧರ್ಯ ಸಮೀಕ್ಷೆ)

ಪಂಪನನ್ನು ಕುವೆಂಪು ರೀತಿ ಪ್ರಾಚೀನ ಕಾಲದ ಪ್ರಕೃತಿ ಕವಿ ಅಂತಲೂ ಕರೆಯುತ್ತಾರೆ ಅವನ ಕಾವ್ಯಲೋಕದ ಕಣ್ಣು ಪ್ರತಿಯೊಂದು ನಿಸರ್ಗ ಋತುವಿನ, ಕಾಡಿನ ಸೌಂದರ್ಯದ ಪದರ ಪದರಗಳನ್ನೂ ಬಲ್ಲುದು. ವಿಕ್ರಮಾರ್ಜುನ ವಿಜಯದಲ್ಲಿ ನಿಸರ್ಗ ವರ್ಣನೆ ಶ್ರೀಮಂತವಾಗಿದೆ: "ಮಳೆಯ ಮೋಡ ಕಟ್ಟಿದಾಗ, ದಿಕ್ಕೆಲ್ಲವೂ ಹಸುರಾಗಿ ಪಚ್ಚೆಯಲಿ ಮುಚ್ಚಿ ಮುಸುಕಿದಂತಾಯಿತು". ಮಾನವನ ಸಮಸ್ತ ಅಹಂಕಾರವನ್ನೂ ಪ್ರಕೃತಿಯ ರುದ್ರ ಸೌಂದರ್ಯ ಅರೆದು ಅಪ್ಪಳಿಸುತ್ತದೆ ಎಂದು ಪರಿಭಾವಿಸುತ್ತಾನೆ, "ಮರದಡಿಯ ನೆರಳೂ ಸಹ ಪಂಪನಿಗೆ

**"ಬೇಸಗೆಯಲ್ಲಿ ಕರಿಯ ಬಿಸಿಲ್!**
**ಕಾಡಿನಲ್ಲಿ ಉರಿಯ ಬಿಸಿಲ್,**
**ಗಿರಿತಟದಲ್ಲಿ ಅಚ್ಚರಿಯ ಬಿಸಿಲ್,**
**ಬಟ್ಟ ಬಯಲಲ್ಲಿ ಪಿರಿಯ ಬಿಸಿಲ್,"**

ಮುಂಗಾರಿನ ತಾಂಡವಾಡಂಬರವನ್ನು ಅದರ ರುದ್ರ ಮಾಧುರವನ್ನು ಪಂಪ, ರುದ್ರಭಟ್ಟ, ನಾಗಚಂದ್ರ, ಹರಿಹರ ತಮ್ಮ ಕವನಗಳ ಮೂಲಕ ಸೊಗಸಾಗಿ ಚಿತ್ರಿಸಿದ್ದಾರೆ.

ಹಾಗೆಯೇ ಲಕ್ಷ್ಮೀಶ ಕವಿಯ ಜೈಮಿನಿ ಭಾರತದಲ್ಲಿ ಪ್ರಕೃತಿ ವರ್ಣನೆ ಢಾಳಾಗಿವೆ "ಓಡಿದುವು ಪಕ್ಷಿಗಳು ಗೂಡಿಂಗೆ,

ಪುಟ 14 ಕ್ಕೆ







# ಆರ್‌ಬಿಐನ 2.69 ಲಕ್ಷ ಕೋಟಿ ರೂ.ಗಳ ಮಿಗುತಾಯ ಹಣ ಕೇಂದ್ರ ಸರ್ಕಾರಕ್ಕೆ

## ಆಪತ್ತಿನ ಕಾಲಕ್ಕೆಂದು ಕೂಡಿಡುವ ಮೀಸಲು ನಿಧಿಗೂ ಕೈ ಹಾಕಿದ ಮೋದಿ ಸರ್ಕಾರ

**ಆರ್‌ಬಿಐ ನ ಕೇಂದ್ರ ಮಂಡಳಿಯು 2024–25ರ ಹಣಕಾಸು ವರ್ಷಕ್ಕೆ 2.69 ಲಕ್ಷ ಕೋಟಿ ರೂ.ಗಳ ಮಿಗುತೆ ಹಣವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲು ಅನುಮೋದನೆ ನೀಡಿದೆ. ಇದು ಇದುವರೆಗಿನ ಅತ್ಯಂತ ಹೆಚ್ಚಿನ ಮೊತ್ತ ಎನ್ನಲಾಗಿದೆ. ಈ ದಾಖಲೆ ವರ್ಗಾವಣೆಗೆ ಕಾರಣವೇನು? ‘ಮಿಗುತೆ ಹಣ’ ಆಗಿದ್ದು ಹೇಗೆ? ‘‘ರಿಸರ್ವ್ ಬ್ಯಾಂಕ್ ಮೀಸಲನ್ನು ಅತ್ಯಂತ ತಳಮಟ್ಟದಲ್ಲಿ ಇಡುವುದು ಒಳ್ಳೆಯದಲ್ಲ, ಇಂತಹ ಕ್ರಮ ಅದರ ಸ್ವಾಯತ್ತತೆಗೆ ಧಕ್ಕೆ ತರುತ್ತದೆ, ಈ ಮೀಸಲು ನಿಧಿ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನೆರವಿಗೆ ಬರುತ್ತದೆ, ಇದನ್ನು ಸರ್ಕಾರಕ್ಕೆ ವರ್ಗಾವಣೆ ಮಾಡುವುದು ಬೇಡ’’ ಎಂದು ಆರ್ಥಿಕ ತಜ್ಞರು ಮತ್ತು ಕೆಲವು ವಿರೋಧ ಪಕ್ಷಗಳ ನಾಯಕರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರು. ಈ ಪ್ರಕ್ರಿಯೆಯಲ್ಲಿ ಇಬ್ಬರು ಉನ್ನತ ಆರ್‌ಬಿಐ ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ. ಆದರೂ ಕೇಂದ್ರ ಸರ್ಕಾರ ಎಲ್ಲ ಎಚ್ಚರಿಕೆಗಳನ್ನು ಮೀರಿ ಆರ್‌ಬಿಐ ನ ಮೀಸಲು ನಿಧಿಯಿಂದ ಹಣ ಪಡೆದುಕೊಳ್ಳುತ್ತಿದೆ.**

ಭಾರತೀಯ ರಿಸರ್ವ್ ಬ್ಯಾಂಕ್ (RBI) ಮೇ 23ರಂದು 2025ರ ಆರ್ಥಿಕ ವರ್ಷಕ್ಕೆ ಸರ್ಕಾರಕ್ಕೆ 2.68 ಲಕ್ಷ ಕೋಟಿ ರೂಪಾಯಿಗಳ ಗಣನೀಯ ಲಾಭಾಂಶವನ್ನು ವರ್ಗಾಯಿಸಲು ಅನುಮೋದನೆ ನೀಡಿದೆ. ಡಾಲರ್ ಮಾರಾಟದಲ್ಲಿನ ಹೆಚ್ಚಳ ಮತ್ತು ವಿದೇಶಿ ವಿನಿಮಯದಿಂದ ಬಂದ ಲಾಭವು ಈ ಪಾವತಿಗೆ ಕಾರಣವಾಗಿದೆ. 2023–24ರಲ್ಲಿ ‘ಆಕಸ್ಮಿಕ ಆಪತ್ತು ಸಂಗ್ರಹ’ (ಸಿಆರ್‌ಬಿ) ಅನ್ನು ರಿಸರ್ವ್ ಬ್ಯಾಂಕಿನ ಬ್ಯಾಲೆನ್ಸ್ ಶೀಟ್‌ನ ಶೇ. 5.5ರಲ್ಲಿ ಕಾಯ್ದುಕೊಳ್ಳುವ ಮೂಲಕ, ಅದುವರೆಗಿನ ದಾಖಲೆಯ ರೂ. 2.1 ಲಕ್ಷ ಕೋಟಿ ವರ್ಗಾವಣೆಯನ್ನು ಸಾಧ್ಯವಾಗಿಸಿತ್ತು. 2025ರಲ್ಲಿ, ಇದನ್ನು ಶೇ. 7.5 ರಲ್ಲಿ ಕಾಯ್ದುಕೊಳ್ಳುವ ಮೂಲಕ ಸರ್ಕಾರಕ್ಕೆ 2.68 ಲಕ್ಷ ಕೋಟಿ ರೂ. ಗಳನ್ನು ವರ್ಗಾವಣೆ ಮಾಡಿದೆ. ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿ ನೀಡಿದ ಪರಿಷ್ಕೃತ ‘ಆರ್ಥಿಕ ಬಂಡವಾಳ ಚೌಕಟ್ಟಿನ’ (ECF) ಪ್ರಕಾರ, ‘ಆಕಸ್ಮಿಕ ಆಪತ್ತು ಸಂಗ್ರಹ’ (CRB) ಅನ್ನು ಬ್ಯಾಲೆನ್ಸ್ ಶೀಟ್‌ನ ಗಾತ್ರದ 4.5–7.5 ಪ್ರತಿಶತದಷ್ಟು ವ್ಯಾಪ್ತಿಯಲ್ಲಿ ನಿರ್ವಹಿಸಬೇಕಾಗಿದೆ.

**ಏನಿದು ರಿಸರ್ವ್ ಬ್ಯಾಂಕ್ ಮೀಸಲು ನಿಧಿ?**

ಮೊದಲಿಗೆ, ರಿಸರ್ವ್ ಬ್ಯಾಂಕ್ ಮೀಸಲು ನಿಧಿ ಎಂದರೇನು ನೋಡೋಣ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ)ದಲ್ಲಿರುವ ಎಲ್ಲಾ ಮೀಸಲುಗಳು ಒಂದೇ ರೀತಿಯದ್ದಲ್ಲ. ಎರಡು ವಿಧದ ಪ್ರಸ್ತುತತೆಗಳಿವೆ. ಕರೆನ್ಸಿ ಮತ್ತು ಚಿನ್ನದ ಮರುಮೌಲ್ಯಮಾಪನ ಖಾತೆ (Currency & Gold Revaluation Account- CGRA) ಅತಿದೊಡ್ಡ ಪಾಲನ್ನು ಹೊಂದಿದೆ. ಇದು ಭಾರತದ ಪರವಾಗಿ ಆರ್‌ಬಿಐ ಹೊಂದಿರುವ ಚಿನ್ನ ಮತ್ತು ವಿದೇಶಿ ಕರೆನ್ಸಿಯ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಸರಳವಾಗಿ ಹೇಳುವುದಾದರೆ, ಇದರಲ್ಲಿನ ವ್ಯತ್ಯಾಸಗಳು ಈ ಸ್ವತ್ತುಗಳ ಬದಲಾಗುತ್ತಿರುವ ಮಾರುಕಟ್ಟೆ ಮೌಲ್ಯವನ್ನು ಪ್ರತಿನಿಧಿಸುತ್ತವೆ. ಹೀಗಾಗಿ, ಮಾರುಕಟ್ಟೆ ಚಲನೆಗಳ ಪ್ರಕಾರ ಆರ್‌ಬಿಐ ಈ ಲೆಕ್ಕದಲ್ಲಿ ಕಾಲ್ಪನಿಕವಾಗಿ ಲಾಭ ಅಥವಾ ನಷ್ಟವನ್ನು ಅನುಭವಿಸುತ್ತದೆ. ಯುಎಸ್ ಡಾಲರ್ ವಿರುದ್ಧ ರೂಪಾಯಿ ಮೌಲ್ಯ ಕುಸಿತ ಮತ್ತು ಚಿನ್ನದ ಬೆಲೆಯಲ್ಲಿನ ಹೆಚ್ಚಳವು ಸಿಜಿಆರ್‌ಎ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಇನ್ನೊಂದು, ಆಕಸ್ಮಿಕ ನಿಧಿ (Contingency Fund–ಸಿಎಫ್). ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತುರ್ತು ಹೊಂದಾಣಿಕೆಗಳನ್ನು ಮಾಡಲು, ಸಂಸ್ಥೆಯ ಹೂಡಿಕೆಗಳಲ್ಲಿನ ನಷ್ಟವನ್ನು ತಡೆಗಟ್ಟಲು ಅಥವಾ ಭಾರತೀಯ ಕರೆನ್ಸಿ ಮೌಲ್ಯವನ್ನು ಹೆಚ್ಚಿಸಲು ಬಳಸುವ ‘ಆಕಸ್ಮಿಕ ನಿಧಿ’ ಇದಾಗಿದೆ. ಇನ್ನೂ ಸರಳವಾಗಿ ಹೇಳುವುದಾದರೆ, ಇದು ಭವಿಷ್ಯದ ಅನಿರೀಕ್ಷಿತ ವೆಚ್ಚಗಳನ್ನು ಸರಿದೂಗಿಸಲು ಮೀಸಲಿಟ್ಟ ಹಣ. ಇದು ಅನಿರೀಕ್ಷಿತ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಮತ್ತೊಂದು ನಿಬಂಧನೆಯಾಗಿದೆ.

ಎರಡೂ ಸಂದರ್ಭಗಳಲ್ಲಿ, ಆರ್‌ಬಿಐ ದ್ರವ್ಯತೆಯನ್ನು (ಅಂದರೆ ಹಣವನ್ನು ಸಲೀಸಾಗಿ) ಸರಿಹೊಂದಿಸಲು ಅಥವಾ ಕರೆನ್ಸಿ ಮೌಲ್ಯದಲ್ಲಿನ ದೊಡ್ಡ ಏರಿಳಿತಗಳನ್ನು ತಡೆಯಲು ಸಂಬಂಧಿತ ಮಾರುಕಟ್ಟೆಗಳಲ್ಲಿ ಮಧ್ಯಪ್ರವೇಶಿಸುತ್ತದೆ. 2017–18 ರಲ್ಲಿ ಸಿಎಫ್ ರೂ. 2.32 ಲಕ್ಷ ಕೋಟಿ ಅಥವಾ ಸ್ವತ್ತುಗಳ ಶೇ. 6.4ರಷ್ಟಿತ್ತು. ಸಿಜಿಆರ್‌ಎ ಮತ್ತು ಸಿಎಫ್ ಒಟ್ಟಾಗಿ ಶೇ. 26ರಷ್ಟು ಸ್ವತ್ತುಗಳನ್ನು ಒಳಗೊಂಡಿತ್ತು. (ಬ್ಯಾಲೆನ್ಸ್ ಶೀಟ್‌ನಲ್ಲಿ ಸ್ವತ್ತುಗಳು ಮತ್ತು ಬಾಧ್ಯತೆಗಳು ವ್ಯಾಖ್ಯಾನದಿಂದ ಹೊಂದಿಕೆಯಾಗಬೇಕು, ಅದರ ಹೊಣೆಗಾರಿಕೆಗಳ ಅನುಪಾತವೂ ಸಹ).

ಆರ್‌ಬಿಐ ಹೊಂದಿರುವ ಸೆಕ್ಯುರಿಟಿಗಳ ಮೇಲಿನ ಬಡ್ಡಿಯ ಮೂಲಕ ಹೆಚ್ಚುವರಿ ಆದಾಯ ಬರುತ್ತದೆ. ಇದರಿಂದ ಬಂದ ಆದಾಯವನ್ನು ತನ್ನ ಸ್ವಂತ ವೆಚ್ಚಗಳನ್ನು ಪೂರೈಸಿದ ನಂತರ ಸರ್ಕಾರಕ್ಕೆ ವರ್ಗಾಯಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ತನ್ನ ಗಳಿಕೆಯ ಒಂದು ಭಾಗವನ್ನು ಆಕಸ್ಮಿಕ ನಿಧಿ(ಸಿಎಫ್)ಗೆ ವರ್ಗಾಯಿಸುತ್ತದೆ.

ರಘುರಾಂ ರಾಜನ್ ಅವರು ಆರ್‌ಬಿಐ ಗವರ್ನರ್ ಆಗಿದ್ದಾಗ, ರಿಸರ್ವ್ ಬ್ಯಾಂಕಿನಲ್ಲಿರುವ ರೂ.9 ಲಕ್ಷ ಕೋಟಿ ಮೀಸಲು ಹಣದಲ್ಲಿ ಆಕಸ್ಮಿಕ ನಿಧಿಯ (contingency fund– ಭವಿಷ್ಯದ ಅನಿರೀಕ್ಷಿತ ವೆಚ್ಚಗಳನ್ನು ಸರಿದೂಗಿಸಲು ಮೀಸಲಿಟ್ಟ ಹಣ) ಮೂರನೇ ಒಂದು ಭಾಗ ಹಣವನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಬೇಕು ಎಂದು ಕೇಂದ್ರ ಸರ್ಕಾರ ಮಾಡಿದ ಸಲಹೆಯನ್ನು ರಘುರಾಂ ರಾಜನ್ ಒಪ್ಪಲಿಲ್ಲ. ಅದೇ ಸಮಯದಲ್ಲಿ, ‘ವಸೂಲಾಗದ ಆಸ್ತಿ’ (NPA- Non-Performing Asset)’ ಎಂದು ದೊಡ್ಡ ಪಟ್ಟಿಯನ್ನು ನಮ್ಮ ಬಳಿ ತರಬೇಡಿ. ಅಂತಹ ಸಾಲ ವಸೂಲಿ ಮಾಡಿ, ಇಲ್ಲಾ ರೈಟ್ ಆಫ್ ಮಾಡಿ’ (Write off ಎಂದರೆ, ವಸೂಲಾಗದ ಸಾಲದ ಲೆಕ್ಕದ ಪುಸ್ತಕದಿಂದ ಅಳಿಸಿಹಾಕುವುದು) ಎನ್ನುತ್ತಾ ರಾಜನ್ ರಾಷ್ಟ್ರೀಯ ಬ್ಯಾಂಕುಗಳ ಅಧಿಕಾರಿಗಳಿಗೆ ಎಚ್ಚರಿಕೆ ನೀಡುತ್ತಾರೆ. ರಾಜನ್ ಅವರ ನಂತರ 2016ರ ಸೆಪ್ಟೆಂಬರ್ 4ರಂದು ಉರ್ಜಿತ್ ಪಟೇಲರನ್ನು ರಿಸರ್ವ್ ಬ್ಯಾಂಕ್ ಗವರ್ನರ್ ಹುದ್ದೆಗೆ ಸರ್ಕಾರ ನೇಮಕ ಮಾಡುತ್ತದೆ.

**ನೋಟು ರದ್ದತಿ**

ಉರ್ಜಿತ್ ಪಟೇಲ್ ಅವರು ಗವರ್ನರ್ ಆದ ನಂತರ, ಉದ್ಯಮಿಗಳಿಂದ ಸಾಲ ವಸೂಲಿಮಾಡುವ ಬದಲಾಗಿ ವಸೂಲಾಗದ ಸಾಲದ ಲೆಕ್ಕದ ಪುಸ್ತಕದಿಂದ ಲಕ್ಷಾಂತರ ಕೋಟಿ ರೂ.ಗಳ ಸಾಲವನ್ನು ‘ರೈಟ್ ಆಫ್’ ಮಾಡುವ ಅಥವಾ ‘ಮನ್ನಾ’ ಮಾಡುವ ಕೆಲಸ ಮುಂದುವರಿಯುತ್ತದೆ. ಬ್ಯಾಂಕುಗಳು ದಿವಾಳಿಯತ್ತ ಸಾಗುತ್ತಿದ್ದಂತೆ ಅದನ್ನು ತಪ್ಪಿಸಲು, ನೋಟು ರದ್ದತಿ ಮೂಲಕ ಜನಸಾಮಾನ್ಯರ ಬಳಿ ಇದ್ದ ಹಣ ಬ್ಯಾಂಕುಗಳಿಗೆ ಬಂದು ಬೀಳುವಂತೆ ಮೋದಿ ಸರ್ಕಾರ ತಂತ್ರ ರೂಪಿಸುತ್ತದೆ. 2016ರ ನವೆಂಬರ್ 8ರಂದು ರಾತ್ರಿ 8 ಗಂಟೆಗೆ ಪ್ರಧಾನಿ ಮೋದಿಯವರು ಐನೂರು ಮತ್ತು ಸಾವಿರ ಮುಖಬೆಲೆಯ ನೋಟುಗಳನ್ನು ಅಮಾನ್ಯಮಾಡಿ ಘೋಷಣೆ ಮಾಡುತ್ತಾರೆ. ಬದಲಾವಣೆಗೂ ಅವಕಾಶ ಕೊಡದೆ, ಮಧ್ಯರಾತ್ರಿಯಿಂದಲೇ ಈ ನೋಟುಗಳು ಮಾನ್ಯತೆ ಕಳೆದುಕೊಳ್ಳುತ್ತವೆ. ಈ ವಿಷಯದಲ್ಲಿ ಅಂದು ರಿಸರ್ವ್ ಬ್ಯಾಂಕ್ ಗವರ್ನರ್ ಅವರನ್ನು ಪಕ್ಕಕ್ಕೆ ಸರಿಸಿ ತಾವೇ ರಿಸರ್ವ್ ಬ್ಯಾಂಕಿನ ನೀತಿ ನಿಲುವುಗಳನ್ನು ರೂಪಿಸುತ್ತಾರೆ. ನೋಟು ರದ್ದತಿ ವಿಷಯದಲ್ಲಿ ಬಹಿರಂಗವಾಗಿ ಏನನ್ನೂ ಮಾತನಾಡದಂತೆ ತಿಂಗಳು ಕಾಲ ಗವರ್ನರ್ ಉರ್ಜಿತ್ ಪಟೇಲ್ ಅವರ ಬಾಯಿ ಮುಚ್ಚಿಸಲಾಗುತ್ತದೆ. ಉರ್ಜಿತ್ ಪಟೇಲ್ ಕೆಲ ಕಾಲ ಎಲ್ಲವನ್ನೂ ಸಹಿಸಿಕೊಂಡು ತಮ್ಮ ಹುದ್ದೆಯಲ್ಲಿ ಮುಂದುವರಿಯುತ್ತಾರೆ.

**ಮೀಸಲು ಹಣದ ಮೇಲೆ ಕಣ್ಣು**

ನೋಟು ರದ್ದತಿಯ ಕಾರ್ಯ ಮುಗಿದು, ಜನಸಾಮಾನ್ಯರ ಬಳಿ ಇದ್ದ ಹಣ ಬ್ಯಾಂಕುಗಳಿಗೆ ಹರಿದು ಬರುತ್ತದೆ. ಆ ನಂತರ ಮೋದಿ ಸರ್ಕಾರದ ದೃಷ್ಟಿ ಅಂದು ರಿಸರ್ವ್ ಬ್ಯಾಂಕಿನಲ್ಲಿದ್ದ ರೂ. 9.59 ಲಕ್ಷ ಕೋಟಿ (ಜೂನ್ 2018ರಲ್ಲಿ ಇದ್ದಂತೆ) ಆಕಸ್ಮಿಕ ನಿಧಿ(CF)ಯ ಮೇಲೆ ಬೀಳುತ್ತದೆ.

ಆಕಸ್ಮಿಕ ನಿಧಿಯಾಗಿ ಮೀಸಲಿಟ್ಟಿದ್ದ ಹಣದಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು (3 ಲಕ್ಷ ಕೋಟಿಗೂ ಹೆಚ್ಚು) ಕೇಂದ್ರ ಸರ್ಕಾರದ ಖಜಾನೆಗೆ ವರ್ಗಾವಣೆ ಮಾಡುವಂತೆ ರಿಸರ್ವ್ ಬ್ಯಾಂಕಿನ ಮೇಲೆ ಕೇಂದ್ರ ಸರ್ಕಾರ ಒತ್ತಡ ತರುತ್ತದೆ. ಇಂತಹ ಕ್ರಮ ರಿಸರ್ವ್ ಬ್ಯಾಂಕಿನ ಸ್ವಾಯತ್ತತೆಗೆ ಧಕ್ಕೆ ತರುತ್ತದೆ ಎಂದು ಉರ್ಜಿತ್ ಪಟೇಲ್ ಹೇಳುವ ಮೂಲಕ, ಮೀಸಲು ಹಣದಲ್ಲಿನ ಒಂದು ಭಾಗವನ್ನು ಕೇಂದ್ರದ ಖಜಾನೆಗೆ ವರ್ಗಾವಣೆ ಮಾಡಲು ನಿರಾಕರಿಸುತ್ತಾರೆ. ‘ಈ ಮೀಸಲು ನಿಧಿ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನೆರವಿಗೆ ಬರುತ್ತದೆ, ಇದನ್ನು ಸರ್ಕಾರಕ್ಕೆ ವರ್ಗಾವಣೆ ಮಾಡುವುದು ಬೇಡ’ ಎಂದು ಕೆಲವು ವಿರೋಧ ಪಕ್ಷಗಳ ನಾಯಕರು ಮತ್ತು ಆರ್ಥಿಕ ತಜ್ಞರು ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತಾರೆ. ಭಾರತದ ಮಾಜಿ ಮುಖ್ಯ ಆರ್ಥಿಕ ತಜ್ಞ ಪ್ರಣಬ್ ಸೇನ್ ಅವರು “ಆರ್‌ಬಿಐ ಅನ್ನು ‘ರಾಕ್–ಬಾಟಮ್’ ಮಟ್ಟದಲ್ಲಿ ಇಡುವುದು ಒಳ್ಳೆಯದಲ್ಲ” ಎನ್ನುತ್ತಾರೆ.

**ಸರ್ಕಾರದ ಈ ಕ್ರಮಕ್ಕೆ ಸಮರ್ಥನೆ ಏನು?**

ಆರ್ಥಿಕ ತಜ್ಞರ ಎಚ್ಚರಿಕೆಗಳನ್ನು ಪರಿಗಣಿಸದ ಸರ್ಕಾರ, “ಮಿಗುತೆ ಮೀಸಲು ವರ್ಗಾವಣೆಯು ಕ್ಷೀಣಿಸುತ್ತಿರುವ ಆರ್ಥಿಕ ಬೆಳವಣಿಗೆಯನ್ನು ಸ್ಥಿರಗೊಳಿಸಲು ಸರ್ಕಾರಕ್ಕೆ ಒಂದಷ್ಟು ಆಯ್ಕೆಗಳನ್ನು ನೀಡುತ್ತದೆ” ಎಂದು ಸಮರ್ಥಿಸಿಕೊಂಡಿತು.

ಭಾರತೀಯ ರಿಸರ್ವ್ ಬ್ಯಾಂಕಿನ ಮೀಸಲು ತುಂಬಾ ದೊಡ್ಡದಾಗಿದೆ, ಅಷ್ಟೊಂದು ಮೀಸಲು ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ವಾದಿಸಿತು. ‘ದಿ ಟೆಲಿಗ್ರಾಫ್’ನಲ್ಲಿನ ಒಂದು ವರದಿಯಂತೆ, ಭಾರತೀಯ ರಿಸರ್ವ್ ಬ್ಯಾಂಕ್ ನಿರ್ವಹಿಸುವ ಒಟ್ಟು ಆಸ್ತಿಯ ಶೇ. 28ರ ಬಫರ್ ಸುಮಾರು ಶೇ. 14ರ ಜಾಗತಿಕ ಮಾನದಂಡಕ್ಕಿಂತ ಹೆಚ್ಚಿದೆ ಎಂಬುದು ಸರ್ಕಾರದ ವಾದವಾಗಿತ್ತು.

2018ರಲ್ಲಿ, ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣ್ಯಂ ಅವರು ‘ಭಾರತೀಯ ರಿಸರ್ವ್ ಬ್ಯಾಂಕ್ ವಿಶ್ವದ ಕೇಂದ್ರ ಬ್ಯಾಂಕುಗಳಲ್ಲಿ ಅತಿ ಹೆಚ್ಚು ಮೀಸಲುಗಳನ್ನು ಹೊಂದಿದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಬಹುದಾದ ಹೆಚ್ಚುವರಿ ಬಂಡವಾಳವು ರೂ. 4.5 ಲಕ್ಷ ಕೋಟಿ ಮತ್ತು ರೂ. 7 ಲಕ್ಷ ಕೋಟಿ ನಡುವೆ ಇದೆ’ ಎಂದು ವಾದಿಸಿದ್ದರು.

ಇನ್ನೊಂದು ಅಭಿಪ್ರಾಯದ ಪ್ರಕಾರ, ರಿಸರ್ವ್ ಬ್ಯಾಂಕ್ ಹೆಚ್ಚಿನ ಬಂಡವಾಳ ಮೀಸಲುಗಳನ್ನು ಹೊಂದಿದ್ದರೂ, ಇದರಲ್ಲಿ ಹೆಚ್ಚಿನವು ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತದಿಂದ ಉದ್ಭವಿಸುವ ಕಾಲ್ಪನಿಕ ಮೌಲ್ಯವಾಗಿದೆ. ಇದರ ನಿಜವಾದ ನಗದು ಮೀಸಲು ತುಂಬಾ ಹೆಚ್ಚಿಲ್ಲ. ಅಮರ್ತ್ಯ ಲಾಹಿರಿ, ಆರ್‌ಬಿಐ ಅನುದಾನಿತ ‘ಸೆಂಟರ್ ಫಾರ್ ಅಡ್ವಾನ್ಸ್‌ಡ್ ಫೈನಾನ್ಶಿಯಲ್ ರಿಸರ್ಚ್ ಅಂಡ್ ಲರ್ನಿಂಗ್’ನ ನಿರ್ದೇಶಕ ಮತ್ತು ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು 2018ರಲ್ಲಿ ಆರ್‌ಬಿಐ ವಾಸ್ತವವಾಗಿ "ವಿಶ್ವದ ಅತ್ಯಂತ ಕಡಿಮೆ ಬಂಡವಾಳದ ಕೇಂದ್ರ ಬ್ಯಾಂಕುಗಳಲ್ಲಿ ಒಂದಾಗಿದೆ" ಎಂದು ಬರೆದಿದ್ದಾರೆ.

**ಉರ್ಜಿತ್ ಪಟೇಲ್ ರಾಜಿನಾಮೆ**

ಮೀಸಲು ವರ್ಗಾವಣೆ ಮತ್ತು ಆರ್‌ಬಿಐನ ಆರ್ಥಿಕ ಬಂಡವಾಳದ ಚೌಕಟ್ಟಿನ ಕುರಿತು ಸಮಾಲೋಚನೆಗಳನ್ನು ಪ್ರಾರಂಭಿಸಲು ಸರ್ಕಾರದ ಒತ್ತಡ ಮತ್ತು ಸರ್ಕಾರದ ನಿಯಂತ್ರಣವು ಸಂಘರ್ಷಕ್ಕೆ ಕಾರಣವಾಯಿತು. ಸರ್ಕಾರದ ಈ ನಡೆ ಭಾರೀ ಆಕ್ರೋಶವನ್ನು ಸೃಷ್ಟಿಸಿತು. ಈ ಪರಿಸ್ಥಿತಿಯಲ್ಲಿ ಆರ್‌ಬಿಐ ತನ್ನ 2018ರ ನವೆಂಬರ್ 19ರ ಸಭೆಯಲ್ಲಿ ಪುಟ 15 ಕ್ಕೆ

# ಪರಮಾಣು ಶಕ್ತಿಯಲ್ಲಿ ಶೇ.49 ಎಫ್‌ಡಿಐ ಧಾವಂತ ಸಲ್ಲದು: ಜನತಾ ಆಯೋಗದ ಎಚ್ಚರಿಕೆ

ಈಗ ಮೂಡಿಬರುತ್ತಿರುವ ಪರಮಾಣು ಕಾರ್ಯತಂತ್ರವು ದೇಶದ ಸ್ವಾವಲಂಬನೆಯ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ‘ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳ ಕುರಿತ ಜನತಾ ಆಯೋಗ’ (ಪಿಸಿಪಿಎಸ್‌ಪಿಎಸ್) ತೀವ್ರ ಕಳವಳ ವ್ಯಕ್ತಪಡಿಸಿದೆ ಮತ್ತು ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಶೇ.49 ವಿದೇಶಿ ನೇರ ಹೂಡಿಕೆಗೆ ಆತುರಪಡಬೇಡಿ ಎಂದು ಕೇಂದ್ರವನ್ನು ಆಗ್ರಹಿಸಿದೆ.

ಶಿಕ್ಷಣ ತಜ್ಞರು, ನ್ಯಾಯಶಾಸ್ತ್ರಜ್ಞರು, ನಿವೃತ್ತ ಆಡಳಿತಗಾರರು, ಕಾರ್ಮಿಕ ಸಂಘಟಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡ ಈ ಜನತಾ ಆಯೋಗ ಪಿಸಿಪಿಎಸ್‌ಪಿಎಸ್ ಜೂನ್ 3ರಂದು ನೀಡಿರುವ ತನ್ನ ಸಾರ್ವಜನಿಕ ಹೇಳಿಕೆಯಲ್ಲಿ, ಪರಮಾಣು ವಿದ್ಯುತ್ ಸ್ಥಾವರದ ಸುತ್ತಲಿನ 80 ಕಿ.ಮೀ. ವ್ಯಾಪ್ತಿಯವರೆಗಿನ ಪ್ರದೇಶಗಳಲ್ಲಿ ಏನೆಲ್ಲಾ ಅಪಾಯಗಳೂ ಸಂಭವಿಸಬಹುದು ಎಂಬುದನ್ನು ಎತ್ತಿ ತೋರಿಸುತ್ತ, ಆದರೂ ಇತ್ತೀಚಿನ ದಿನಗಳಲ್ಲಿ ಒಕ್ಕೂಟ ಸರಕಾರ ಆಂಧ್ರಪ್ರದೇಶದ ಅನಕಪಲ್ಲಿ, ಕೇರಳದ ಕಾಸರಗೋಡು ಜಿಲ್ಲೆ ಮತ್ತು ಗೋವಾ ಸೇರಿದಂತೆ ಹಲವಾರು ಸ್ಥಳಗಳಲ್ಲಿ ಪರಮಾಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವುದಾಗಿ ಘೋಷಿಸುವ ಆತುರದಲ್ಲಿದೆ ಎಂದು ಗಮನಿಸಿದೆ.

ಇತರ ವಿಷಯಗಳ ಜೊತೆಗೆ, 2012ರಲ್ಲಿ ಸಂಸದೀಯ ಸ್ಥಾಯಿ ಸಮಿತಿ ಸೂಚಿಸಿದ ರೀತಿಯಲ್ಲಿ ಒಂದು ಸ್ವತಂತ್ರ ಪರಮಾಣು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವ ಮಸೂದೆಯನ್ನು ಪರಿಶೀಲಿಸುವಲ್ಲಿ ಮತ್ತಷ್ಟು ವಿಳಂಬ ಬೇಡ ಎಂದೂ ಪರಮಾಣು ಇಂಧನ ಇಲಾಖೆಯನ್ನು ಕೋರಿದೆ.

ಪರಮಾಣು ಇಂಧನ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆಯ ಅನ್ವೇಷಣೆಗೆ ಗಂಭೀರ ಹಿನ್ನಡೆಯನ್ನು ಉಂಟುಮಾಡುವ ಸಾಧ್ಯತೆಯಿರುವ ಈ ಕೆಳಗಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಜನತಾ ಆಯೋಗವು ಕಳವಳ ವ್ಯಕ್ತಪಡಿಸಿದೆ.

1. ತಮ್ಮ ಇತ್ತೀಚಿನ ಬಜೆಟ್ ಭಾಷಣದಲ್ಲಿ, ಪರಮಾಣು ಕ್ಷೇತ್ರದಲ್ಲಿ ದೇಶೀಯ ಮತ್ತು ವಿದೇಶಿ ಹೂಡಿಕೆಗಳನ್ನು ಉತ್ತೇಜಿಸಲು ಭಾರತವು ಪರಮಾಣು ಇಂಧನ ಕಾಯ್ದೆ ಮತ್ತು ಪರಮಾಣು ಹಾನಿಯ ನಾಗರಿಕ ಹೊಣೆಗಾರಿಕೆ ಕಾಯ್ದೆ (ಸಿಎಲ್‌ಎನ್‌ಡಿಎ) ಅನ್ನು ತಿದ್ದುಪಡಿ ಮಾಡುವ ಬಗ್ಗೆ ಪರಿಶೀಲಿಸುವುದಾಗಿ ಪರಿಗಣಿಸುತ್ತದೆ ಎಂದು ಹಣಕಾಸು ಸಚಿವರು ಸೂಚಿಸಿದರು.
2. ಆಮದು ಮಾಡಿಕೊಂಡ ರಿಯಾಕ್ಟರ್‌ಗಳು ಮತ್ತು ಆಮದು ಮಾಡಿದ ಇಂಧನವನ್ನು ಆಧರಿಸಿ ಪರಮಾಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ತನ್ನ ಹಿಂದಿನ ಸರ್ಕಾರದ ಅವಿವೇಕದ ನೀತಿಯನ್ನು ಮುಂದುವರಿಸಲು ಮಾತ್ರವಲ್ಲದೆ, ಅಂತಹ ತಂತ್ರದ ಆಧಾರದ ಮೇಲೆ 100 ಗಿಗಾವಾಟ್ ಪರಮಾಣು ವಿದ್ಯುತ್ ಸಾಮರ್ಥ್ಯವನ್ನು ಸೇರಿಸಲು ಯೋಜಿಸುವ ಮೂಲಕ, ಆಮದು ಮಾಡಿಕೊಂಡ ರಿಯಾಕ್ಟರ್‌ಗಳ ಮೇಲಿನ ಭಾರತದ ಅವಲಂಬನೆಯನ್ನು ತೀವ್ರವಾಗಿ ಹೆಚ್ಚಿಸುವ ಪ್ರಸ್ತಾವವನ್ನು ಎನ್‌ಡಿಎ ಸರ್ಕಾರ ಇಟ್ಟಿದೆ.
3. ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಶೇ. 49ರಷ್ಟು ಎಫ್‌ಡಿಐಗೆ ಅವಕಾಶ ನೀಡುವ ಬಗ್ಗೆಯೂ ಸರಕಾರ ಪರಿಶೀಲಿಸುತ್ತಿರುವುದಾಗಿ ವರದಿಯಾಗಿದೆ.
4. ಆಗಸ್ಟ್ 2023ರಲ್ಲಿ, ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ (ಎಂಎಂಡಿಆರ್‌ಎ)ಗೆ ತಿದ್ದುಪಡಿ ಮಾಡುವ ಮೂಲಕ ಕೇಂದ್ರವು ಸಮುದ್ರ ತೀರದ ಮರಳಿನ ಖಾಸಗಿ ಗಣಿಗಾರಿಕೆಗೆ ಅನುಮತಿ ನೀಡಿತು, ಇದು ಭಾರತದ ಪರಮಾಣು ವ್ಯವಸ್ಥೆಯನ್ನು ರೂಪಿಸಿದ ಶಿಲ್ಪಿ ಡಾ. ಹೋಮಿ ಜೆ ಬಾಬಾ ಕಂಡರಿಸಿದ ದೀರ್ಘಕಾಲೀನ ಮೂರು–ಹಂತದ ಪರಮಾಣು ಅಭಿವೃದ್ಧಿ ಕಾರ್ಯತಂತ್ರವನ್ನು ಬದಿಗೊತ್ತಿ, ಟೈಟಾನಿಯಂ ಮತ್ತು ಥೋರಿಯಂ–ಸಮೃದ್ಧ ಮೊನಾಜೈಟ್‌ನಂತಹ ಆಯಕಟ್ಟಿನ ಪರಮಾಣು ಖನಿಜಗಳ ರಫ್ತಿಗೆ ಅವಕಾಶ ಮಾಡಿಕೊಟ್ಟಿದೆ.

ಈ ಬಗ್ಗೆ ತಜ್ಞರ ಮತ್ತು ಸಾಮಾಜಿಕ ಕಾರ್ಯಕರ್ತರ ಕಳವಳವನ್ನು ವಿವರವಾಗಿ ಮುಂದಿಟ್ಟಿರುವ ಈ ಹೇಳಿಕೆಯು, ಸರಕಾರದ ಮುಂದೆ ಈ ಕೆಳಗಿನ ಒತ್ತಾಯಗಳನ್ನು ಮಂಡಿಸಲು ತೀರ್ಮಾನಿಸಿದೆ:

1. ಸಂಸದೀಯ ಸ್ಥಾಯಿ ಸಮಿತಿಯು ಈ ಹಿಂದೆ ಪ್ರಸ್ತಾಪಿಸಿದಂತೆ ಪರಮಾಣು ಹಾನಿಯ ನಾಗರಿಕ ಹೊಣೆಗಾರಿಕೆ ಕಾಯ್ದೆ (ಸಿಎನ್‌ಎಲ್‌ಡಿಎ)ಯನ್ನು ದುರ್ಬಲಗೊಳಿಸುವ ಬದಲು ಅದನ್ನು ಇನ್ನಷ್ಟು ಬಲಪಡಿಸಬೇಕು.
2. ಅಣುವಿದ್ಯುತ್ ಇಲಾಖೆ ಸ್ವಾವಲಂಬನೆಯ ಬದಲು, ಆಮದಾದ ಪರಮಾಣು ಸ್ಥಾವರಗಳ ಮೇಲೆಯೇ ಹೆಚ್ಚೆಚ್ಚು ಅವಲಂಬಿಸುವಂತಹ ತನ್ನ ಕಾರ್ಯತಂತ್ರದಲ್ಲಿನ ದೊಡ್ಡ ಪ್ರಮಾಣದ ಪಲ್ಲಟವನ್ನು ಮರುಪರಿಶೀಲಿಸಬೇಕು.
3. ಸಮುದ್ರ ತಟದ ಮರಳಿನಲ್ಲಿ ಖಾಸಗಿ ಗಣಿಗಾರಿಕೆಗೆ ಅನುಮತಿ ನೀಡುವ ಎಂಎಂಡಿಆರ್‌ಎ ತಿದ್ದುಪಡಿಯನ್ನು ರದ್ದುಗೊಳಿಸಬೇಕು.
4. ಸರಕಾರ ಪರಮಾಣು ಶಕ್ತಿಯಲ್ಲಿ ಶೇ. 49ರಷ್ಟು ಎಫ್‌ಡಿಐಗೆ ಅನುಮತಿ ನೀಡಲು ಧಾವಿಸಬಾರದು.
5. 2012ರಲ್ಲಿ ಆಗಿನ ಸಂಸದೀಯ ಸ್ಥಾಯಿ ಸಮಿತಿ ಸೂಚಿಸಿದ ರೀತಿಗಳಲ್ಲಿ ಸ್ವತಂತ್ರ ಪರಮಾಣು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವ ಮಸೂದೆಯನ್ನು ಪರಿಶೀಲಿಸುವಲ್ಲಿ ಇನ್ನಷ್ಟು ವಿಳಂಬ ಮಾಡಬಾರದು.

# ಆದಿವಾಸಿ ಪ್ರದೇಶಗಳ ಮಿಲಿಟರೀಕರಣದ ಮತ್ತು ಸಂಹಾರದ ನಿಲುವನ್ನು ಬಿಡಿ, ಸಂವಾದದ ಮನವಿಗೆ ಸ್ಪಂದಿಸಿ–ಪ್ರಧಾನಿಗಳಿಗೆ ಎಡಪಕ್ಷಗಳ ಮುಂದಾಳುಗಳ ಮನವಿ

ಛತ್ತೀಸ್‌ಗಡದ ಆದಿವಾಸಿ ಪ್ರದೇಶಗಳ ಮಿಲಿಟರೀಕರಣ ಸಾಮಾನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಸಂವಾದಗಳ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವ ಕೇಳಿಕೆಗೆಳಿಗೆ ಸ್ಪಂದಿಸಬೇಕು ಎಂದು ಕಾಳಜಿಯಿರುವ ನಾಗರಿಕರು ಮತ್ತು ರಾಜಕೀಯ ಪಕ್ಷಗಳು ಮನವಿ ಮಾಡಿಕೊಂಡರೂ ಸಂಹಾರದ ಮಾರ್ಗವನ್ನೇ ಕೇಂದ್ರದ ಮತ್ತು ರಾಜ್ಯದ ಸರಕಾರಗಳು ಆಯ್ದುಕೊಂಡಿವೆ. ಮಾವೋವಾದಿಗಳ ಏಕಪಕ್ಷೀಯ ಕದನ ವಿರಾಮ ಘೋಷಣೆಗೆ ಸ್ಪಂದಿಸಬೇಕು ಮತ್ತು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಂವಾದವನ್ನು ಪ್ರಾರಂಭಿಸಬೇಕು ಎಂಬ ಮನವಿಯನ್ನು ಪುನರುಚ್ಚರಿಸುತ್ತ ದೇಶದ ಐದು ಪ್ರಮುಖ ಎಡಪಕ್ಷಗಳ ಮುಂದಾಳುಗಳು, ನ್ಯಾಯಾಂಗೇತರ ಹತ್ಯೆಗಳು ಮತ್ತು ಹಿಂಸಾಚಾರವನ್ನು ತಕ್ಷಣ ಜಾರಿಗೆ ಬರುವಂತೆ ನಿಲ್ಲಿಸಬೇಕು ಹಾಗೂ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಪ್ರಧಾನ ಮಂತ್ರಿಗಳನ್ನು ಒಂದು ಜಂಟಿ ಪತ್ರದ ಮೂಲಕ ಆಗ್ರಹಿಸಿದ್ದಾರೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ,(ಸಿಪಿಐ(ಎಂಎಲ್)–ಲಿಬರೇಶನ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ಮತ್ತು ಎಐಎಫ್‌ಬಿ ಪ್ರಧಾನ ಕಾರ್ಯದರ್ಶಿ ಜಿ. ದೇವರಾಜನ್ ಮೇ 9ರಂದು ಜಂಟಿಯಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಅವರಿಗೆ ಬರೆದಿರುವ ಪತ್ರದ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಶ್ರೀ ನರೇಂದ್ರ ಮೋದಿ ಜಿ<br>
ಗೌರವಾನ್ವಿತ ಪ್ರಧಾನ ಮಂತ್ರಿಗಳು<br>
ಭಾರತ ಸರ್ಕಾರ

ಆತ್ಮೀಯ ಪ್ರಧಾನ ಮಂತ್ರಿಗಳೇ,

ದೇಶದ ಐದು ಎಡ ಪಕ್ಷಗಳಾದ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) (ಸಿಪಿಐ(ಎಂ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ ಲೆನಿನ್‌ವಾದಿ)–ಲಿಬರೇಶನ್, ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ(ಆರ್‌ಎಸ್‌ಪಿ) ಮತ್ತು ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್ (ಎಐಎಫ್‌ಬಿ) ಗಳ ಪರವಾಗಿ, ಛತ್ತೀಸ್‌ಗಢ ಸುತ್ತಮುತ್ತಲಿನ ಪ್ರದೇಶದಲ್ಲಿ ‘ಆಪರೇಷನ್ ಕಗಾರ್’ ಹೆಸರಿನಲ್ಲಿ ನಡೆಯುತ್ತಿರುವ ನ್ಯಾಯಾಂಗೇತರ ಹತ್ಯೆಗಳನ್ನು ತಕ್ಷಣ ನಿಲ್ಲಿಸುವಂತೆ ಕೋರಿ ನಾವು ನಿಮಗೆ ಬರೆಯುತ್ತಿದ್ದೇವೆ. ಹಲವಾರು ಹಿರಿಯ ಮಾವೋವಾದಿ ನಾಯಕರು ಪ್ರಸ್ತುತ ಭದ್ರತಾ ಪಡೆಗಳ ವಶದಲ್ಲಿದ್ದಾರೆ ಎಂಬ ವರದಿಗಳಿವೆ. ಅವರೆಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಮತ್ತು ಕಾನೂನಿನ ನಿಯಮದ ಪ್ರಕಾರ ವ್ಯವಹರಿಸಬೇಕು ಎಂದು ನಾವು ಒತ್ತಾಯಿಸುತ್ತೇವೆ.

ಈ ಪ್ರದೇಶದ ಆದಿವಾಸಿಗಳು ಬಹಳ ಹಿಂದಿನಿಂದಲೂ ಸಾಮಾನ್ಯ ಜೀವನವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿರುವ ಪ್ರದೇಶದ ಮಿಲಿಟರೀಕರಣದ ಬಗ್ಗೆ ದೂರು ನೀಡುತ್ತಿದ್ದಾರೆ. ಸಂವಿಧಾನದ ಐದನೇ ಶೆಡ್ಯೂಲ್‌ನಲ್ಲಿ ಪ್ರತಿಷ್ಠಾಪಿಸಲಾದ ಆದಿವಾಸಿ ಹಕ್ಕುಗಳನ್ನು ವ್ಯವಸ್ಥಿತವಾಗಿ ಉಲ್ಲಂಘಿಸಲಾಗುತ್ತಿದೆ ಮತ್ತು ಛತ್ತೀಸ್‌ಗಢದ ಅರಣ್ಯಗಳು ಮತ್ತು ಖನಿಜಗಳನ್ನು ವಿವೇಚನಾಹೀನ ಕಾರ್ಪೊರೇಟ್ ಶೋಷಣೆಗೆ ಒಳಪಡಿಸಲಾಗುತ್ತಿದೆ ಮತ್ತು ಇದು ಪರಿಸರ ಸ್ಥಿರತೆ ಮತ್ತು ಸ್ಥಳೀಯ ಜನರ ಜೀವನೋಪಾಯದ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತಿದೆ. ಆದಿವಾಸಿಗಳನ್ನು ಕಠಿಣ ಹಗೆತನದಿಂದ ನಡೆಸಿಕೊಳ್ಳುವ ಈ ಮಿಲಿಟರಿ ತೆರನ ನಿಲುವನ್ನು ನಿಲ್ಲಿಸಬೇಕೆಂದು ನಾವು ನಿಮ್ಮನ್ನು ಒತ್ತಾಯಿಸುತ್ತೇವೆ.

ಈ ಹಗೆತನ ಸಾವಿನ ನಂತರವೂ ಕಾಣುತ್ತಿದೆ, ಸರ್ಕಾರವು ಮೃತ ದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲು ನಿರಾಕರಿಸುತ್ತಿದೆ, ತಮ್ಮ ಕುಟುಂಬಗಳ ಸದಸ್ಯರಿಗೆ ಗೌರವಯುತ ವಿದಾಯ ಹೇಳುವ ಅವರ ಹಕ್ಕನ್ನು ನಿರಾಕರಿಸುತ್ತಿದೆ.

ಮಾವೋವಾದಿಗಳು ಸಂವಾದಕ್ಕೆ ತಮ್ಮ ಮನವಿಯನ್ನು ಪರಿಗಣಿಸುವಂತೆ ಸರ್ಕಾರವನ್ನು ಪದೇ ಪದೇ ಆಗ್ರಹಿಸಿದ್ದಾರೆ. ದುರದೃಷ್ಟವಶಾತ್, ಕೇಂದ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ ಛತ್ತೀಸ್‌ಗಢ ರಾಜ್ಯ ಸರ್ಕಾರವು ಮಾತುಕತೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳದಿರುವ ಹಾದಿಯನ್ನು ಆಯ್ಕೆ ಮಾಡಿಕೊಂಡಿವೆ. ಬದಲಾಗಿ, ಅವರು ಹತ್ಯೆಗಳು ಮತ್ತು ಸಂಹಾರದ ಒಂದು ಅಮಾನವೀಯ ನೀತಿಯನ್ನು ಅನುಸರಿಸುತ್ತಿದ್ದಾರೆ.

ಗಡುವನ್ನು ಪುನರುಚ್ಚರಿಸುತ್ತಾ ಕೇಂದ್ರ ಗೃಹ ಸಚಿವರು ನೀಡಿರುವ ಹೇಳಿಕೆಗಳು ಮತ್ತು ಮಾತುಕತೆಯ ಅಗತ್ಯವಿಲ್ಲ ಎಂಬ ಛತ್ತೀಸ್‌ಗಢ ಮುಖ್ಯಮಂತ್ರಿಯ ಹೇಳಿಕೆಯು ಸಂವಾದದ ಮೂಲಕ ಸಮಸ್ಯೆಗಳನ್ನು ಪರಿಹರಿಸುವ ಇಷ್ಟವಿಲ್ಲ ಎಂಬ ಮನಸ್ಥಿತಿಯನ್ನು ಬಿಂಬಿಸುತ್ತದೆ. ಸರ್ಕಾರವು ಹಟಮಾರಿಯಾಗಿರಬಾರದು ಮತ್ತು ನಾಡಿನ ಕಾನೂನಿನ ಭಾವ ಮತ್ತು ಪ್ರಜಾಪ್ರಭುತ್ವ ಆಡಳಿತದ ತತ್ವಗಳ ವಿರುದ್ಧ ಮಾನವ ಜೀವಗಳನ್ನು ಬಲಿ ತೆಗೆದುಕೊಳ್ಳುವುದನ್ನು ಸಂಭ್ರಮಿಸಬಾರದು.

ಅನೇಕ ಕಾಳಜಿಯುಳ್ಳ ನಾಗರಿಕರು ಮತ್ತು ರಾಜಕೀಯ ಪಕ್ಷಗಳು, ಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದರೂ, ಮಾವೋವಾದಿಗಳ ಏಕಪಕ್ಷೀಯ ಕದನ ವಿರಾಮ ಘೋಷಣೆಗೆ ಸ್ಪಂದಿಸಬೇಕು ಮತ್ತು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಂವಾದವನ್ನು ಪ್ರಾರಂಭಿಸಬೇಕು ಎಂದು ಈಗಾಗಲೇ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ನಾವು ಈ ಮನವಿಯನ್ನು ಪುನರುಚ್ಚರಿಸುತ್ತೇವೆ ಮತ್ತು ನ್ಯಾಯಾಂಗೇತರ ಹತ್ಯೆಗಳು ಮತ್ತು ಹಿಂಸಾಚಾರವನ್ನು ತಕ್ಷಣ ಜಾರಿಗೆ ಬರುವಂತೆ ನಿಲ್ಲಿಸಬೇಕು ಹಾಗೂ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸುತ್ತೇವೆ.

# ಕಾಶ್ಮೀರ ದಾಳಿಗೆ ಭಾರತದ ಪ್ರತಿಕ್ರಿಯೆ... ಪುಟ 7 ರಿಂದ

ಕಾಲದ ನಾಯಕ ಎಂದು ಬಿಂಬಿಸುವ ರೀತಿಯಲ್ಲಿ ದೇಶದಾದ್ಯಂತ ಕಟೌಟ್ ಮತ್ತು ಬ್ಯಾನರ್‌ಗಳನ್ನು ಈಗಲೂ ಪ್ರದರ್ಶಿಸಲಾಗುತ್ತಿದೆ. ಸಂಘರ್ಷದ ಈ ರಾಜಕೀಯಕರಣದ ಬಗ್ಗೆ ಭಾರತೀಯ ಚುನಾವಣಾ ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ನಾವು ಕಳವಳ ವ್ಯಕ್ತಪಡಿಸಿದ್ದೇವೆ. ಚುನಾವಣಾ ಲಾಭಗಳನ್ನು ಗಮನದಲ್ಲಿಟ್ಟುಕೊಂಡು ದೇಶದೊಳಗೆ ನಡೆಸುವ ಪ್ರಚಾರಗಳು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ತಿರುಗುಬಾಣವಾಗುವ ಅಪಾಯ ಹೊಂದಿವೆ. ಭಾರತೀಯ ಸರಕಾರ ಯುದ್ಧಕೋರ ನೀತಿ ಅನುಸರಿಸುತ್ತಿದೆ ಎಂದು ಜಾಗತಿಕ ಸಮುದಾಯ ಭಾವಿಸುವ ಸಂಭವವಿರುವುದೇ ಇದಕ್ಕೆ ಕಾರಣ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಪ್ರವೇಶದ ಸುತ್ತ ಹರಡಿರುವ ನಿಗೂಢತೆ ಬಗ್ಗೆ ಹೇಳುವುದಾದರೆ ಅದು ಮೂರನೇ ಪಕ್ಷದ ಮಧ್ಯಸ್ಥಿಕೆಗೆ ಸಮನಾಗುತ್ತದೆ. ಈ ವಿಚಾರವನ್ನು ಕೂಡ ಸರಕಾರ ನಿರ್ವಹಿಸಬೇಕಾಗಿದೆ. ದ್ವಿಪಕ್ಷೀಯ ವಿಚಾರಗಳಲ್ಲಿ ಬಾಹ್ಯ ಮಧ್ಯಸ್ಥಿಕೆಯನ್ನು ವಿರೋಧಿಸುವ ಭಾರತದ ದೀರ್ಘಕಾಲೀನ ಸಹಮತಕ್ಕೂ ಈ ಧೋರಣೆ ತೀರಾ ತದ್ವಿರುದ್ಧವಾಗುತ್ತದೆ.


ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯುವುದು, ಜಮ್ಮು ಮತ್ತು ಕಾಶ್ಮೀರಕ್ಕೆ ಪೂರ್ಣ ರಾಜ್ಯ ಸ್ಥಾನಮಾನ ನೀಡಿಕೆ ಮತ್ತು ದೈನಂದಿನ ಆಡಳಿತದಲ್ಲಿ ಜನತಾಂತ್ರಿಕ ಮತ್ತು ಜಾತ್ಯತೀತ ತತ್ವಗಳನ್ನು ಪಾಲಿಸುವುದು –ಇವುಗಳ ಮೂಲಕ ಈಗಲಾದರೂ ಗಂಭೀರ ಪ್ರಯತ್ನವನ್ನು ಪ್ರಾಮಾಣಿಕವಾಗಿ ಆರಂಭಿಸಬೇಕು. ಪ್ರಸಕ್ತ ಎದುರಿಸುತ್ತಿರುವ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇರುವ ಏಕೈಕ ಅರ್ಥಪೂರ್ಣ ಮಾರ್ಗ ಇದಾಗಿದೆ.

**ಅನು: ವಿಶ್ವ**





# ಜಿಡಿಪಿ ಕೇಕೆಯೂ ಮತ್ತು ನಿಜವಾದ ಪ್ರಗತಿಯೂ




**ಜನರಿಗಿಂತ ರಾಷ್ಟ್ರದ ಸಂಪತ್ತು ಉನ್ನತ ಸ್ಥಾನ ನೀಡುವುದು ಅಪೇಕ್ಷಣೀಯ ಎಂದು ಪರಿಗಣಿಸಿದ ಆಡಂ ಸ್ಮಿತ್, ಡೇವಿಡ್ ರಿಕಾರ್ಡೊರಂತಹ ಕಳೆದ ಶತಮಾನದ ಪಾರಂಪರಿಕ ಅರ್ಥಶಾಸ್ತ್ರಜ್ಞರಂತೆ ಈಗಲೂ ಜಿಡಿಪಿಯ ಮಟ್ಟವನ್ನು "ರಾಷ್ಟ್ರ"ದ ಸಮೃದ್ಧಿಯ ಸೂಚಿಯಾಗಿಯೂ ಮತ್ತು ಅದರ ಬೆಳವಣಿಗೆಯ ದರವನ್ನು ದೇಶದ ಪ್ರಗತಿಯ ಸೂಚಿಯಾಗಿಯೂ ತೆಗೆದುಕೊಳ್ಳಲಾಗುತ್ತಿದೆ. ಈ ಅರ್ಥದಲ್ಲಿ ಬಂಡವಾಳಶಾಹಿಗಳನ್ನು ಸಂತುಷ್ಟಗೊಳಿಸುವ ಮೂಲಕ, ಅವರಿಗೆ ಪ್ರೋತ್ಸಾಹಕಗಳನ್ನು ಒದಗಿಸುವ ಮೂಲಕ, ಅವರ ಹಿತಾಸಕ್ತಿಗಳನ್ನು ಉತ್ತೇಜಿಸುವ ಮೂಲಕ ಮಾತ್ರವೇ ಉತ್ತಮವಾದ ಪ್ರಗತಿಯನ್ನು ಮತ್ತು ಆ ಮೂಲಕ "ರಾಷ್ಟ್ರದ" ಹಿತವನ್ನು ಕಾಪಾಡಿಕೊಳ್ಳಬಹುದು ಎಂಬ ನಿಲುವು ಒಂದು ಪಕ್ಕಾ ಸೈದ್ಧಾಂತಿಕ ಪಕ್ಷಪಾತದ ಕ್ರಮ. ಇದು ಭಾರತದ ವಸಾಹತುಶಾಹೀ–ವಿರೋಧಿ ಹೋರಾಟದ ಮನೋಭಾವಕ್ಕೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಸ್ಥಿತಿ–ಗತಿಗಳೇ ಮುಖ್ಯವಾಗಬೇಕು ಎಂಬುದಕ್ಕೆ ಬಗೆಯುವ ಅಪಚಾರ. ಜಾಗತಿಕ ಹಸಿವು ಸೂಚ್ಯಂಕದಲ್ಲಿ 105ನೇ ಸ್ಥಾನದ ಬಗ್ಗೆ ನಾಚಿಕೆಪಡುವುದರ ಬದಲು, ಜಿಡಿಪಿಯ ಗಾತ್ರದ ಬಗ್ಗೆ ಕೇಕೆ ಹಾಕುವ ಸರ್ಕಾರವೊಂದನ್ನು ನಾವು ಹೊಂದಿದ್ದೇವೆ.**

**ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್**

ಒಂದು ರಾಷ್ಟ್ರದ ಸಮೃದ್ಧಿಯನ್ನು ಅದು ಹೊಂದಿರುವ ಅಮೂಲ್ಯ ಲೋಹಗಳ ಪ್ರಮಾಣದಿಂದ ಮತ್ತು ಪ್ರಗತಿಯನ್ನು ಅದರ ಅಮೂಲ್ಯ ಲೋಹಗಳ ಪ್ರಮಾಣದ ಹೆಚ್ಚಳದ ಪರಿಭಾಷೆಯಲ್ಲಿ ವಾಣಿಜ್ಯವಾದಿಗಳು ವ್ಯಾಖ್ಯಾನಿಸಿದ್ದಾರೆ. ಈ ಅಮೂಲ್ಯ ಲೋಹಗಳ ಸಂಗ್ರಹವನ್ನು ಹೆಚ್ಚಿಸಿಕೊಳ್ಳಲು, ಒಂದು ರಾಷ್ಟ್ರವು ತನ್ನ ಸರಕು ಮತ್ತು ಸೇವೆಗಳ ವ್ಯಾಪಾರ ಸಮತೋಲನವನ್ನು ಅನುಕೂಲಕರವಾಗಿ ಹೊಂದಿರಬೇಕಾಗುತ್ತಿತ್ತು (ಅಂದರೆ, ಅದರ ರಫ್ತುಗಳು ಅದರ ಆಮದುಗಳಿಗಿಂತಲೂ ಅಧಿಕವಾಗಿರಬೇಕಿತ್ತು), ಆ ನಂತರ ಈ ಅಧಿಕ ರಫ್ತುಗಳಿಗೆ ಸಮನಾದ ಮೌಲ್ಯವನ್ನು ಅಮೂಲ್ಯ ಲೋಹಗಳನ್ನು, ಅದರಲ್ಲೂ ವಿಶೇಷವಾಗಿ ಚಿನ್ನವನ್ನು, ಆಮದು ಮಾಡಿಕೊಳ್ಳುವ ಮೂಲಕ ಇತ್ಯರ್ಥ ಮಾಡಿಕೊಳ್ಳಬೇಕಾಗುತಿತ್ತು. ಚಿನ್ನದ ಸಂಗ್ರಹವನ್ನು ಈ ರೀತಿಯಲ್ಲಿ ಹೆಚ್ಚಿಸಿಕೊಳ್ಳಲಾಗುತಿತ್ತು.

'ದಿ ವೆಲ್ತ್ ಆಫ್ ನೇಷನ್ಸ್' ಎಂಬ ಮೇರು ಕೃತಿಯನ್ನು ಆಡಮ್ ಸ್ಮಿತ್ ಬರೆದಾಗ, ಈ ವಾಣಿಜ್ಯವಾದಿಗಳು ಅವರ ಟೀಕೆಗೆ ಗುರಿಯಾಗಿದ್ದರು. ಈಸ್ಟ್ ಇಂಡಿಯಾ ಕಂಪನಿಯಂತಹ ವ್ಯಾಪಾರ ಏಕಸ್ವಾಮ್ಯ ಕಂಪನಿಗಳು ಹೇಳಿಕೊಂಡ ಹಾಗೆ, ಒಂದು ರಾಷ್ಟ್ರವು ಹೊಂದಿರುವ ಸಂಪತ್ತನ್ನು ವ್ಯಾಖ್ಯಾನಿಸುವುದು ಅದು ಹೊಂದಿರುವ ಅಮೂಲ್ಯ ಲೋಹಗಳ ದಾಸ್ತಾನಿನ ಪ್ರಮಾಣದ ಮೇಲಲ್ಲ, ಬದಲಿಗೆ, ಅದು ಹೊಂದಿದ ಬಂಡವಾಳ ದಾಸ್ತಾನಿನ ಪ್ರಮಾಣದ ಮೇಲೆ ಎಂಬುದು ಸ್ಮಿತ್ ಅವರ ನಿಲುವಾಗಿತ್ತು. ಹಾಗಾಗಿ, ದೇಶದ ಪ್ರಗತಿಯನ್ನು ಬೃಹತ್ ಪ್ರಮಾಣದ ಬಂಡವಾಳ ಸಂಗ್ರಹಣೆಯ ಮೂಲಕ ನೋಡಲಾಯಿತು. ಈ ಉದ್ದೇಶಕ್ಕಾಗಿ, ಅರ್ಥವ್ಯವಸ್ಥೆಯಲ್ಲಿ ವ್ಯಾಪಾರ ಸ್ವಾತಂತ್ರ್ಯವು ಮೇಲುಗೈ ಹೊಂದುವುದನ್ನು ಖಚಿತಪಡಿಸುವ ಮೂಲಕ, ಅಂದರೆ, ಮಾರುಕಟ್ಟೆಗಳು ಮತ್ತು ಬಂಡವಾಳವು ತಮ್ಮ ತಮ್ಮ ಕಾರ್ಯನಿರ್ವಹಣೆಯಲ್ಲಿ ಹೊಂದಿದ್ದ ಸ್ವಾತಂತ್ರ್ಯದ ಮೇಲೆ ಪ್ರಭುತ್ವವು ವಿಧಿಸಿದ್ದ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕುವ ಮೂಲಕ, ಅತ್ಯಂತ ಅನುಕೂಲಕರ ಪರಿಸ್ಥಿತಿಯನ್ನು ಸೃಷ್ಟಿಸಲಾಯಿತು. ಈ ಕಾರ್ಯಭಾರವನ್ನು ಸಾಧ್ಯವಾಗಿಸಲು ಈಸ್ಟ್ ಇಂಡಿಯಾ ಕಂಪನಿಯಂತಹ ಏಕಸ್ವಾಮ್ಯ ಕಂಪನಿಗಳ ಹಿಡಿತವನ್ನು ತೆಗೆದುಹಾಕಬೇಕಾಗಿತ್ತು.

**'ರಾಷ್ಟ್ರ' ಮತ್ತು ಜನತೆ**

ಸ್ಮಿತ್ ಅವರ ಈ ನಿಲುವಿನಲ್ಲಿದ್ದ ಗಮನಾರ್ಹವಾದ ವಿಷಯವೆಂದರೆ, ರಾಷ್ಟ್ರದ ಬಗ್ಗೆ ಆವರೆಗೆ ಹೊಂದಿದ್ದ ಪರಿಕಲ್ಪನೆಯನ್ನು ಕ್ರಾಂತಿಕಾರಕವಾಗಿ ನುಚ್ಚುನೂರು ಮಾಡಿದುದರ ಹೊರತಾಗಿಯೂ, ಜನರ ಬದಲಾಗಿ ರಾಷ್ಟ್ರದ ಮೇಲೇ ಅವರು ಹೆಚ್ಚು ಒತ್ತು ಕೊಟ್ಟರು; ರಾಷ್ಟ್ರದ ಸಂಪತ್ತು, ಜನರಿಗಿಂತಲೂ ಉನ್ನತವಾದ ಸ್ಥಾನವನ್ನು ಹೊಂದಿದೆ ಎಂದೂ ಮತ್ತು ಅದನ್ನು ಅಪೇಕ್ಷಣೀಯವೆಂದೂ ಪರಿಗಣಿಸಿದರು. ಸಂಪತ್ತು ಎಂದರೆ ಯಾವುದು ಎಂಬುದರ ಪರಿಕಲ್ಪನೆಯನ್ನೇ ಬದಲಿಸಿದರು. ಸಂಪತ್ತು ಎಂದರೆ ಚಿನ್ನ ಮತ್ತು ಬೆಳ್ಳಿ ಎಂಬುದರ ಬದಲಾಗಿ ಅದು ಬಂಡವಾಳದ ಒಟ್ಟಾರೆ ಮೊತ್ತ ಎಂದು ಅವರು ಪರಿಗಣಿಸಿದರೇ ವಿನಃ ರಾಷ್ಟ್ರದ ಪರಿಕಲ್ಪನೆಯನ್ನು ಅವರು ಬದಲಿಸಲಿಲ್ಲ.

ಜನರಿಂದ ಭಿನ್ನವಾದ ಮತ್ತು ಅವರಿಗಿಂತಲೂ ಬಹಳ ಎತ್ತರದಲ್ಲಿ ಇರಿಸಿದ ರಾಷ್ಟ್ರದ ಈ ಕಲ್ಪನೆಯು ವೆಸ್ಟ್‌ಫಾಲಿಯನ್ ಶಾಂತಿ ಒಪ್ಪಂದಗಳ ನಂತರ ಯುರೋಪಿನಲ್ಲಿ ಬೆಳೆದು ಬಂದ ಬೂರ್ಜ್ವಾ ರಾಷ್ಟ್ರೀಯತೆಯ ಲಕ್ಷಣವೂ ಹೌದು. 1930ರ ದಶಕದಲ್ಲಿ ಯುರೋಪಿನಲ್ಲಿ ತಲೆದೋರಿದ ಫ್ಯಾಸಿಸಂ ಆಳ್ವಿಕೆಯಡಿಯಲ್ಲಿ ಈ ಕಲ್ಪನೆಯು ಉತ್ತುಂಗವನ್ನು ತಲುಪಿದರೂ, ಅದು ಬೂರ್ಜ್ವಾ ಚಿಂತನಾ ಹಾದಿಯಲ್ಲಿ ಸಾಧಾರಣವಾಗಿ ಕಂಡುಬರುವ ಒಂದು ವಿಷಯವೂ ಹೌದು.

ರಾಷ್ಟ್ರ ಎಂಬುದು ಜನರಿಗಿಂತಲೂ ಉನ್ನತ ಸ್ಥಾನದಲ್ಲಿದೆ ಎಂದು ಭಾವಿಸಲಾಗಿತ್ತಾದರೂ, "ರಾಷ್ಟ್ರೀಯ ಹಿತಾಸಕ್ತಿ"ಯು ಬೂರ್ಜ್ವಾಗಳ ನಿರ್ದಿಷ್ಟ ವಿಭಾಗಗಳ ಹಿತಾಸಕ್ತಿಗಳೊಂದಿಗೆ ಗುರುತಿಸಲ್ಪಟ್ಟಿತ್ತು. ಚಿನ್ನ–ಬೆಳ್ಳಿಯ ಬದಲಾಗಿ ಷೇರು–ಬಂಡವಾಳವೇ ಸಂಪತ್ತು ಎಂದು ಪರಿಭಾವಿಸುವ ಬದಲಾವಣೆಯು, ಅದುವರೆಗೆ ಈಸ್ಟ್ ಇಂಡಿಯಾ ಕಂಪನಿಯಂತಹ ಏಕಸ್ವಾಮ್ಯ ವ್ಯಾಪಾರಿ ಕಂಪನಿಗಳ ಹಿತಾಸಕ್ತಿಗಳೇ "ರಾಷ್ಟ್ರೀಯ ಹಿತಾಸಕ್ತಿ"ಗೆ ಸಮಾನವೆಂದು ಆದರ್ಶೀಕರಿಸಿದ್ದುದಕ್ಕೆ ಬದಲಾಗಿ, ಉದಯೋನ್ಮುಖ ತಯಾರಿಕಾ ಬೂರ್ಜ್ವಾಗಳ ಹಿತಾಸಕ್ತಿಗಳು "ರಾಷ್ಟ್ರೀಯ ಹಿತಾಸಕ್ತಿ"ಯ ಮೂರ್ತ ರೂಪವೆಂದು ಪರಿಗಣಿಸಿದ ಬದಲಾವಣೆಯಾಗಿತ್ತು. ಈ ಉದಯೋನ್ಮುಖ ತಯಾರಿಕಾ ಬೂರ್ಜ್ವಾಗಳ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುವುದನ್ನು ರಾಷ್ಟ್ರದ ಹಿತಾಸಕ್ತಿಗಳ ಪ್ರಗತಿಗೆ ಸಮಾನವೆಂದು ನೋಡಲಾಯಿತು. ಈ ಬದಲಾವಣೆಯನ್ನು ಜನರಿಂದ ಭಿನ್ನವಾದ ಮತ್ತು ಅವರಿಗಿಂತ ಉನ್ನತ ಸ್ಥಾನದಲ್ಲಿರುವ ರಾಷ್ಟ್ರದ ಪರಿಕಲ್ಪನೆಗೆ ಆತುಕೊಂಡೇ ಮಾಡಲಾಯಿತು.

ಡೇವಿಡ್ ರಿಕಾರ್ಡೊ ಸಹ, ಪ್ರಗತಿಯ ಬಗ್ಗೆ, ರಾಷ್ಟ್ರದೊಳಗೆ ಬಂಡವಾಳದ ಸಂಗ್ರಹಣೆಯ ಹೆಚ್ಚಳವೇ ಪ್ರಗತಿ ಎಂದು ಪ್ರತಿಪಾದಿಸಿದ ಆಡಮ್ ಸ್ಮಿತ್ ಅವರ ಅಭಿಪ್ರಾಯವನ್ನೇ ಒಪ್ಪಿಕೊಂಡಿದ್ದರು. ಆದರೆ, ಬಂಡವಾಳದ ಸಂಗ್ರಹಣೆ ಒಂದು ವೇಳೆ ನಿಂತಾಗ, ಷೇರು–ಬಂಡವಾಳವೇ ರಾಷ್ಟ್ರದ ಸಂಪತ್ತು ಎಂಬ ಪರಿಕಲ್ಪನೆಯು ಬಂಡವಾಳಶಾಹಿಯನ್ನು ಒಂದು ಸ್ತಬ್ಧ ಅವಸ್ಥೆಯತ್ತ ಕೊಂಡೊಯ್ಯಬಹುದು, ಆಗ ಪ್ರಗತಿ ಇರುವುದಿಲ್ಲ ಎಂಬ ಭಯ ಅವರಲ್ಲಿ ಹುಟ್ಟಿಕೊಂಡಿತು. ಈ ವಿಷಯದಲ್ಲಿ ಜಾನ್ ಸ್ಟುವರ್ಟ್ ಮಿಲ್ ನಿಸ್ಸಂದೇಹವಾಗಿ ಒಂದು ಅಪವಾದವೇ ಸರಿ. ಏಕೆಂದರೆ, ಕಾರ್ಮಿಕರ ಸ್ಥಿತಿಗತಿಗಳು ಅರ್ಥವ್ಯವಸ್ಥೆಯಲ್ಲಿ ಬಂಡವಾಳವು ಸಂಗ್ರಹಣೆಯಾಗುತ್ತಿರುವ ಸಮಯದಲ್ಲಿ ಇದ್ದುದ್ದಕ್ಕಿಂತಲೂ ಅದರ ಸ್ತಬ್ಧ ಅವಸ್ಥೆಯಲ್ಲಿ ಉತ್ತಮವಾಗಿದ್ದರೆ ಸ್ಥಗಿತತೆಯ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ಅವರು ದೃಢವಾಗಿ ಹೇಳಿದ್ದರು. ಅಂದರೆ, ಅವರ ಪೂರ್ವವರ್ತಿಗಳಾದ ಆಡಮ್ ಸ್ಮಿತ್ ಮತ್ತು ಡೆವಿಡ್ ರಿಕಾರ್ಡೊ ಅವರುಗಳಿಗಿಂತಲೂ ಭಿನ್ನವಾಗಿ, ಜಾನ್ ಸ್ಟುವರ್ಟ್ ಮಿಲ್ ಅವರು ಕಾರ್ಮಿಕರ ಯೋಗಕ್ಷೇಮವನ್ನು ಬಂಡವಾಳ ಸಂಗ್ರಹಣೆಗಿಂತಲೂ ಮೇಲಿನ ಮಟ್ಟದಲ್ಲಿ ಇರಿಸಿದರು. ಸಾಂಪ್ರದಾಯಕ ರಾಜಕೀಯ ಅರ್ಥವ್ಯವಸ್ಥೆಯು ಹೊಂದಿದ್ದ ನಿಲುವಿನಿಂದ ಭಿನ್ನವಾದ ಅವರ ಈ ದಿಕ್ಪಲ್ಲಟವನ್ನು ಅವರು ತಮ್ಮ ಪತ್ನಿ ಹ್ಯಾರಿಯೆಟ್ ಅವರ ಪ್ರಭಾವದಿಂದಾಗಿ ಸಮಾಜವಾದದತ್ತ ವಾಲಿದ್ದರು ಎಂಬ ಅಂಶದಿಂದ ವಿವರಿಸಬಹುದು.

**ತಪ್ಪು ಮಾಲ್ತಸ್ ಗ್ರಹಿಕೆ**

ಆದಾಗ್ಯೂ, ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರಾದ ಸ್ಮಿತ್ ಮತ್ತು ರಿಕಾರ್ಡೊ ಅಂಥವರನ್ನು, ಅವರು ತಮ್ಮ ಗಮನವನ್ನು ದುಡಿಯುವ ಜನತೆಯ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸುವ ಬದಲು ಬಂಡವಾಳ ಸಂಗ್ರಹದ (capital stock) ಪ್ರಮಾಣದ (ಮತ್ತು ಅದು ಉತ್ಪಾದಿಸುವ ಉತ್ಪತ್ತಿಯ ಪ್ರಮಾಣ) ಮೇಲೆ ಕೇಂದ್ರೀಕರಿಸಿದ್ದಕ್ಕಾಗಿ ಅತಿಯಾಗಿ ಟೀಕಿಸಬಾರದು. ಕಾರ್ಮಿಕರ ಬಗ್ಗೆ ಅವರಿಗೆ ಹೆಚ್ಚು ಸಹಾನುಭೂತಿ ಇತ್ತಾದರೂ, ಕಾರ್ಮಿಕರು ತಮ್ಮ ಲೌಕಿಕ ಜೀವನದ ಸ್ಥಿತಿ–ಗತಿಗಳು ಸುಧಾರಿಸಿದರೆ ವೇಗವಾಗಿ ಸಂತಾನೋತ್ಪತ್ತಿ ಮಾಡುತ್ತಾರೆ ಎಂದು ಅವರು ನಂಬಿದ್ದರು (ಈ ಕಲ್ಪನೆಯು ಮಾಲ್ತಸ್ ಅವರ ಜನಸಂಖ್ಯಾ ಸಿದ್ಧಾಂತದಲ್ಲಿ ಅಭಿವ್ಯಕ್ತಿ ಪಡೆಯಿತು). ನಿಜ ಕೂಲಿಯು ಒಂದು ವೇಳೆ ಜೀವನಾಧಾರ ಮಟ್ಟಕ್ಕಿಂತ ಮೇಲಿದ್ದರೆ ಜನಸಂಖ್ಯೆ ಹೆಚ್ಚುತ್ತದೆ ಮತ್ತು ಕಾರ್ಮಿಕ ಪೂರೈಕೆಯೂ ಹೆಚ್ಚುತ್ತದೆ ಮತ್ತು ಆ ನಂತರ ನಿಜ ಕೂಲಿಯನ್ನು ಜೀವನಾಧಾರ ಮಟ್ಟಕ್ಕೆ ತರುತ್ತದೆ ಎಂದು ಭಾವಿಸಿದ್ದರು.

ಕಾರ್ಮಿಕರ ಸ್ಥಿತಿ–ಗತಿಗಳ ಸುಧಾರಣೆಯು ಅವರ ಮೇಲೆಯೇ ಅವಲಂಬಿತವಾಗಿದೆ ಎಂದಂತಾಯಿತು. ಹಾಗಾಗಿ ಕಾರ್ಮಿಕರು ತಮ್ಮ ಅಭ್ಯಾಸಗಳನ್ನು ತಾವೇ ಬದಲಾಯಿಸಿಕೊಳ್ಳಬೇಕಾಗಿತ್ತು ಮತ್ತು ತಮ್ಮ ಸ್ಥಿತಿ–ಗತಿಗಳು ಸುಧಾರಿಸಿದಾಗಲೂ ತಮ್ಮ ಸಂಖ್ಯೆಯ ಬೆಳವಣಿಗೆಯನ್ನು ಅವರೇ ತಡೆಯಬೇಕಾಗಿತ್ತು; ಆಗ ಮಾತ್ರವೇ ಅವರು ತಮ್ಮ ಜೀವನದಲ್ಲಿ ಸಂಭವಿಸುವ ಸುಧಾರಣೆಗಳನ್ನು ಕಾಪಾಡಿಕೊಳ್ಳಬಹುದು. ನೀತಿಗಳು ಈ ಬಗ್ಗೆ ಏನನ್ನೂ ಮಾಡಲು ಸಾಧ್ಯವಾಗದ ಕಾರಣ, ನೀತಿಯು ಬಂಡವಾಳ ಸಂಗ್ರಹಣೆಯ ಹೆಚ್ಚಳದ ಕಡೆಗೇ ಗಮನ ಹರಿಸಬೇಕು ಮತ್ತು ಉತ್ಪಾದನೆಯನ್ನು ಹೆಚ್ಚಿಸಬೇಕು. ಇದು ಎಲ್ಲರಿಗೂ ಲಭಿಸುವ ಉತ್ಪಾದನೆಯ ಒಟ್ಟು ಮೊತ್ತವನ್ನು ಹೆಚ್ಚಿಸುತ್ತದೆ. ಇದರಿಂದ ಕಾರ್ಮಿಕರು ತಮ್ಮ ಅಭ್ಯಾಸಗಳನ್ನು ಒಂದು ವೇಳೆ ಬದಲಾಯಿಸಿಕೊಂಡರೆ ಹೆಚ್ಚಿನ ಪಾಲನ್ನು ಪಡೆಯಬಹುದು ಎಂದು ಅಭಿಪ್ರಾಯಪಡಲಾಯಿತು.

ಈ ಅಭಿಪ್ರಾಯದ ಸಂಬಂಧವಾಗಿ, ಸ್ಮಿತ್ ಮತ್ತು ರಿಕಾರ್ಡೊ ಅವರಿಗೆ ನಾವು ತೋರಬಹುದಾದ ಔದಾರ್ಯವನ್ನು ಆ ನಂತರದ ಪುಟ 15 ಕ್ಕೆ

## ಕನ್ನಡದಲ್ಲಿ ಪರಿಸರ ಸಾಹಿತ್ಯ.......

ಪುಟ 10 ರಿಂದ

ದೆಸೆದೆಸೆಗಳಂ ನೋಡಿದುವು ಪೂಕಂಗಳ್".

ಲಕ್ಷ್ಮೀಶ ರಾಘವಾಂಕರಿಬ್ಬರೂ ಕಾಡಿನ ಪರಿಚಯ ಮತ್ತು ಬೇಟೆಯ ವಿವರಗಳನ್ನು ಪರಿಚಯಿಸುವಾಗ ಕಾಡಿನ ಜೀವ ಜಂತುಗಳ ವರ್ಣನೆ ಜೊತೆಗೆ ಮಾನವ ಶ್ರಮವನ್ನೂ ಚಿತ್ರಿಸಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಎಂದು ಜಿ.ಎಸ್.ಎಸ್ ಹೇಳುತ್ತಾರೆ.

ಒಟ್ಟಾರೆ ಪ್ರಾಚೀನ ಕವಿಗಳು ಪುರಾಣದ ವಸ್ತುವಿಷಯದ ಕೇಂದ್ರದಲ್ಲಿದ್ದಂತ ನಿಸರ್ಗ ತತ್ವದಡಿಯಲ್ಲೇ ತಮ್ಮ ಕವನ ರಚನೆ ಮಾಡುತ್ತಿದ್ದರು, ನಿಸರ್ಗ ಅವರ ಪುರಾಣದ ವಸ್ತುವಿನ ಕಾವ್ಯಸೃಷ್ಟಿಯ ಸೃಜನಶೀಲ ಆಕರಗಳಾಗಿತ್ತು ಅಷ್ಟೆ.

12ನೇ ಶತಮಾನದ ವಚನ ಸಾಹಿತ್ಯ, ಶರಣ ಚಳುವಳಿಯ ಉಪಸೃಷ್ಠಿ ಇಡಿ ಚಳುವಳಿಯೇ ನಿಸರ್ಗದಿಂದ ಬೇರ್ಪಡಿಸಿದ ದುಡಿವ ಮಾನವನನ್ನು ಪುನಃ ನಿಸರ್ಗದ ಜೊತೆಗೂಡಿಸಿದ ಉಪಕ್ರಮ.

"ಭೂಮಿ ನಷ್ಟವಾದರೆ ಜಲಕ್ಕಿಂಬಿಲ್ಲ, ಜಲ ನಷ್ಟವಾದರೆ ಇಂದ್ರಿಯಕ್ಕಿಂಬಿಲ್ಲ, ಇಂದ್ರಿಯ ನಷ್ಟವಾದರೆ ಜಂಗಮಕ್ಕಿಂಬಿಲ್ಲ ಇದು ಕಾರಣ, ಕರಣಾದಿಗಳಂ ಬಿಡದೆ ಅನುವ್ರತಿಯೆಂಬವರ ತೋರಯ್ಯಾ ಕೂಡಲಚೆನ್ನಸಂಗಮದೇವಾ".– ಭೂಮಿ ನಷ್ಟವಾದರೆ ನೀರಿಗೆ ಆಶ್ರಯವಿಲ್ಲ. ನೀರಿಲ್ಲದಿದ್ದರೆ ಬದುಕುವುದಾದ್ರೂ ಹೇಗೆ ಎನ್ನುವ ಪ್ರಶ್ನೆಯನ್ನು ಎತ್ತಿ ಭೂಮಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಈ ವಚನದ ಮೂಲಕ ಚನ್ನಬಸವಣ್ಣ ತಿಳಿಸಿದ್ದಾನೆ.

ಬಸವಾದಿ ಪ್ರಮಥರೆಲ್ಲಾ ನಿಸರ್ಗ–ಹಸಿವು–ಅಸಮಾನತೆ ಸಮ್ಮೇಳಿಸಿಯೇ ವಚನ ಸೃಷ್ಠಿ ಮಾಡಿರುವುದು "ಒಲೆ ಹೊತ್ತಿ ಉರಿದೆಡೆ ನಿಲಬಹುದಲ್ಲದೆ ಧರೆ ಹೊತ್ತಿ ಉರಿದೆಡೆ ನಿಲಲುಬಾರದು", "ಮರ ಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು, ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧ್ಧಿಯಯ್ಯಾ?", "ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲದಲ್ಲಿದೆ ಚರಾಚರವೆಲ್ಲ" ಇವೆಲ್ಲಾ ಪ್ರಕೃತಿಯೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡು ಪ್ರಕೃತಿಯ ಜೊತೆಗೆ ಸಹಬಾಳ್ವೆ ನಡೆಸಿದವರು ಬಸವಾದಿ ಶರಣರು. ಅಕ್ಕಮಹಾದೇವಿ ಜೀವರಾಶಿಗಳು ಪ್ರಕೃತಿಯಲ್ಲಿ ಕಂಡುಬರುವ ಜೈವಿಕ ಮತ್ತು ಅಜೈವಿಕ ವಸ್ತುಗಳ ಪ್ರಕ್ರಿಯೆ ಎಂದು ಪರಿಭಾವಿಸಿದ್ದಳು. "ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ, ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ. ಚೆನ್ನಮಲ್ಲಿಕಾರ್ಜುನಾ, ಸರ್ವಭರಿತನಾಗಿ ಎನಗೇಕೆ ಮುಖದೋರೆ?"

20ನೇ ಶತಮಾನದ ಉತ್ತರಾರ್ಧದಲ್ಲಿ ಪಶ್ಚಿಮ ದಿಕ್ಕಿನಿಂದ ಬೀಸಿದ ನವೋದಯದ ಗಾಳಿ ನಮ್ಮ ಸಾಹಿತ್ಯದ ಮಹಾರಣ್ಯದಲ್ಲಿ ನವ ವಸಂತೋದಯಕ್ಕೆ ಕಾರಣವಾಯಿತು. ಹೊಸ ಆಲೋಚನೆ, ಹೊಸ ಶೈಲಿ, ಹೊಸ ಜನಭಾಷೆ, ಹೊಸ ವಸ್ತುಗಳು ತೆರೆತೆರೆಯಾಗಿ ಚಿಮ್ಮಿ ಕಾವ್ಯದಾವರಣವನ್ನು ನವೋಲ್ಲಾಸದಿಂದ ತುಂಬಿದುವು. ನವೋದಯದ ಪರಿಣಾಮವಾಗಿ ಕವಿಮನೋಧರ್ಮದಲ್ಲಿ ವಸ್ತುನಿಷ್ಠವಾದ ಮಹಾಕಾವ್ಯ ಪದ್ಧತಿಯಿಂದ ವ್ಯಕ್ತಿನಿಷ್ಠವಾದ ಭಾವಗೀತೆಯ ಪದ್ದತಿಗೆ ಬದಲಾಯಿತು. ಆ ಭಾವಗೀತೆಗೆ ಪ್ರಕೃತಿ ಬಹುದೊಡ್ಡ ಆಕರವಾಯಿತು. ಪ್ರಕೃತಿಯ ಜೊತೆ ಬದುಕಿದ ಮನುಷ್ಯನೂ ಕೂಡ ವಸ್ತುವಾದ ಪ್ರಕೃತಿ ಸೌಂಧರ್ಯದ ಜೊತೆ, ಬದುಕು–ಬವಣೆ–ಹಸಿವು ಕೂಡ, ಸ್ವಾತಂತ್ರ್ಯದ ಬಿಡುಗಡೆಯೂ ಕೂಡ.

ಜಿಎಸ್‌ಎಸ್ ವಿವರಿಸುವ ಹಾಗೆ ನವೋದಯದ ಕಾಲದಲ್ಲಿ ಪ್ರಾಕೃತಿಕ ಪರಿಸರ ಎರಡು ರೂಪಗಳಲ್ಲಿ ಚಿತ್ರಿತವಾಗಿದೆ. ಒಂದು ಕವಿಯೇ ಪ್ರಕೃತಿಯ ಕೇಂದ್ರವಾಗಿ ಅಥವ ಪರವಶನಾಗಿ ಅದರ ಬಹಿರಂಗದ ಚೆಲುವನ್ನು ಚಿತ್ರಿಸುವುದು, ಇನ್ನೊಂದು ಪ್ರಕೃತಿಯ ವಸ್ತುಗಳು ತನ್ನೊಳಗೆ ಉಂಟುಮಾಡುವ ಪರಿಣಾಮಗಳನ್ನು ಚಿಂತನಾ ಕ್ರಮದಲ್ಲಿ ಚಿತ್ರಿಸುವುದು. ಕುವೆಂಪು ಮೊದಲ ರೂಪದ ಕವಿಯಾದರೆ ಬೇಂದ್ರೆ, ಪುತಿನಾ, ಜಿ.ಎಸ್.ಎಸ್, ನಿಸರ್ ಅಹಮದ್ ಎರಡನೆ ಮಾದರಿಯ ಕವಿಗಳು ಒಟ್ಟಿನಲ್ಲಿ ಈ ಎಲ್ಲಾ ಕವಿಗಳು ಪಕೃತಿ ಕೇಂದ್ರಿತ ಕವಿಗಳು ಎಂದು ಗುರುತಿಸಬಹುದು.

**ಬೇಂದ್ರೆ:** "ಗಿಡಗಂಟೆಗಳಾ ಕೊರಳೊಳಗಿಂದ
ಹಕ್ಕಿಗಳ ಹಾಡು
ಹೊರಟಿತು ಹಕ್ಕಿಗಳ ಹಾಡು
ಗಂಧರ್ವರ ಸೀಮೆಯಾಯಿತು
ಕಾಡಿನಾ ನಾಡು ಕ್ಷಣದೊಳು ಕಾಡಿನಾ ನಾಡು!"

**ಕುವೆಂಪು:** "ಸದ್ದಿರದ ಪಸುರುಡೆಯ ಮಲೆನಾಡ
ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ.
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು



ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ"

ನವೋದಯದ ನಂತರ ನವ್ಯ, ಪ್ರಗತಿಶೀಲ, ಬಂಡಾಯ, ಪ್ರಕೃತಿ ಹೀಗೆ ಬಹು ವೈವಿಧ್ಯದ ಕವಲುಗಳಾಗಿ ಕನ್ನಡ ಸಾಹಿತ್ಯ ಟಿಸಿಲೊಡೆದುಕೊಂಡಾಗ, ಕನ್ನಡ ಸಾಹಿತ್ಯದ ಸೃಜನಶೀಲತೆಯೂ ವಿಸ್ತಾರವಾಗಿ ಬೆಳೆಯುತ್ತದೆ. ನವೋದಯದ ಕಾಲದಲ್ಲಿ ಸಾಹಿತ್ಯ ಕಟ್ಟಿದ ಕುವೆಂಪು ನಿಸರ್ಗ ಗರ್ಭದಿಂದ ಉದಯಿಸಿ ಬಂದ ಕಾರಣಕ್ಕೋ, ಈ ಪಂಥಗಳ ತಿಕ್ಕಾಟದಿಂದ ಅಂತರ ಕಾಯ್ದುಕೊಂಡ ಕಾರಣಕ್ಕೋ ಗೊತ್ತಿಲ್ಲ, ಪರಿಸರ ಮತ್ತು ಬದುಕನ್ನು ಮೇಳೈಸುವ ಸಾಹಿತ್ಯ ಕೃಷಿಗೆ ಕೈಹಾಕಿದರು. ಕನ್ನಡ ಸಾಹಿತ್ಯ ಲೋಕಕ್ಕೆ ಕರುನಾಡಿನ ಪಕೃತಿಯ ಎಲ್ಲೆಯನ್ನು ಅದರೊಳಗೆ ಬೇಯುವ ಮನುಷ್ಯನ ಬದುಕಿನ ಚಿತ್ರಣವನ್ನು ಪರಿಸರ ಕೇಂದ್ರಿತವಾಗಿ ಕನ್ನಡ ಸಾಹಿತ್ಯಕ್ಕೆ ಶ್ರೀಮಂತ ಕೊಡುಗೆ ನೀಡಿದರು. ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿಯನ್ನು ಯಾವ ಪ್ರಕಾರಕ್ಕೆ ಸೇರಿಸುವುದು. ಅದರೊಳಗೆ ಪ್ರಕೃತಿಯೇ ಮೈವೆತ್ತಿ ಬಂದ ದೃಶ್ಯ ವೈಭವಗಳಿವೆ, ಮಲೆನಾಡಿನ ನಿತ್ಯ ಹರಿದ್ವರ್ಣದ ಸೊಬಗನ್ನು ಕಟ್ಟಿಕೊಡುತ್ತೆ, ಶಿವರಾಮ ಕಾರಂತರ ಚೋಮನ ದುಡಿಯೂ ಕೂಡ ಈ ಸಾಲಿನಲ್ಲಿ ನಿಲ್ಲಬಲ್ಲ ಕೃತಿ.

ಕುವೆಂಪು–ಕಾರಂತರ ಕಾಲಘಟ್ಟದಲ್ಲಿ ವಿಜ್ಞಾನದ ಬೇರೆ ಬೇರೆ ಕ್ಷೇತ್ರದ ಮಹತ್ವದ ಸಾಧನೆಗಳು ಜನ ಜೀವನವನ್ನು ಪ್ರಭಾವಗೊಳಿಸತೊಡಗಿದಾಗ, ಅದರಿಂದಲೇ ಉದ್ಭವವಾಗುವ ಸಾಹಿತ್ಯಕೃತಿಗಳಿಗೂ ಪ್ರಭಾವ ಬೀರುತ್ತದೆ, ಡಾರ್ವಿನ್ನನ ವಿಕಾಸವಾದ ವಿಶ್ವ ಪ್ರಸಿದ್ಧವಾಗಿ ಜೀವ ಸಂಕುಲಗಳ ಕಥೆ ಜಗತ್ತಿನ ಮುಂದೆ ತೆರೆದಿಟ್ಟಿರುತ್ತದೆ, ಜೀವ ವಿಜ್ಞಾನದ ಸಾಹಿತ್ಯ ಜಗದಾದ್ಯಂತ ಬರಲಾರಂಬಿಸುತ್ತದೆ, ಕನ್ನಡ ಸಾಹಿತ್ಯ ಲೋಕಕ್ಕೂ ಪೂರ್ಣಚಂದ್ರ ತೇಜಸ್ವಿ ಮಿಸ್ಸಿಂಗ್ ಲಿಂಕ್ ಮೂಲಕ ಡಾರ್ವಿನ್ನನ್ನು ಜನಮುಖಿಯಾಗಿಸುತ್ತಾರೆ. ನಮ್ಮ ಕಾಲದ ಜೀವನದ ಸಾಮಾಜಿಕ ಅಗತ್ಯಗಳಿಗಾಗಿ ವಿಜ್ಞಾನದ ತಿಳಿಯು ಅಗತ್ಯ. ತಿಳಿವು ವಿಜ್ಞಾನ ಸಾಹಿತ್ಯವಾಗಿ ಸೃಜನಶೀಲಗೊಳ್ಳುತ್ತದೆ.

80ರ ದಶಕದ ನಂತರ ಹೆಚ್ಚು ಪರಿಸರ ಸಾಹಿತ್ಯಗಳು ಗಧ್ಯ–ಪದ್ಯಗಳೆರಡರ ಪ್ರಕಾರವಾಗಿ ಕನ್ನಡ ಸಾರಸ್ವತ ಲೋಕಕ್ಕೆ ಸೇರಿಕೊಳ್ಳುತ್ತವೆ. ಪೂರ್ಣಚಂದ್ರ ತೇಜಸ್ವಿ ಈ ಸಾಹಿತ್ಯದ ಮುಂಚೂಣಿ ನಾವಿಕನಂತೆ ತನ್ನೊಂದಿಗೆ ಹೊಸ ಕಾಲದ ಬರಹಗಾರರನ್ನೂ ಕರೆದುಕೊಂಡು ಸಾಗುತ್ತಾರೆ. ತೇಜಸ್ವಿ ಅಥವ ಕಾರಂತರು ಪರಿಸರ ಸಾಹಿತ್ಯದ ಜೊತೆ ಪರಿಸರ ಚಳವಳಿಯನ್ನೂ ಒಟ್ಟೊಟ್ಟಿಗೆ ಬೆಸೆದವರು. ಹಾಗಾಗಿ ತೇಜಸ್ವಿ ಹೇಳ್ತಾರೆ ಕಾರಂತರಿಗೆ ಕಾಡು, ಈಸ್ ಎ ಚಾಲೆಂಜ್ ಟು ಎ ಸಿವಿಲೈಸೇಷನ್, 'ಬೆಟ್ಟದ ಜೀವ', 'ಕುಡಿಯರ ಕೂಸು' ಅಲ್ಲೆಲ್ಲ ನೋಡಿದರೆ ನಿಮಗೆ, ಕಾಡು ಹೇಗೆ ದೊಡ್ಡ ಸವಾಲಾಗಿ ಮನುಷ್ಯನಿಗೆ ಕಂಡಿದೆ ಅನ್ನೋದು ಗೊತ್ತಾಗುತ್ತೆ. ಕುವೆಂಪು ಅವರಲ್ಲಿ ಬಂದರೆ ಕಾಡು ತಾಯಿಯ ರೀತಿ ಬರುತ್ತೆ. ಮನುಷ್ಯನನ್ನು ಸಂರಕ್ಷಿಸೋದು, ಮನುಷ್ಯನನ್ನು ಮೊರೆಯುವಂಥದ್ದು ಹಾಗೆ ಕಾಣಿಸಿಕೊಳ್ಳುತ್ತೆ. ನನ್ನ ಲೆವೆಲ್ಲಿಗೆ ಬರುವಷ್ಟು ಹೊತ್ತಿಗಾಗಲೆ, ನಾವೇ ಕಾಪಾಡಬೇಕಾದಂತಹ ಕಾಡುಗಳಾಗಿ ಪರಿವರ್ತನೆಯಾಗಿವೆ!

ಅರ್ಜುನನಿಗೆ ಮರದ ಮೇಲಿನ ಗಿಣಿ ಕಾಣಲಿಲ್ಲ ಅದರ ಹೊಳೆಯುವ ಕಣ್ಣಷ್ಟೇ ಕಂಡದ್ದು, ಇದು ಶ್ರೇಷ್ಠ ಧನುರ್ಧಾರಿಯ ನೋಟ; ಹಾಗೆಯೇ ಓಶೋ ಅವರ ಪ್ರಜ್ಞೆಯ ನೋಟ ಮತ್ತೊಂದಿದೆ. 'ಕಾಡಿನ ನಡುವೆ ಉದುರಿ ಬೀಳುವ ಎಲೆಯ ಸದ್ದನ್ನು ಯಾರಾದರೂ ಕೇಳಿದ್ದೀರಾ?' ಯಾವ ಸಾಹಿತಿಗೆ ಕೇಳುತ್ತದೆ ಅವನೊಬ್ಬ ಉತ್ತಮ ಪರಿಸರ ಸಾಹಿತಿ ಆಗಬಲ್ಲ. ಕನ್ನಡ ಸಾರಸ್ವತಲೋಕಕ್ಕೆ ಕುವೆಂಪು–ಕಾರಂತರ, ನಂತರ ಗಟ್ಟಿಯಾಗಿ ಕರ್ವಾಲೋ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಪೆದ್ದು ಚೆರುವಿನ ರಾಕ್ಷಸ, ಕಾಡಿನ ಕಥೆಗಳು, ಕಿರಿಯರಿಗಾಗಿ ಪರಿಸರ, ಮಿಲೆನಿಯಂ ಸರಣಿಗಳ ಮೂಲಕ ಪರಿಸರದ ಕಥೆ ಹೆಣೆದ ಕೆ.ಪಿ.ಪೂರ್ಣಚಂದ್ರ ತೇಜಸ್ವಿ; 'ಮುಳುಗಡೆಯ ಊರಿಗೆ ಬಂದವರು', 'ದ್ವೀಪ', 'ಕಾಡಿನ ಬೆಂಕಿ' ಒಟ್ಟು 50ಕ್ಕೂ ಅಧಿಕ ಕಾದಂಬರಿಗಳ ಮೂಲಕ ಕಾಡಿನ ಜನರ ಕಥನವನ್ನು ಪರಿಸರ ಸ್ಮರಣೆಯಾಗಿಸಿದ ನಾ.ಡಿಸೋಜ; ಸಸ್ಯಪುರಾಣ, ಬೃಹದಾರಣ್ಯಕ ಮುಂತಾದ 17 ಹೊತ್ತಗೆಗಳ ಮೂಲಕ ಸಸ್ಯಶಾಸ್ತ್ರದ ಸ್ವಾರಸ್ಯವನ್ನು ರಸತುಂಬಿ ಹಸಿರು ಹೊನ್ನಾಗಿಸಿದ ಬಿಜಿಎಲ್ ಸ್ವಾಮಿ; ಮನಮೋಹಕ ಕವನಗಳ ಮೂಲಕ ನಿಸರ್ಗದ ಸಿರಿಯನ್ನು ನಿತ್ಯೋತ್ಸವವಾಗಿಸಿದ ನಿಸಾರ್ ಅಹಮದ್ ಇವರೆಲ್ಲಾ ಕಾಡಿನ ನಡುವೆ ಉದುರಿ ಬಿದ್ದ ಎಲೆಯ ಸದ್ದನ್ನು ನಾಡಿನೊಳಗೆ ಮಾರ್ದನಿಸಿದವರು. ಅವರ ಬೆನ್ನಲ್ಲೇ ಆ ದನಿಯನ್ನು ಕೇಳಿಸಿಕೊಂಡು ಪರಿಸರದ ಕಥೆ ಹೆಣೆದವರು, ಪರಿಸರ ಕವನ ಗೀಚಿದವರು, ಪರಿಸರ ಲೇಖನ ಮಾಲೆ ಕಟ್ಟಿದವರು, ಚಳವಳಿಯ ದಸ್ತಾವೇಜು ನಿರ್ಮಿಸಿದವರು, ಹೊರಗಿನ ಪರಿಸರವನ್ನು ಕನ್ನಡಕ್ಕೆ ತಂದವರು, ಪರಿಸರದ ನಾಟಕ ರಚಿಸಿದವರು, ಪರಿಸರ ಚಿತ್ತಾರ ಮೂಡಿಸಿದವರು ಸಹಸ್ರಾರು ಮಂದಿ. ಅದರಲ್ಲೂ ಮಲೆನಾಡಿನ ಕಾನನ ಪರಿಸರದಿಂದ ಬಂದ ಕವಿಗಳು–ಸಾಹಿತಿಗಳು ಪರಿಸರದ ವರ್ಣನಾ ಸಾಹಿತ್ಯಕ್ಕೆ ಜೀವತುಂಬಿದರು. ಸಕಲೇಶಪುರದ ಮಲೆನಾಡಿನ ಜನರ ಬದುಕನ್ನು ಕಾದಂಬರಿಯಾಗಿಸಿ ನಿಲುವಂಗಿ ಕನಸು, ಕಡವೆ ಬೇಟೆ, ಅಜ್ಜನ ಕಮೋಡುಗಳಂತಹ ಹತ್ತಾರು ಕೃತಿಕೊಟ್ಟ ಹಾಡ್ಲಹಳ್ಳಿ ನಾಗರಾಜ್, ಮಲೆನಾಡಿನ ಜನಜೀವನ ಮತ್ತು ಜೀವರಾಶಿಗಳ ಸಂಕಟಕ್ಕೆ ಅಕ್ಷರ–ನಾಟಕ ಕಟ್ಟಿ ಆನೆ ದಾರಿಯಲ್ಲಿ ಅಲ್ಲೋಲ ಕಲ್ಲೋಲ ರಚಿಸಿದ ಸಾಹಿತಿ ರಂಗಕರ್ಮಿ ಪ್ರಸಾದ್ ರಕ್ಷಿದಿ, 45ಕ್ಕೂ ಅಧಿಕ ಸರಣಿ ಪುಸ್ತಕಗಳ ಮೂಲಕ ಪರಿಸರದ ಎಲ್ಲಾ ಮಗ್ಗುಲುಗಳನ್ನು ದಾಖಲಿಸಿಕೊಟ್ಟ ಗಿರಿಮನೆ ಶ್ಯಾಮರಾವ್ ನನ್ನ ನೆಲದ ಪ್ರಮುಖ ಸಾಹಿತಿಗಳು.

ಆದರೆ 90ರ ನಂತರದ ಪರಿಸರ ಕುವೆಂಪುರವರ ಆನಂದಮಯ ಜಗವಲ್ಲ, ತೇಜಸ್ವಿಯ ಸೃಜನಶೀಲ ಆಕರವೂ ಅಲ್ಲ, ಬಿಜಿಎಲ್ ಸ್ವಾಮಿಯವರ ಹಸಿರು ಹೊನ್ನಲ್ಲ, ಡಿಸೋಝರ ಪರಿಸರ ದ್ವೀಪವೂ ಅಲ್ಲ, ಹವಾಮಾನದ ದಳ್ಳುರಿಯಲ್ಲಿ ಬೇಯುತ್ತಿರುವ ನಿಗಿ ನಿಗಿ ಕೆಂಡ. ಈ ನಿಗಿ ನಿಗಿ ಕೆಂಡಕ್ಕೆ ಅಕ್ಷರಮಾಲೆ ಕಟ್ಟಿ, ಪರಿಸರ ಸಾಹಿತ್ಯವನ್ನು ಪರಿಸರದೆಚ್ಚರ ಸಾಹಿತ್ಯವಾಗಿ ರೂಪಿಸಿದ ಅಗ್ರ ಬರಹಗಾರ ನಾಗೇಶ ಹೆಗಡೆ. ಅವರ 'ಇರುವುದೊಂದೇ ಭೂಮಿ'ಯಿಂದ 'ನಡುಬಾಗದ ಪತ್ರಕರ್ತನ ನಡುರಾತ್ರಿ'ಯ ಸ್ವಗತದವರೆಗೂ 40ಕ್ಕೂ ಅಧಿಕ ಪರಿಸರದೆಚ್ಚರ ಕೊಡುವ ಸಾಹಿತ್ಯಮಾಲೆ. ಇವರ ನೋಟದ ಪರಿಸರವಿಪ್ಲವ ಸಾಹಿತ್ಯ ಕನ್ನಡದಲ್ಲಿ ಇನ್ನೂ ಚಿಗುರು ಹಂತದಲ್ಲೇ ಇದೆ, ಅಲ್ಲಲ್ಲಿ ಈ ಪರಿಸರವಿಪ್ಲವ ಸಾಹಿತ್ಯಕ್ಕೆ ತೊರೆಗಳಂತೆ ಕಾಣಿಕೆ ಕೊಟ್ಟವರು ಒಂದಷ್ಟು ಹಸಿಮಣ್ಣು, ಭೂಮ್ತಾಯಿಯ ರೆಕ್ಕೆಯಲ್ಲಿ ಪಕ್ಷಿಯಾಗಿ ಪರಿಸರ ವಿಪ್ಲವಗಳ ದಸ್ತಾವೇಜುಗಳನ್ನು ಕಾವ್ಯಾತ್ಮಕವಾಗಿ ಚಿತ್ರಿಸಿಕೊಟ್ಟ ರೂಪ ಹಾಸನ ಮತ್ತು ಜಾಗತಿಕ ತಾಪಮಾನ ಏರಿಕೆಯ ಉರಿಯನ್ನು ವಿವರಿಸುವ ಹವಾಮಾನ ಬದಲಾವಣೆ ಬೇಕೆ ಈ ದಿನಗಳು ರಚಿಸಿ ಕೊಟ್ಟ ಕೆ.ಎಸ್.ರವಿಕುಮಾರ್ ಕನ್ನಡ ಸಾರಸ್ವತ ಲೋಕಕ್ಕೆ ಪ್ರಮುಖ ಪರಿಸರ ಮತ್ತು ಪರಿಸರ ವಿಪ್ಲವ ಸಾಹಿತ್ಯವನ್ನು ಕಟ್ಟಿಕೊಟ್ಟ ಭರವಸೆಯ ಸಾಹಿತಿಗಳು. ಕುವೆಂಪು ಅವರ 'ಉದಯರವಿ' ಪ್ರಕಾಶನ, ಹೆಗ್ಗೋಡಿನ (ಶಿವಮೊಗ್ಗ ಜಿಲ್ಲೆ) 'ಅಕ್ಷರ ಪ್ರಕಾಶನ', ಪೂರ್ಣಚಂದ್ರ ತೇಜಸ್ವಿ ಮತ್ತು ಬಿ.ಎನ್.ಶ್ರೀರಾಮ ಅವರು ರೂಪಿಸಿದ 'ಪುಸ್ತಕ ಪ್ರಕಾಶನ', ಶಿವಮೊಗ್ಗೆಯ 'ಪರಿಸರ ಸಾಹಿತ್ಯ', ಬೆಂಗಳೂರಿನ ಭೂಮಿ ಬುಕ್ಸ್, ಅಂಕಿತ ಪ್ರಕಾಶನ, ಪರಿಸರ ಸಾಹಿತ್ಯವನ್ನು ಹೆಚ್ಚಾಗಿ ಪ್ರಕಟಿಸುತ್ತಿರುವ ಪ್ರಕಾಶನ ಸಂಸ್ಥೆಗಳು.

21ನೇ ಶತಮಾನದ ಡಿಜಿಟಲೀಕರಣಗೊಂಡ ಜಗತ್ತಿನಲ್ಲಿ ವಾಸಿಸುತ್ತಿರುವ ನಾವು, ನಮ್ಮ ಪರಿಸರ ನಾಶದ ಹಾನಿಕಾರಕ ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ. ನಮ್ಮ ಉದಾಸೀನತೆ ಮತ್ತು ನೈಸರ್ಗಿಕ ಪ್ರಪಂಚದಿಂದ ಸಂಪರ್ಕ ಕಡಿತದ ದುಷ್ಪರಿಣಾಮಗಳನ್ನು ಪರಿಗಣಿಸದೆ, ನಾವು ನಮ್ಮ ಪ್ರಕೃತಿ ಮತ್ತು ಪರಿಸರವನ್ನು ಲಘುವಾಗಿ ಪರಿಗಣಿಸಿದ್ದೇವೆ. ತಂತ್ರಜ್ಞಾನದ ಅತಿಯಾದ ಬಳಕೆ, ಭೌತಿಕ ಪ್ರಗತಿಯ ಹಂಬಲ, ವಾಹನಗಳು ಮತ್ತು ನಗರೀಕರಣ ನಮ್ಮ ಜೀವನದಲ್ಲಿ ಆರೋಗ್ಯಕರ ಪರಿಸರದ ಮಹತ್ವವನ್ನು ಮರೆಯುವಂತೆ ಮಾಡಿದೆ. ಅದು ನಾಳೆಯ ಪೀಳಿಗೆಗೆ ಎಂತಹ ನಾಳೆಗಳನ್ನು ನೀಡುತ್ತದೆ ಎಂದು ನಮಗೆ ತಿಳಿದಿಲ್ಲ! ಅಧಿಕಾರದಲ್ಲಿರುವ ಜನರು, ಸಂಬಂಧಪಟ್ಟ ಪರಿಸರ ಕಾರ್ಯಕರ್ತರು, ಪರಿಹಾರ ಕ್ರಮಗಳ ಮೂಲಕ ಪ್ರಕೃತಿಯ ಮೇಲಿನ ಮತ್ತಷ್ಟು ಹಾನಿಯನ್ನು ತಡೆಯಲು ಮತ್ತು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದು ನಿಜ. ಅದರ ಜೊತೆ ಪರಿಸರ ಸಾಹಿತ್ಯ ಮತ್ತು ಪರಿಸರ–ವಿಮರ್ಶಾತ್ಮಕ ಬರಹಗಳು ಸಮಾಜಕ್ಕೆ ಶಿಕ್ಷಣ ನೀಡುವ, ಪರಿಸರ ಜಾಗೃತಿಯನ್ನು ಉತ್ತೇಜಿಸುವ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿವೆ ಎನ್ನುವುದು ನನ್ನ ಗಟ್ಟಿ ಅಭಿಮತ. ಇದಕ್ಕೆ ಪೂರಕವೆಂಬಂತೆ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರಲ್ಲೂ ಚಿಕ್ಕ ವಯಸ್ಸಿನಿಂದಲೇ ಪರಿಸರ ಸಾಕ್ಷರತೆಯನ್ನು ನಿರ್ಮಿಸುವ ಹಾಗೂ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಪಠ್ಯಕ್ರಮದಲ್ಲಿ ಪರಿಸರ ಪ್ರಜ್ಞೆ ಮತ್ತು ಸುಸ್ಥಿರತೆಯನ್ನು ಸಂಯೋಜಿಸುವ ಅಗತ್ಯವನ್ನು ಒತ್ತಿಹೇಳುತ್ತದೆ. ಆದರೆ ಗುಣಮಟ್ಟದ ಪರಿಸರ ಶಿಕ್ಷಣಕ್ಕೆ ಸೀಮಿತ ಪ್ರವೇಶ, ಪರಿಸರದ ಸಂಕೀರ್ಣ ಸಮಸ್ಯೆಗಳ ಬಗ್ಗೆ ಅರಿವಿನ ಕೊರತೆ ಮತ್ತು ಪರಿಸರ ನೀತಿಗಳ ಅಸಮರ್ಪಕ ಅನುಷ್ಠಾನ ಸೇರಿದಂತೆ ವ್ಯಾಪಕ ಪರಿಸರ ಸಾಕ್ಷರತೆಯನ್ನು ಸಾಧಿಸುವಲ್ಲಿ ಭಾರತ ಇನ್ನೂ ಗಮನಾರ್ಹ ಸವಾಲುಗಳನ್ನು ಎದುರಿಸುತ್ತಿದೆ ಎನ್ನುವುದನ್ನು ಕೂಡ ಸಾಹಿತ್ಯ ಮತ್ತು ಸಾಹಿತಿ ಅರ್ಥಮಾಡಿಕೊಳ್ಳಬೇಕಿದೆ.

ಪರಿಸರ ಶಿಕ್ಷಣದ ಬಲವರ್ಧನೆ ಮತ್ತು ಸುಧಾರಣೆಗೆ ಸಾಕಷ್ಟು ಪರಿಸರ ಸಾಹಿತ್ಯವನ್ನು (ಫಿಕ್ಷನ್ ಮತ್ತು ನಾನ್ ಫಿಕ್ಷನ್) ಕನ್ನಡ ಸಾಹಿತ್ಯ ಕ್ಷೇತ್ರ ಕಟ್ಟಿಕೊಡಬೇಕಿದೆ, ಅದನ್ನು ನಾವು ಕಾಳಜಿ, ಪ್ರೀತಿ ಮತ್ತು ವಾತ್ಸಲ್ಯದಿಂದ ಮಾಡಬೇಕು. ಈ ಎಲ್ಲಾ ನವಸಾಹಿತಿಗಳಿಗೆ ಪ್ರಕಾಶಕರು ಸಿಗಲಿ ಎಂಬುದೇ ಆಶಯ.

## ಆರ್‌ಬಿಐನ 2.69 ಲಕ್ಷ ಕೋಟಿ ರೂ.... ಪುಟ 11 ರಿಂದ

ಸರ್ಕಾರದೊಂದಿಗೆ ಸಮಾಲೋಚನೆಗಾಗಿ ತಜ್ಞರ ಸಮಿತಿಯನ್ನು ಸ್ಥಾಪಿಸಲು ಒಪ್ಪಿಕೊಂಡಿತು. ಆದರೆ, ಆರ್‌ಬಿಐನ ಮೀಸಲು ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಸಮರ್ಥನೆಯನ್ನು ಉರ್ಜಿತ್ ಪಟೇಲ್ ಒಪ್ಪಲಿಲ್ಲ. ಸರ್ಕಾರದ ಕ್ರಮವು ಕೇಂದ್ರ ಬ್ಯಾಂಕಿನ ರೇಟಿಂಗ್‌ಗಳನ್ನು ಕಡಿಮೆ ಮಾಡಲು ಕಾರಣವಾಗಬಹುದು ಎಂದು ಪಟೇಲ್ ಆತಂಕ ವ್ಯಕ್ತಪಡಿಸಿದರು.

ರಿಸರ್ವ್ ಬ್ಯಾಂಕಿನ ನೀತಿ ನಿರ್ಧಾರ ಕೈಗೊಳ್ಳುವ ಸಮಿತಿಯಲ್ಲಿ ಮೋದಿ ಸರ್ಕಾರದ ಪರ ಇರುವ ಅಧಿಕಾರಿಗಳು ಬಹುಸಂಖ್ಯೆಯಲ್ಲಿ ಇರುವಂತೆ ನೋಡಿಕೊಳ್ಳಲಾಯಿತು. ಆ ಮೂಲಕ, ಸಭೆಯ ಬಹುಮತದ ತೀರ್ಮಾನದ ಜಾರಿಯ ಹೆಸರಿನಲ್ಲಿ ಮೀಸಲು ಹಣದ ಒಂದಷ್ಟು ಅಂಶವನ್ನು ಕೇಂದ್ರ ಸರ್ಕಾರದ ಖಜಾನೆಗೆ ವರ್ಗಾವಣೆ ಮಾಡುವ ಒತ್ತಡ ಹೆಚ್ಚಾಯಿತು. ಇದರಿಂದ ಬೇಸತ್ತ ಉರ್ಜಿತ್ ಪಟೇಲ್ 2018ರ ಡಿಸೆಂಬರ್ 10 ರಂದು ಗವರ್ನರ್ ಹುದ್ದೆಗೆ ರಾಜೀನಾಮೆ ನೀಡಿದರು. ನಂತರ, 15ನೇ ಹಣಕಾಸು ಆಯೋಗದ ಸದಸ್ಯರಾಗಿದ್ದ ಶಕ್ತಿಕಾಂತ ದಾಸ್ ಅವರನ್ನು ಆರ್‌ಬಿಐ ಗವರ್ನರ್ ಆಗಿ ಸರ್ಕಾರ ನೇಮಿಸಿತು.

**ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿ ರಚನೆ**

ಇದಾದ ಎರಡು ವಾರದ ನಂತರ, ಭಾರತೀಯ ರಿಸರ್ವ್ ಬ್ಯಾಂಕ್ 2018ರ ಡಿಸೆಂಬರ್ 27ರಂದು ಮಾಜಿ ಆರ್‌ಬಿಐ ಗವರ್ನರ್ ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿಯನ್ನು ರಚಿಸಿತು. ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿರಬೇಕಾದ ಮೀಸಲು ಮೊತ್ತವನ್ನು ನಿರ್ಣಯಿಸಿ, ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಿತು.

ಜಲನ್ ಅಡಿಯಲ್ಲಿನ ತಜ್ಞರ ಸಮಿತಿಯಲ್ಲಿ ಮಾಜಿ ಆರ್‌ಬಿಐ ಡೆಪ್ಯುಟಿ ಗವರ್ನರ್ ರಾಕೇಶ್ ಮೋಹನ್ (ಉಪಾಧ್ಯಕ್ಷರು), ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಸುಭಾಷ್ ಚಂದ್ರ ಗರ್ಗ್, ಆರ್‌ಬಿಐ ಕೇಂದ್ರ ಮಂಡಳಿಯ ಸದಸ್ಯರಾದ ಭರತ್ ದೋಷಿ ಮತ್ತು ಸುಧೀರ್ ಮಂಕಡ್ ಮತ್ತು ಆರ್‌ಬಿಐ ಡೆಪ್ಯುಟಿ ಗವರ್ನರ್ ಎನ್.ಎಸ್. ವಿಶ್ವನಾಥನ್ ಅವರು ಸದಸ್ಯರಾಗಿದ್ದರು.

ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿಯ ವರದಿಯ ಆಧಾರದ ಮೇಲೆ ಆಗಸ್ಟ್ 2019ರಲ್ಲಿ ಅಂಗೀಕರಿಸಲಾದ ತನ್ನ 'ಆರ್ಥಿಕ ಬಂಡವಾಳ ಚೌಕಟ್ಟಿನ (ಇಸಿಎಫ್) ಆಧಾರದ ಮೇಲೆ ಆರ್‌ಬಿಐ ಸರ್ಕಾರಕ್ಕೆ ಲಾಭಾಂಶವನ್ನು ನೀಡಿತು. ಆರ್‌ಬಿಐನ ಬ್ಯಾಲೆನ್ಸ್ ಶೀಟ್‌ನ ಶೇ.5.5 ರಿಂದ 6.5 ರ ನಡುವೆ 'ಆಕಸ್ಮಿಕ ಆಪತ್ತು ಸಂಗ್ರಹ'(ಸಿಆರ್‌ಬಿ–ಕಂಟಿಂಜೆನ್ಸಿ ರಿಸ್ಕ್ ಬಫರ್) ಅನ್ನು ಕಾಯ್ದುಕೊಳ್ಳಲು ಸಮಿತಿ ಸೂಚಿಸಿತ್ತು.

ಬಿಮಲ್ ಜಲನ್ ಸಮಿತಿ (2018–19) ಆರ್‌ಬಿಐನ ಮಿಗುತೆ ನಿಧಿಯ ವಿತರಣೆಗೆ ಒಂದು ಚೌಕಟ್ಟನ್ನು ನಿಗದಿಪಡಿಸಿತು. ಆರ್ಥಿಕ ಬಂಡವಾಳವನ್ನು ಅರಿತುಕೊಂಡ ಇಕ್ವಿಟಿ (ಸಿಆರ್‌ಬಿ) ಮತ್ತು 'ಏರುಪೇರು ಮರುಮೌಲ್ಯಮಾಪನ ಬಾಕಿ' (Volatility Revaluation Balance)ಗಳಾಗಿ ವರ್ಗೀಕರಿಸಿತು. ಸಿಆರ್‌ಬಿ ಅನ್ನು ಬ್ಯಾಲೆನ್ಸ್ ಶೀಟ್‌ನ ಶೇ.5.5–6.5ಕ್ಕೆ ನಿಗದಿಪಡಿಸಲಾಗಿದೆ, ಇದನ್ನು ಮೀರಿದರೆ ಮಾತ್ರ ಮಿಗುತೆ ವರ್ಗಾವಣೆಗಳಿಗೆ ಅನುಮತಿಯಿದೆ ಎಂದು ವಿಧಿಸಲಾಗಿದೆ. ಒಟ್ಟು ಆರ್ಥಿಕ ಬಂಡವಾಳವನ್ನು ಶೇ. 28.1–29.1 ರಿಂದ ಶೇ.20.8–25.4ಕ್ಕೆ ಪರಿಷ್ಕರಿಸಲಾಗಿದೆ. 'ಆಕಸ್ಮಿಕ ಗಂಡಾಂತರ ಸಂಗ್ರಹ' ಮಿತಿಯನ್ನು ಪೂರೈಸಿದರೆ ಮಾತ್ರ ಸಂಪೂರ್ಣ ನಿವ್ವಳ ಆದಾಯವನ್ನು ವರ್ಗಾಯಿಸಬಹುದು. ಇಲ್ಲದಿದ್ದರೆ, ಗಂಡಾಂತರ ನಿಬಂಧನೆಗೆ ಆದ್ಯತೆ ನೀಡಲಾಗುತ್ತದೆ.

**ಡೆಪ್ಯೂಟಿ ಗೌರ್ನರ್ ವಿರಲ್ ಆಚಾರ್ಯ ರಾಜೀನಾಮೆ**

"ಆರ್‌ಬಿಐನ ಸ್ವಾಯತ್ತತ್ತೆಯನ್ನು ಕೇಂದ್ರ ಸರ್ಕಾರ ಗೌರವಿಸದೇ ಇದ್ದರೆ, ಇಂದಲ್ಲ ನಾಳೆ ಹಣಕಾಸು ಮಾರುಕಟ್ಟೆಯ ಆಕ್ರೋಶಕ್ಕೆ ಗುರಿಯಾಗಬೇಕಾದೀತು" ಎಂದು ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗೌವರ್ನರ್ ವಿರಲ್ ಆಚಾರ್ಯ ಎಚ್ಚರಿಸಿದರು. ಇಷ್ಟಾದರೂ ಕೇಂದ್ರ ಸರ್ಕಾರ ತನ್ನ ನಿಲುವು ಬದಲಾಯಿಸಲಿಲ್ಲ. ಇದೆಲ್ಲವನ್ನೂ ನೋಡಿ ಮತ್ತು ಸರ್ಕಾರದ ಒತ್ತಡ ಸಹಿಸಿಕೊಳ್ಳಲಾಗದೇ, ವಿರಲ್ ಆಚಾರ್ಯ ತಮ್ಮ ಅಧಿಕಾರದ ಅವದಿಯ 6 ತಿಂಗಳ ಮೊದಲೇ, ವೈಯಕ್ತಿಕ ಕಾರಣ ನೀಡಿ 2019ರ ಜುಲೈ 23ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು.

ರಿಸರ್ವ್ ಬ್ಯಾಂಕಿನ ಸ್ವಾಯತ್ತತೆಯ ಪರ ಧ್ವನಿ ಎತ್ತಿದ ಅಧಿಕಾರಿಗಳು ಒಬ್ಬೊಬ್ಬರೇ ನಿರ್ಗಮಿಸುತ್ತಿದ್ದಂತೆ, ಮೀಸಲು ಹಣ ದೋಚಲು ಮೋದಿ ಸರ್ಕಾರಕ್ಕೆ ಇದ್ದ ಅಡೆತಡೆಗಳು ಕಡಿಮೆಯಾದವು. ಅಂದಿನ ರಿಸರ್ವ್ ಬ್ಯಾಂಕಿನ ಮೀಸಲು ಹಣದಲ್ಲಿ 1.76 ಲಕ್ಷ ಕೋಟಿ ರೂ. ಗಳನ್ನು ತೆಗೆದು ಕೇಂದ್ರ ಸರ್ಕಾರದ ಖಾತೆಗೆ ಸೇರಿಸಿದರು. ಇಂದು, 2024–25ರ ಹಣಕಾಸು ವರ್ಷಕ್ಕೆ 2.69 ಲಕ್ಷ ಕೋಟಿ ರೂ.ಗಳನ್ನು ಪಡೆದುಕೊಳ್ಳುವ ಮೂಲಕ ಇದುವರೆಗಿನ ಅತ್ಯಧಿಕ ಹಣವನ್ನು ಪಡೆದುಕೊಂಡಿದೆ.

*ಸಂಗ್ರಹ: ಸಿಟಿ*

## ಜಿಡಿಪಿ ಕೇಕೆಯೂ...... ಪುಟ 13 ರಿಂದ

"ಮುಖ್ಯಧಾರೆಯದು" ಎಂದು ಹೇಳಲಾಗುವ ಬೂರ್ಜ್ವಾ ಅರ್ಥಶಾಸ್ತ್ರಕ್ಕೆ ತೋರಲಾಗದು. ಮಾಲ್ತಸ್ ಅವರ ಜನಸಂಖ್ಯಾ ಸಿದ್ಧಾಂತದ ಮೇಲಿನ ನಂಬಿಕೆಯು ಬಹಳ ಹಿಂದೆಯೇ ಕೊನೆಗೊಂಡಿತ್ತು. ಈ ಸಿದ್ಧಾಂತ "ಮಾನವಕುಲದ ಮೇಲಿನ ಮಿಥ್ಯಾರೋಪ' ಎಂದು ಮಾರ್ಕ್ಸ್ ವರ್ಣಿಸಿದ್ದರು. ಇದನ್ನು ಹದಿನೆಂಟನೇ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಸಾಮಾನ್ಯವಾಗಿ ಸ್ವೀಕರಿಸಿರಲಿಲ್ಲ. ಆದರೆ ಈಗ ಈ ವರ್ಣನೆಗೆ ಸಾರ್ವತ್ರಿಕ ಸ್ವೀಕೃತಿ ಲಭಿಸಿದೆ.

**ಸೈದ್ಧಾಂತಿಕ ಪಕ್ಷಪಾತದ ಕ್ರಮ**

ಅದೇನೇ ಇರಲಿ, "ಮುಖ್ಯಧಾರೆಯ" ಬೂರ್ಜ್ವಾ ಸಿದ್ಧಾಂತವು ಈಗಲೂ ಒಟ್ಟು ಆಂತರಿಕ ಉತ್ಪನ್ನ ಅಂದರೆ ಜಿಡಿಪಿಯ ಮಟ್ಟವನ್ನು "ರಾಷ್ಟ್ರ"ದ ಸಮೃದ್ಧಿಯ ಸೂಚಿಯಾಗಿಯೂ ಮತ್ತು ಅದರ ಬೆಳವಣಿಗೆಯ ದರವನ್ನು ದೇಶದ ಪ್ರಗತಿಯ ಸೂಚಿಯಾಗಿಯೂ ತೆಗೆದುಕೊಳ್ಳುತ್ತಿದೆ. ಈ ಅರ್ಥದಲ್ಲಿ "ಪ್ರಗತಿ"ಯನ್ನು ಬಂಡವಾಳಶಾಹಿಗಳ ಕೆಲಸ–ಕಾರ್ಯಗಳ ಮೂಲಕ ಮಾತ್ರ ಸಾಧಿಸಬಹುದಾದ್ದರಿಂದ, ಬಂಡವಾಳಶಾಹಿಗಳನ್ನು ಸಂತುಷ್ಟಗೊಳಿಸುವ ಮೂಲಕ, ಅವರಿಗೆ ಪ್ರೋತ್ಸಾಹಕಗಳನ್ನು ಒದಗಿಸುವ ಮೂಲಕ, ಅವರ ಹಿತಾಸಕ್ತಿಗಳನ್ನು ಉತ್ತೇಜಿಸುವ ಮೂಲಕ ಮತ್ತು ಅವರನ್ನು ವಿಶೇಷ ಸವಲತ್ತಿನ ವ್ಯಕ್ತಿಗಳಾಗಿ ಪರಿಗಣಿಸುವ ಮೂಲಕ ಉತ್ತಮವಾದ ಪ್ರಗತಿಯನ್ನು ಸಾದಿಸಬಹುದು ಮತ್ತು ಆ ಮೂಲಕ "ರಾಷ್ಟ್ರದ" ಹಿತವನ್ನು ಕಾಪಾಡಿಕೊಳ್ಳಬಹುದು. ಈ ನಿಲುವನ್ನು ಸ್ಮಿತ್ ಮತ್ತು ರಿಕಾರ್ಡೊ, ಕಾರ್ಮಿಕರು ತಮ್ಮ ಅಭ್ಯಾಸಗಳನ್ನು ಬದಲಾಯಿಸಿಕೊಳ್ಳುವವರೆಗೆ ಬೇರೆ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು (ತಪ್ಪಾಗಿ) ಭಾವಿಸಿದ್ದರಿಂದ ತೆಗೆದುಕೊಂಡಿದ್ದಿರಬಹುದು. ಆದರೆ, ಅವರ ಕಾಲದ ನಂತರದ ಅರ್ಥಶಾಸ್ತ್ರಜ್ಞರು ಅದೇ ನಿಲುವನ್ನು ತೆಗೆದುಕೊಳ್ಳುವುದು ಒಂದು ಶುದ್ಧ ಸೈದ್ಧಾಂತಿಕ ಪಕ್ಷಪಾತದ ಕ್ರಮವಾಗುತ್ತದೆ.

ಇಂಥಹ ಪಕ್ಷಪಾತದ ಇತ್ತೀಚಿನ ಒಂದು ಉದಾಹರಣೆಯೆಂದರೆ, ಜಿಡಿಪಿಯ ಗಾತ್ರದಲ್ಲಿ ಜಪಾನನ್ನು ಹಿಂದಿಕ್ಕಿದ ಭಾರತದ ಜಿಡಿಪಿಯು ಈಗ $4 ಟ್ರಿಲಿಯನ್ ದಾಟಿದೆ ಮತ್ತು ಭಾರತವು ಈಗ ವಿಶ್ವದ ನಾಲ್ಕನೇ ಅತಿ ದೊಡ್ಡ ಅರ್ಥವ್ಯವಸ್ಥೆಯಾಗಿದೆ ಎಂದು ನೀತಿ ಆಯೋಗದ ಸಿಇಒ ಹೇಳಿರುವುದು. ಅವರು ಇದನ್ನು ಹಾಗೇ ಸುಮ್ಮನೇ ಹೇಳಲಿಲ್ಲ. ಇದನ್ನು ಒಂದು ದೊಡ್ಡ ಸಾಧನೆ ಎಂದು ಬಿಂಬಿಸುವುದಕ್ಕಾಗಿಯೇ ಹೇಳಿರುವುದು. ಈ ಬೆಳವಣಿಗೆಯನ್ನು ಭಾರತದ ದೊಡ್ಡ ದೊಡ್ಡ ಉದ್ದಿಮೆದಾರರು ಶ್ಲಾಘಿಸಿದ್ದಾರೆ. ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಭಾರತವು ಜಪಾನಿಗಿಂತ ಹತ್ತು ಪಟ್ಟು ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ ಎಂಬ ಅಂಶವನ್ನು ಸಿಇಒ ಹೇಳದಿರುವುದು ಗಮನಾರ್ಹವಾಗಿದೆ. ಅವರ ಈ ವಿಜಯೋತ್ಸಾಹದ ಹೇಳಿಕೆಯು, ಸ್ವಲ್ಪ ಹಿಂದೆ ಮೋದಿ ಅವರು ಭಾರತವು ಶೀಘ್ರದಲ್ಲೇ $5 ಟ್ರಿಲಿಯನ್ ಜಿಡಿಪಿಯನ್ನು ಹೊಂದಲಿದೆ ಎಂಬ ಹೇಳಿಕೆಗೆ ಸಮನಾಗಿತ್ತು.

ದೇಶದ ಜಿಡಿಪಿಯ ಗಾತ್ರದ ಪ್ರಶ್ನೆಯ ಹೊರತಾಗಿಯೂ, ನಮ್ಮ ಜಿಡಿಪಿಯ ಗಾತ್ರವನ್ನು ಮುಂದುವರಿದ ಬಂಡವಾಳಶಾಹಿ ದೇಶಗಳ ಜಿಡಿಪಿಯೊಂದಿಗೆ ಹೋಲಿಸುವುದು ಅರ್ಥಹೀನವಾಗುತ್ತದೆ ಮಾತ್ರವಲ್ಲ, ಜಿಡಿಪಿಯ ಮೇಲೆಯೇ ಇಡೀ ಗಮನವನ್ನು ಕೇಂದ್ರೀಕರಿಸುವ ಕ್ರಮವು ಒಂದು ತಪ್ಪು ಕಣ್ಣೋಟವೂ ಆಗುತ್ತದೆ. ಇದು ಮಾಲ್ತಸ್ ವಾದದಲ್ಲಿ ನಂಬಿಕೆ ಇಟ್ಟಿದ್ದ ಹಳೆಯ ದೃಷ್ಟಿಕೋನಕ್ಕೆ ಮರಳುವುದು ಮಾತ್ರವಲ್ಲ, ಒಂದು ಪ್ರಜಾಪ್ರಭುತ್ವ ಸಮಾಜದೊಂದಿಗೆ ಹೊಂದಿಕೆಯಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರ ಸ್ಥಿತಿ–ಗತಿಗಳು ಮುಖ್ಯವಾಗುತ್ತವೆ. ಆದ್ದರಿಂದ, ಪ್ರಗತಿಯನ್ನು ಜನರ ಸ್ಥಿತಿ–ಗತಿಗಳು ಎಷ್ಟರ ಮಟ್ಟಿಗೆ ಸುಧಾರಿಸುತ್ತಿವೆ ಎಂಬುದರ ಆಧಾರದ ಮೇಲೆ ಅಳೆಯಬೇಕಾಗುತ್ತದೆ.

ಈ ದೃಷ್ಟಿಕೋನವು ನಮ್ಮ ವಸಾಹತುಶಾಹಿ ವಿರೋಧಿ ಹೋರಾಟದ ದೃಷ್ಟಿಕೋನದೊಂದಿಗೆ ಹೊಂದುವುದೇ ಇಲ್ಲ. ಜಿಡಿಪಿಯ ಹೋಲಿಕೆಯಲ್ಲಿ ಜಪಾನನ್ನು ಹಿಂದಿಕ್ಕಿರುವುದು ಒಂದು ಸಂಭ್ರಮದ ವಿಷಯವೆಂದು ಭಾವಿಸುವ "ರಾಷ್ಟ"ವು, ಅದನ್ನು ಜನರಿಗಿಂತ ಮೇಲಿನ ಸ್ಥಾನದಲ್ಲಿ ಇರಿಸುವ ಪರಿಕಲ್ಪನೆಯ "ರಾಷ್ಟ್ರ"ವಾಗುತ್ತದೆ. ಈ "ರಾಷ್ಟ್ರ"ದ ಈ "ಅದ್ಭುತ" ಸಾಧನೆಗೂ ಜನರ ಸ್ಥಿತಿ–ಗತಿಗಳಿಗೂ ಸಂಬಂಧವಿಲ್ಲ. ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ "ರಾಷ್ಟ್ರ"ವು ಗಳಿಸಿದ ವಿಮೋಚನೆಯನ್ನು ಜನರ ವಿಮೋಚನೆಗೆ ಸಮಾನಾರ್ಥಕವೆಂದು ಕಂಡ ವಸಾಹತುಶಾಹಿ ವಿರೋಧಿ ಹೋರಾಟದ ಮನೋಭಾವಕ್ಕೆ ಇದು ಒಂದು ಅಪಚಾರವೇ ಸರಿ.

ಸ್ವಾತಂತ್ರ್ಯ ಬಂದ ಮುಕ್ಕಾಲು ಶತಮಾನದ ನಂತರವೂ ಜನರ ಪರಿಸ್ಥಿತಿ ಇನ್ನೂ ಶೋಚನೀಯವಾಗಿಯೇ ಉಳಿದಿದೆ. 2024ರ ಜಾಗತಿಕ ಹಸಿವು ಸೂಚಿಯಲ್ಲಿ ಭಾರತವು, ಯಾವ 127 ದೇಶಗಳಿಗಾಗಿ ಅದನ್ನು ಸಿದ್ಧಪಡಿಸಲಾಗಿದೆಯೋ, ಅದರಲ್ಲಿ 105ನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಸಂಗತಿಯ ಬಗ್ಗೆ ನಾಚಿಕೆಪಡುವುದರ ಬದಲು, ಜಿಡಿಪಿಯ ಗಾತ್ರದ ಬಗ್ಗೆ ಕೇಕೆ ಹಾಕುವ ಸರ್ಕಾರವೊಂದನ್ನು ನಾವು ಹೊಂದಿದ್ದೇವೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

## ಐಪಿಎಲ್ ವಿಜಯೋತ್ಸವದಲ್ಲಿ ಕಾಲ್ತುಳಿತ.... ಪುಟ 9 ರಿಂದ

ನೆನಪಿಸುತ್ತದೆ. ಇಲ್ಲಿ ನೀತಿಶಾಸ್ತ್ರದ ನಿಯಮಗಳು ಮತ್ತು ಕ್ರೀಡಾ ಮನೋಭಾವವು ಗೋಚರಿಸುವುದಿಲ್ಲ. ಗೋಚರಿಸುವುದು ವ್ಯಾಪಾರ, ಲಾಭ ಮತ್ತು ಜೂಜಾಟ ಮಾತ್ರ. ಐಪಿಎಲ್ ಪಂದ್ಯಗಳಿಗೆ ಒದಗಿಸಲಾದ ಪ್ರಚಾರ ಅಷ್ಟೇ ಅಲ್ಲ. ಯುವಕರು ಅದರತ್ತ ಆಕರ್ಷಿತರಾಗುತ್ತಾರೆ. ಕಂಪನಿಗಳು ಅವರ ಭಾವನೆಗಳನ್ನು ನಗದು ಮಾಡಿಕೊಳ್ಳುತ್ತಿವೆ. ಚಾಂಪಿಯನ್‌ಶಿಪ್ ಗೆದ್ದ ಆರ್‌ಸಿಬಿ ತಂಡವನ್ನು ತಕ್ಷಣವೇ ಗೌರವಿಸುವ ಮತ್ತು ವಿಜಯೋತ್ಸವವನ್ನು ಆಯೋಜಿಸುವ ಗುರಿಗೆ ಆ ಪ್ರವೃತ್ತಿಯೇ ಕಾರಣ. ಈ ಆತುರ ಕನಿಷ್ಠ ವ್ಯವಸ್ಥೆಗಳು ಮತ್ತು ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳದಂತೆ ತಡೆಯುತ್ತದೆ. ಗೋಚರಿಸುವ ಏಕೈಕ ವಿಷಯವೆಂದರೆ ಉನ್ಮಾದ ಇದ್ದಾಗಲೇ ವಿಜಯೋತ್ಸವದ ಹೆಸರಿನಲ್ಲಿ ಒಂದಷ್ಟು ಹಣಗಳಿಸುವ ಧಾವಂತ.

**ದುರಂತಕ್ಕೆ ಹೊಣೆಗಾರರು ಯಾರು?**

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತದ ಸಾವುಗಳಿಗೆ ಈವೆಂಟ್ ಮ್ಯಾನೇಜ್ಮೆಂಟ್, ಆರ್‌ಸಿಬಿ ಮತ್ತು ರಾಜ್ಯ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಬೇಕು. ಹೊಣೆಗಾರರನ್ನು ಗುರುತಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಈ ದುರಂತವು ಒಂದು ಪಾಠವಾಗಬೇಕು. ಅಪರಾಧಿಗಳ ವಿರುದ್ಧ ವಿವರವಾದ ತನಿಖೆ ಮತ್ತು ಅನುಕರಣೀಯ ಕ್ರಮ ಇರಬೇಕು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು ರೂಪಿಸಬೇಕು ಮತ್ತು ಜಾರಿಗೊಳಿಸಬೇಕು. ಆಚರಣೆಗೆ ಸುರಕ್ಷಿತ ವಾತಾವರಣವನ್ನು ಸೃಷ್ಟಿಸದೆ, ಕಾಲ್ತುಳಿತಕ್ಕೆ ಜನರನ್ನು ಸಾಯಲು ಬಿಟ್ಟವರು ಕ್ಷಮೆಯಾಚಿಸಬೇಕು ಮತ್ತು ಅದಕ್ಕೆ ಉತ್ತರಿಸಬೇಕು. ಇಂತಹ ಆಚರಣೆಗಳಲ್ಲಿ ಭಾಗವಹಿಸುವವರ ಜೀವ ಕಳೆದು ಹೋಗದಿರಲು, ಆಚರಣೆಗಳು ಸುರಕ್ಷಿತವಾಗಿರಬೇಕು. ಇಲ್ಲದಿದ್ದರೆ, ಮಾನವ ನಿರ್ಮಿತ ದುರಂತಗಳು ಪುನರಾವರ್ತನೆಯಾಗುತ್ತಲೇ ಇರುತ್ತವೆ; ವಿಜಯೋತ್ಸವ ಮೆರವಣಿಗೆಗಳು ಕಣ್ಣೀರಿನ ಮೆರವಣಿಗೆಗಳಾಗಿ ಬದಲಾಗುತ್ತವೆ. ಕೊನೆಯದಾಗಿ, ಆರ್‌ಸಿಬಿ ತಂಡವನ್ನು ನಿಜವಾಗಿಯೂ ಯಾರು ಗೌರವಿಸಲು ಬಯಸಿದ್ದರು ಎಂಬುದು ನಮಗೀಗ ತಿಳಿಯಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE June 9-15, 2025 Price: Rs. 10/- Date of Publication: 6 June 2025 RNI No. KARKAN/2006/17926 Posted on 11-06-2025
Posted at BG PSO, BG - 560026 **Posted at Periodical Rate -** Rs. 2

# ಅಜ್ಜನ ಸೋವಿಯೆತ್ ಪುಸ್ತಕಗಳ ಗ್ರಂಥಾಲಯದಲ್ಲಿ ಭಾವನಾತ್ಮಕ ಪಯಣ

ದೀಪಾ ಬಸ್ತಿ

**ದೀಪಾ ಬಸ್ತಿಯವರ ಅಜ್ಜ, ಡಾ.ಬಿ.ಕೆ.ನಂಜುಂಡೇಶ್ವರ್ ಒಬ್ಬ ಕಮ್ಯುನಿಸ್ಟ್ ಬುದ್ಧಿಜೀವಿಯಾಗಿದ್ದರು. ಅವರ ಗ್ರಂಥಾಲಯದ ತುಂಬೆಲ್ಲಾ ಸೋವಿಯೆತ್ ಪುಸ್ತಕಗಳು ತುಂಬಿಕೊಂಡಿದ್ದವು. ಮನೆಯವರೆಲ್ಲಾ ಅವರನ್ನು 'ತಮ್ಮಯ್ಯ' ಎಂದು ಕರೆಯುತ್ತಿದ್ದರು. ಅವರು ತೀರಿಕೊಂಡ ನಂತರ ದೀಪಾ ಬಸ್ತಿಯವರು ಅವರ ಗ್ರಂಥಾಲಯಕ್ಕೆ ಕಾಲಿಟ್ಟು ಅಲ್ಲಿರುವ ಪುಸ್ತಕಗಳ ಮೇಲೆ ಕಣ್ಣಾಡಿಸಿದರು. ತನ್ನ ಅಜ್ಜನ ಗ್ರಂಥಾಲಯದಲ್ಲಿ ಅವರು ಸಾಗಿದ ಭಾವನಾತ್ಮಕ ಪಯಣವೇ ಈ ಬರಹ! ಇದು ಲೆಫ್ಟ್ ವರ್ಡ್ ಪ್ರಕಟಿಸಿರುವ East Was Read ಪುಸ್ತಕದಲ್ಲಿನ ದೀಪಾ ಬಸ್ತಿ ಅವರ ಲೇಖನದ ಆಯ್ದ ಭಾಗ. ಒಟ್ಟಿನಲ್ಲಿ ಸಾಂಸ್ಕೃತಿಕವಾಗಿ ಮೂರನೇ ಜಗತ್ತಿನ ದೇಶಗಳಲ್ಲಿ ಸಮಾಜವಾದಿ ಸಂಸ್ಕೃತಿ ಹರಡುವಲ್ಲಿ ಸೋವಿಯೆಟ್ ಪುಸ್ತಕಗಳು, ನಾಟಕ, ಸಿನಿಮಾ ಇತ್ಯಾದಿ ವಹಿಸಿದ ಪಾತ್ರದ ಕುರಿತಾಗಿದೆ ಈ ಪುಸ್ತಕ. ಸೋವಿಯೆಟ್ ಪುಸ್ತಕಗಳ ಪರಿಮಳ ದೀಪಾ ಬಸ್ತಿ ಅವರ ಈ ಲೇಖನದಲ್ಲಿದೆ.**




ನನ್ನ ಅಜ್ಜ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಕಟ್ಟಾ ಕಮ್ಯುನಿಸ್ಟರಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಅವರು ಹಲವಾರು ವರ್ಷಗಳ ಕಾಲ ಜೈಲಿನಲ್ಲಿದ್ದರು. ಅವರು ಆಯುರ್ವೇದ ವೈದ್ಯರಾಗಿದ್ದರು ಮತ್ತು ತಮ್ಮ ಔಷಧಿಗಳನ್ನು ತಾವೇ ತಯಾರಿಸುತ್ತಿದ್ದರು. ಅವರೊಬ್ಬ ನಿಗೂಢವಾದ ಕೈಗುಣವಿದ್ದ ವೈದ್ಯರಾಗಿದ್ದರು. ಅವರು ನಿಧನರಾಗಿ ಸರಿಸುಮಾರು ಎರಡು ದಶಕಗಳ ನಂತರ ನಮ್ಮ ಮನೆಯ ಫೋನಿಗೆ ಸರಿರಾತ್ರಿಯಲ್ಲಿ ಒಂದು ಕರೆ ಬಂದಿತ್ತು: ವೈದ್ಯರ ಬಗ್ಗೆ ವಿಚಾರಿಸಿ, ಅವರಲ್ಲಿ ಔಷಧಿ ತೆಗೆದುಕೊಂಡರೆ ಕಾಯಿಲೆ ಹುಷಾರಾಗುತ್ತದೆ ಎಂಬ ನಂಬಿಕೆ ತಮ್ಮದು ಎಂದು ಹೇಳಿದ್ದರು. ಅವರ ಕ್ಲಿನಿಕ್ ಊರಿನ ಮಧ್ಯದಲ್ಲಿದ್ದ ಅನುಕೂಲಕರ 'ಅಡ್ಡಾ' ಆಗಿತ್ತು, ಅಲ್ಲಿಗೆ ಅವರ ಮಿತ್ರರೆಲ್ಲಾ ಬಂದು ರಾಜಕೀಯ ಮಾತನಾಡುತ್ತಿದ್ದರು. ಕೆಲವೊಮ್ಮೆ ಅವರಿಂದ ಸಾಲ ಪಡೆಯಲೂ ಬರುತ್ತಿದ್ದರು, ಕಾಲ ಕಳೆಯಲೂ ಬರುತ್ತಿದ್ದರು, ಚಿಕಿತ್ಸೆಗಾಗಿಯೂ ಬರುತ್ತಿದ್ದರು.

ನನ್ನ ಬಾಲ್ಯದಲ್ಲಿ, ಹರೆಯದಲ್ಲಿ ಹಾಗೂ ಯೌವನದಲ್ಲಿಯೂ ಕತೆಗಳನ್ನು ಹೇಳುತ್ತಿದ್ದ ನನ್ನಜ್ಜಿ, ಕೆಲವೊಮ್ಮೆ ಮೊದಲ ಬಾರಿ ನೋಡುತ್ತಿದ್ದಾಳೋ ಎನ್ನುವಂತೆ ನನ್ನತ್ತ ನೋಡಿ ನನ್ನ ಹಣೆ ಅಜ್ಜನ ರೀತಿ ಇದೆ ಎನ್ನುತ್ತಿದ್ದರು. ನನ್ನ ಹದಿಹರೆಯದ ಕೋಪವನ್ನು ಅಜ್ಜನ ಸಿಡಿಮಿಡಿಗೆ ಹೋಲಿಸುತ್ತಿದ್ದರು; ಅಜ್ಜ ಮನೆಗೆ ಬರುತ್ತಿರುವುದು ಗೊತ್ತಾದ ಕೂಡಲೇ ಮನೆಯ ಎಲ್ಲಾ ಮಕ್ಕಳೂ ರೇಡಿಯೋ ಆಫ್ ಮಾಡುತ್ತಿದ್ದರು, ಗಲಾಟೆ ಮಾಡದೆ ಸುಮ್ಮನಾಗುತ್ತಿದ್ದರು, ಏಕೆಂದರೆ ಅಜ್ಜ ಅದನ್ನು ಸಹಿಸುತ್ತಿರಲಿಲ್ಲ. ಅಜ್ಜ ಸಾಯುವುದಕ್ಕೆ ಆರು ತಿಂಗಳಿರುವಾಗ ಹುಟ್ಟಿದ ನನ್ನಲ್ಲಿ ಅಜ್ಜನನ್ನು ಕಾಣುತ್ತಿದ್ದಳು ನನ್ನಜ್ಜಿ. ಪ್ರಾಯಶಃ ನಾನು ಮತ್ತು ಅಜ್ಜನ ನಡುವಿನ ಹೋಲಿಕೆ ಮಾಡುವುದು ಅಜ್ಜಿಗೆ ತೀರಾ ಅನಿವಾರ್ಯವಾಗಿತ್ತೇನೋ, ಏಕೆಂದರೆ ಅಜ್ಜನ ಸಾವಿನಿಂದಾದ ನಷ್ಟವನ್ನು ನನ್ನಿಂದ ತುಂಬಿಕೊಳ್ಳುತ್ತಿದ್ದಳು ಅಂತ ಕಾಣುತ್ತೆ. ಅಷ್ಟೇ ಅಲ್ಲ ಅಜ್ಜನ ಮೇಲಿನ ಕೋಪವನ್ನು ನನ್ನ ಮೇಲೆ ತೀರಿಸಿಕೊಳ್ಳುತ್ತಿದ್ದಳೇನೋ. ಕಾರಣಗಳೇನೇ ಇರಲಿ, ನಾನು ಒಳಗೊಳಗೇ ಖುಷಿಪಡುತ್ತಿದ್ದೆ. ಏಕೆಂದರೆ, ನನ್ನ ಅಜ್ಜನಂತಾಗಲು ಬಯಸುವುದಲ್ಲದೇ ಮತ್ತೊಂದು ವೃತ್ತಿಯಲ್ಲಿ ಅವನಂತಾಗುವುದಲ್ಲದೆ, ಮತ್ತೊಂದು ಕಾಲದಲ್ಲಿ ಮನೆಯವರ ಜತೆ ಭಿನ್ನಾಭಿಪ್ರಾಯ ಹೊಂದುವುದಲ್ಲದೆ ಮತ್ಯಾವ ಆಸೆ ನನಗಿರಲಿಲ್ಲ. ಆಗ ನನಗೆ ಯಾವ ಸೂಕ್ಷ್ಮಗಳು ಅರ್ಥವಾಗದಿದ್ದರೂ, ಅವರ ಪುಸ್ತಕಗಳನ್ನು ಓದಬೇಕು ಮತ್ತು ಅವರ ಮನಸ್ಸಿನೊಳಗೆ ಹೋಗಿ, ಸೋವಿಯತ್ ಯೂನಿಯನ್ನನ್ನು ಬಹಳವಾಗಿ ಮೆಚ್ಚಿ ಅವರು ಬದುಕಿದ್ದ ಆ ಕಾಲವನ್ನು ಅರ್ಥಮಾಡಿಕೊಳ್ಳಬೇಕು ಎಂದು ಅನಿಸುತ್ತಿತ್ತು. ಅವರ ಈ ಮೆಚ್ಚುಗೆಯೇ ಅವರನ್ನು ಸೈದ್ಧಾಂತಿಕವಾಗಿ ಕುಟುಂಬದ ಹಾಗೂ ಸಮುದಾಯದಲ್ಲಿ ವಿಚಿತ್ರ 'ಹೊರಗಿನವ'ರನ್ನಾಗಿ ಮಾಡಿತ್ತು, ಮತ್ತು ಆವರೆಲ್ಲರೂ ಕೊನೆಯವರೆಗೂ ಮೊಂಡು ಬಲಪಂಥೀಯರಾಗಿ ಉಳಿದುಬಿಟ್ಟಿದ್ದಾರೆ. ಅಜ್ಜನಂತಿರುವುದೇ ನನಗೆ ಒಂದು ರೀತಿಯ ಬಹಳ ಮಜಾ ಅನಿಸುತ್ತಿತ್ತು. ಈಗಲೂ ಕೂಡ ಹಾಗೇ ಇದೆ.

ನಮ್ಮ ಸೋವಿಯೆತ್ ಪುಸ್ತಕಗಳು


ರಷ್ಯನ್ ಸಾಹಿತ್ಯ ಸಂಗ್ರಹವನ್ನು ನನಜ್ಜ ಹೇಗೇ ಶುರುಮಾಡಿದರು ಎನ್ನುವುದು ನನಗೆ ಗೊತ್ತಿಲ್ಲ. ಕೆಲವು ಪುಸ್ತಕಗಳು ಅವರ ಸುಂದರ ಬರಹಗಳಲ್ಲಿ ಅವರ ಹೆಸರು ಮತ್ತು ವಿಳಾಸಗಳನ್ನು ಹೊಂದಿದ್ದವು; ಅವು ಅವರದ್ದೇ ಬರಹವೋ ಅಥವಾ ಅವರ ಮಕ್ಕಳಲ್ಲೊಬ್ಬರದೋ ಎಂದು ನಾನು ಖಂಡಿತವಾಗಿ ಹೇಳಲಾರೆ. ಅದೂ ಅಲ್ಲದೇ, ಆ ಪುಸ್ತಕಗಳನ್ನು ಎಲ್ಲಿಂದ ಕೊಂಡು ತಂದರು ಎನ್ನುವ ಯಾವ ಸುಳಿವೂ ಅಲ್ಲಿ ಸಿಗಲಿಲ್ಲ. ಅವರು ಮೈಸೂರಿನಲ್ಲಿ ವೈದ್ಯಶಾಸ್ತ್ರ ಅಧ್ಯಯನ ಮಾಡಿದ್ದರು ಮತ್ತು ಕೆಲವು ಬಾರಿ (ಆಗಿನ) ಮದ್ರಾಸಿಗೆ ಭೇಟಿ ಕೊಟ್ಟಿರಬಹುದು. ತಮ್ಮ ಮಕ್ಕಳ ಮದುವೆಯಾಗಿ ಬೆಂಗಳೂರಿಗೆ ತೆರಳಿದ್ದಾಗ ಅಲ್ಲಿಗೆ ಹೋಗಿರಬಹುದು, ಆದ್ದರಿಂದ ಆ ನಗರಗಳಲ್ಲಿ ಈ ಪುಸ್ತಕಗಳು ಅವರಿಗೆ ಸಿಕ್ಕಿರಬಹುದು ಎಂದು ನಾನು ಊಹಿಸಬಹುದು. ಸೋವಿಯತ್ ಪುಸ್ತಕಗಳ ಬಗೆಗಿನ ಆವರ ವಿಶೇಷ ಆಸಕ್ತಿಯ ಬಗ್ಗೆ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಪ್ರತಿ ಬಾರಿಯೂ ನಾನು ಒಂದು ಪುಸ್ತಕವನ್ನು ಆರಿಸಿಕೊಂಡಾಗ, ಮೊದಲು ಹಾಗೆ ಆರಿಸಿದಾಗ ನಾನು ಹತ್ತು ವರ್ಷದವಳಾಗಿದ್ದಿರಬಹುದು, ಅವರು ಅದನ್ನು ಎಲ್ಲಿ ಓದಿದ್ದಿರಬಹುದು ಎಂದು ನಾನು ಕಲ್ಪಿಸಿಕೊಳ್ತಾ ಇದ್ದೆ. ಅವರು ಟಾಲ್‌ಸ್ಟಾಯ್‌ನ ಕೆಲವು ಪುಟಗಳನ್ನು ಕ್ಲಿನಿಕಿನಲ್ಲಿ ಮುಗಿಸಿರಬಹುದೆ, ರೋಗಿಗಳ ಮತ್ತು ಅವರನ್ನು ಭೇಟಿ ಮಾಡುತ್ತಿದ್ದ ಸಂಗಾತಿಗಳ ಜತೆಯಲ್ಲಿರಬಹುದೆ? ತೆಳ್ಳಗಿದ್ದ ಪುಷ್ಕಿನ್ನಿನ ಕಾವ್ಯವನ್ನು ಸಂಜೆ, ಮಲಗುವ ಸ್ವಲ್ಪ ಮುಂಚೆ ಓದಿದ್ದಿರಬಹುದೆ? ವೈದ್ಯ ವೃತ್ತಿಯ ಕೆಲಸ, ಕೂಡು ಕುಟುಂಬದ ಬೇಡಿಕೆಗಳು, ಕಾಫಿ ತೋಟದ ನಿರ್ವಹಣೆ ಮತ್ತು ನಮ್ಮ ಜಿಲ್ಲೆಯಲ್ಲಿ ಆಗ ಪ್ರಚಲಿತವಿದ್ದ ಮತ್ತು ಈಗಲೂ ಇರುವುದಕ್ಕೆ ಪೂರ್ಣವಾಗಿ ವಿರುದ್ಧವಾಗಿದ್ದ ರಾಜಕೀಯ ಸಿದ್ಧಾಂತದ ಕೆಲಸಗಳ ನಡುವೆ, ಈ ಸಾಹಿತ್ಯಕ್ಕೆ ಅವರು ಮೊರೆ ಹೋದರೇ ಎಂದು ಅಚ್ಚರಿಪಡುತ್ತಾ ಈಗಲೂ ಅದರ ಬಗ್ಗೆ ಊಹಿಸುತ್ತಾ ಇರುತ್ತೇನೆ.

ಭಾರತದೆಲ್ಲೆಡೆಯ ಓದುಗರು, ಹಲವಾರು ತಲೆಮಾರುಗಳ ಓದುಗರು ಯುಎಸ್‌ಎಸ್‌ಆರ್‌ನ ರಾದುಗ ಪ್ರೋಗ್ರೆಸ್, ಮಿರ್ ಮುಂತಾದ ಪ್ರಕಾಶನ ಸಂಸ್ಥೆಗಳ ಪುಸ್ತಕಗಳೊಂದಿಗೆ ಬೆಳೆದಿರಬಹುದು. 1930ರಿಂದ ಆರಂಭವಾಗಿ ತೀರ ಇತ್ತೀಚೆಗೆ ಸೋವಿಯತ್ ಯೂನಿಯನ್ನಿನ ಪತನವಾಗುವವರೆಗೂ ಪ್ರತಿಯೊಂದು ಪುಸ್ತಕದ ಶೀರ್ಷಿಕೆಯ ವಿಶೇಷತೆಯೆಂದರೆ ಪ್ರತಿಯೊಂದೂ ಸಚಿತ್ರವಾಗಿದ್ದು ಇಂಗ್ಲಿಷ್ ಅಲ್ಲದೇ ಎಲ್ಲಾ ಭಾರತೀಯ ಭಾಷೆಗಳಲ್ಲೂ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುತ್ತಿದ್ದವು. ಅವುಗಳ ಅಗ್ಗದ ಬೆಲೆಯು ಅದರ ಜನಪ್ರಿಯತೆಗೆ ಪ್ರಮುಖ ಕಾರಣವಾಗಿತ್ತು. ಅದು ಮತ್ತು ಪುಸ್ತಕಗಳ ವಿತರಣಾ ಜಾಲ ಎಷ್ಟು ಚೆನ್ನಾಗಿದ್ದವು ಎಂದರೆ ಸಣ್ಣ ಪಟ್ಟಣಗಳಲ್ಲಿಯೂ ಮತ್ತು ಹಳ್ಳಿಗಳಲ್ಲಿಯೂ ಅವು ದೊರೆಯುತ್ತಿದ್ದವು. ಅದಲ್ಲದೇ ಪುಸ್ತಕಗಳೇ ಜನರೊಂದಿಗೆ ಮಾತನಾಡುತ್ತಿದ್ದವು.

ಕರ್ನಾಟಕದಲ್ಲಿ, ಈ ಪುಸ್ತಕಗಳ ಪ್ರಮುಖ ವಿತರಕರು ನವಕರ್ನಾಟಕ ಪ್ರಕಾಶನ ಸಂಸ್ಥೆಯಾಗಿದ್ದು, ಅದು ಪುಸ್ತಕಗಳನ್ನು ದಾಸ್ತಾನು ಮಾಡುತ್ತಾ ಎಲ್ಲಾ ಜಿಲ್ಲೆಗಳಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುತ್ತಾ ಸಾಗುತ್ತಿತ್ತು. ಅದರಿಂದಾಗಿ ಮಡಿಕೇರಿಯ ನಮ್ಮ ಮನೆಯಲ್ಲಿನ ಆ ಪುಸ್ತಕಗಳ ಸಂಗ್ರಹಕ್ಕೆ ಇನ್ನಷ್ಟು ಸೇರಿಸಲು ಸಾಧ್ಯವಾಯಿತು, ಏಕೆಂದರೆ ನಾನು ಬೆಳೆಯುವಾಗ ಮಡಿಕೇರಿಯಲ್ಲಿ ಪುಸ್ತಕದ ಅಂಗಡಿಗಳು ಇರಲಿಲ್ಲ. ಈಗಲೂ ಅಲ್ಲಿ ಪುಸ್ತಕದಂಗಡಿಗಳು, ಕೆಲವು ವೃತ್ತಪತ್ರಿಕೆಗಳ ಅಂಗಡಿಗಳನ್ನು ಬಿಟ್ಟರೆ, ಇಲ್ಲ. ಆ ಪತ್ರಿಕಾ ಅಂಗಡಿಗಳಲ್ಲಿ ಕೆಲವು ಕೀಳು ಕಾದಂಬರಿಗಳು ಸಿಗಬಹುದಷ್ಟೆ. ಏಕಮಾತ್ರ ಮಗು ಹಾಗೂ ಅಪಾರ ಓದುವ ಆಸಕ್ತಿ ಉಳ್ಳವಳಾಗಿ ಈ ಎರಡು ಪ್ರಬಲ ಸಂಯೋಜನೆಯಿಂದಾಗಿ ನಮ್ಮ ಮನೆಯಲ್ಲಿದ್ದ ನನ್ನ ವಯಸ್ಸಿಗೇ ತಕ್ಕ ಎಲ್ಲಾ ಪುಸ್ತಕಗಳನ್ನು ಓದಿ ಮುಗಿಸಿದ್ದೆ. ನನ್ನ ಓದಿನ ಪಟ್ಟಿಯನ್ನು ಮರುತುಂಬಿಸಿಕೊಳ್ಳಲಿಕ್ಕಾಗಿ ಹಲವಾರು ಗಂಟೆಗಳ ದೂರದಲ್ಲಿರುವ ದೊಡ್ಡ ನಗರಗಳಿಗೆ ನನ್ನ ವಾರ್ಷಿಕ ಪ್ರವಾಸವು ಇನ್ನೂ ತಿಂಗಳುಗಟ್ಟಲೆ ದೂರವಿತ್ತು. ಆಗ ನವಕರ್ನಾಟಕದ ಪುಸ್ತಕ ಪ್ರದರ್ಶನಗಳು ನನಗೆ ಬಹಳ ಸಹಾಯವಾಗುತ್ತಿತ್ತು, ನನಗೆ ಬಹಳ ಕಾಲ ಓದಲು ಸಾಧ್ಯವಾಗುತ್ತದೆ ಎಂಬ ಕಾರಣಕ್ಕಾಗಿ, ಆಸಕ್ತಿದಾಯಕ ಹಾಗೂ ದಪ್ಪ ಇರುವ ಪುಸ್ತಕಕ್ಕಾಗಿ ನಾನು ಅಲ್ಲಿ ಹುಡುಕುತ್ತಿದ್ದೆ, ಹಾಗಾಗಿ, ತೆಳ್ಳಗಿರುವ ಪುಷ್ಕಿನ್ನಿನ ಗದ್ಯ ಕೃತಿಗಳ ಸಂಗ್ರಹವನ್ನು ಅನ್ನ ಕರೆನಿನ ಹಿಂದಕ್ಕೆ ತಳ್ಳಿತ್ತು. ಇಪ್ಪತ್ತು ವರ್ಷಗಳ ಹಿಂದೆ, ಅತ್ಯಂತ ದಪ್ಪ ಪುಸ್ತಕಗಳು ಹತ್ತು ರೂಪಾಯಿ, ಹದಿನೈದು ರೂಪಾಯಿ ಇನ್ನೂ ಹೆಚ್ಚೆಂದರೆ ಐವತ್ತು ರೂಪಾಯಿಗೆ ಸಿಗುತ್ತಿತ್ತು, ಎಂಬುದು ಬಹಳ ಉಪಯುಕ್ತ ಸಂಗತಿಯಾಗಿತ್ತು.

ಈ ರೀತಿಯಾಗಿ ನನ್ನ ಹತ್ತನೇ ವಯಸ್ಸಿಗೇ ಮ್ಯಾಕ್ಸಿಂ ಗಾರ್ಕಿಯ 'ತಾಯಿ' (ಮದರ್) ನನ್ನ ಪುಸ್ತಕದ ಕಪಾಟಿನಿಂದ ಕೆಳಕ್ಕೆ ಬಂತು. ಗ್ರಂಥಾಲಯದಲ್ಲಿದ್ದ ಎರಡು ಸಂಪುಟಗಳಲ್ಲಿ, ಒಂದು ಗಟ್ಟಿ ಹೊದಿಕೆಯ ತಿಳಿ ಹಳದಿಯ ಬಣ್ಣದ್ದಾಗಿತ್ತು. ಅದನ್ನು ಆರಿಸಿಕೊಂಡಿದ್ದೆ. ಅದರ ಮುಖಪುಟದಲ್ಲಿ ಉದ್ದ ಸ್ಕರ್ಟ್, ಕೋಟ್ ಮತ್ತು ಸ್ಕಾರ್ಫ್ ತೊಟ್ಟ ಬಾಬುಷ್ಕ (ಅಜ್ಜಿ) ದೊಡ್ಡ ಪೆಟ್ಟಿಗೆಯೊಂದಿಗಿರುವ ಚಿತ್ರವಿತ್ತು. ಬಹಳ ನಂತರ ಯುಎಸ್‌ಎಸ್‌ಆರ್‌ನ ಭವಿಷ್ಯದತ್ತ ಅವಳು ನೋಡುತ್ತಿದ್ದಾಳೆ ಎಂದನಿಸಿತ್ತು. ಆ ನಂತರ ಗ್ರಂಥಾಲಯದಲ್ಲಿದ್ದ ಮಹಾನ್ ಘಟಾನುಘಟಿಗಳ ಪುಸ್ತಕಗಳತ್ತ ಹೋದೆ. ಮುಂದಿನ ಕೆಲವು ವರ್ಷಗಳ ಕಾಲ ನನ್ನ ವಯಸ್ಸಿಗೆ ತಕ್ಕಂಥ – ಹಾರ್ಡಿ ಬಾಯ್ಸ್, ನ್ಯಾನ್ಸಿ ಡ್ರೂ, ಮಿಲ್ಸ್ ಮತ್ತು ಬೋನ್ಸ್ ಹೇರಳವಾಗಿದ್ದವು. ಸಿಡ್ನಿ ಶೆಲ್ಡನ್, ಜಾಕಿ ಕಾಲಿನ್ಸ್ – ಪುಸ್ತಕಗಳ ಜತೆ ಸರಸವಾಡಿದೆ. ಆದರೆ ಸೋವಿಯತ್ ಪುಸ್ತಕಗಳು ಯಾವಾಗಲೂ ನನ್ನನ್ನು ಹಿಡಿದೆಳೆಯುತ್ತಿದ್ದವು.




***ಅನುವಾದ: ಟಿ. ಸುರೇಂದ್ರ ರಾವ್***

***(ಕೃಪೆ: ಲೆಫ್ಟ್ ವರ್ಡ್ ಬ್ಲಾಗ್, ಮೇ 23, 2025)***

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**